A Circumnavigation to the world of Dance and Performing Arts : A complete Journal

RNI No :KARKAN/2009/29752

ISSN No : 2321-2519

ಜ್ಯೇಷ್ಠ–ಭಾದ್ರಪದ 2014

ಸಂಪುಟ : 8 ಸಂಚಿಕೆ :3,4

ಸಂಪಾದಕರು : ಮನೋರಮಾ ಬಿ.ಎನ್.
ಪ್ರಸರಣಾಧಿಕಾರಿ : ವಿಷ್ಣುಪ್ರಸಾದ್ ನಿಡ್ಡಾಜೆ
ಕಛೇರಿ ನಿರ್ವಹಣೆ : ನಾರಾಯಣ ಭಟ್ ಬಿ.ಜಿ
ನೆರವು : ಸಾವಿತ್ರಿ ಭಟ್ ಮತ್ತು ಸನ್ಮಿತ್ರರು

ಆವರಣ ಪುಟ : ಎನ್.ವಿ.ವೈದ್ಯ, ಮಂಗಳೂರು
ಪ್ರಕಾಶನ : ಶ್ರೀ ಸಾನ್ನಿಧ್ಯ ಪ್ರಕಾಶನ (ರಿ.),
ಮಡಿಕೇರಿ

## ಗ್ರೀಷ್ಮ ಗಾಂಭೀರ್ಯ– ವರ್ಷ ವೈಭವ

## ಅಂತರಂಗ.....

• ಮಂಜೀರ ....................2
• ದೀವಟಿಗೆ : ಸಾರ್ಥಕವಾದ ‘ನಾಟ್ಯಚಿಂತನ’.–ನಾಟ್ಯಶಾಸ್ತ್ರದ ಕಾರ್ಯಾಗಾರ....................4
• ದೀವಟಿಗೆ : ಶ್ರೀಭಾರತೀ ಪ್ರಕಾಶನದಿಂದ ಗುರುಗ್ರಂಥಮಾಲಿಕಾ– 60ದಿನದಲ್ಲಿ 60 ಪುಸ್ತಕ.........15
• ಶೋಧಭ್ರಮರಿ:ಪ್ರಾಚೀನಭಾರತದಲ್ಲಿ ಕಲಾವೈವಿಧ್ಯ ಮತ್ತು ವಾತ್ಸಾಯನರ ಕಾಮಸೂತ್ರ : ಪ್ರಸ್ತುತತೆ...17
• ಅಕ್ಷರಭ್ರಮರಿ : ಸಾರಸ್ವತಲೋಕಕ್ಕೆ ಹೊಸ ಕೊಡುಗೆ : ‘ಮಹಾಮುನಿ ಭರತ’ ಪುಸ್ತಕ....................26
• ಹಸ್ತ ಮಯೂರಿ : ಕೂರ್ಮಹಸ್ತ....................28
• ನಿಮ್ಮ ಬರೆಹ ನಮ್ಮ ಓದು ....................28,36
• ಲಲಿತಲಹರಿ : ನಾಟ್ಯಶಾಸ್ತ್ರಕಥನಮಾಲಿಕೆ....................29
• ಲೋಕ ಭ್ರಮರಿ : ಶ್ರೀರಾಮಾಯಣ ಮಹಾಭಾರತದಲ್ಲಿ ಪಿತಾಪುತ್ರ ಸಂಬಂಧ....................34
• ಅಂಗಳದ ಮಾತು ತಿಂಗಳ ಚರ್ಚೆ ....................35
• Guidelines for submitting the Dance Research Articles....................36

All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own,not of Noopura Bhramari.

Visit our website : **www.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ–ವಿವರ–ವಿಚಾರ–ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು
ಪ್ರತೀ ಎರಡನೇ ತಿಂಗಳ 1ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.

## ಮಂಜೀರ

ಬೆಳಗಾವಿಯಲ್ಲಿ ನಡೆಯುತ್ತಿರುವ ಕನ್ನಡ–ಮರಾಠೀ ಪ್ರಾಂತಗಳ ಗಡಿತೀರ್ಮಾನದ ಕಿಚ್ಚು–ಕದನ, ಇತ್ತ ಕಾಸರಗೋಡು ಕರ್ನಾಟಕಕ್ಕೆ ಸೇರಿದ್ದು ಎಂಬ ಹಲವು ದಶಕಗಳ ಚಿಂತನೆ–ಹೋರಾಟ. ಅಂತೆಯೇ ನೆರೆಯ ಆಂಧ್ರ, ತಮಿಳ್ನಾಡು ಗಡಿ ಪ್ರದೇಶಗಳಲ್ಲಿ ನೆಲಕ್ಕಾಗಿ, ನೀರಿಗಾಗಿ ನಡೆಯುತ್ತಲೇ ಇರುವ ರಾಜಕೀಯ ಪ್ರೇರಿತ ಕಾದಾಟಗಳು...ಹೀಗೆ ಕರ್ನಾಟಕದ ಜನ ತಮ್ಮ ತಾಯ್ನೆಲದ ಪ್ರೀತಿಯಿಂದ, ಆಯಾಯ ಬೇರೆ ಪ್ರಾಂತಗಳ ಜನ ಅವರವರ ಭಾಷೆ–ನಡೆ–ನುಡಿಯ ಮೇಲಿನ ಮಮಕಾರದಿಂದ ಒಂದಲ್ಲ ಒಂದು ವಿಷಯಕ್ಕೆ ಕ್ಯಾತೆ, ರೊಳ್ಳೆ ತೆಗೆಯುತ್ತಾ, ತೆಗೆಸುತ್ತಲೇ ಇವೆ. ಸ್ವಾತಂತ್ರ್ಯಪೂರ್ವಕ್ಕೆ ರಾಜರ ಆಳ್ವಿಕೆಯಲ್ಲಿ ಅಷ್ಟಾಗಿ ಕಾಡದ ಈ ತೊಂದರೆ ಉಲ್ಬಣಗೊಳ್ಳಲು ಕಾರಣ– ಅವೈಜ್ಞಾನಿಕವಾಗಿ ಭಾಷೆಯನ್ನಾಧರಿಸಿ ರಾಜ್ಯವಿಂಗಡಣೆ ಮಾಡಿದ್ದು ಎಂದು ಅದೆಷ್ಟೋ ಚಿಂತಕರು ಇದೀಗ ಕೈಕೈ ಹಿಸುಕಿಕೊಳ್ಳುವುದೂ ಇದೆ. ಹಾಗಂತ ಆವರೆಗೂ ಭಾಷೆಯನ್ನಾಧರಿಸಿ ಇಂತಹ ತೊಂದರೆಗಳು, ಒಳಜಗಳಗಳು ಇರಲೇ ಇಲ್ಲವೆಂದಲ್ಲ; ಇದ್ದರೂ ಅವುಗಳ ಸಂಖ್ಯೆ ಎಲ್ಲೋ ಒಂದೆರಡು ಎಂಬಷ್ಟಿರಬಹುದು. ಇದರ ನಡುವೆಯೇ ಇತ್ತೀಚೆಗೆ ಸುಪ್ರೀಂಕೋರ್ಟ್ ಮಾತೃಭಾಷೆಯನ್ನು ಪ್ರಾಥಮಿಕ ಶಿಕ್ಷಣಕ್ಕೆ ಕಡ್ಡಾಯ ಮಾಡಬೇಕಿಲ್ಲ ಎಂದು ಆದೇಶ ಹೊರಡಿಸುವ ಹೊತ್ತಿಗೆ ಹಲವು ವಿಷಯಗಳು ಕಾಡತೊಡಗಿದವು.

ಕನ್ನಡ ಭಾಷಾ ಮಾಧ್ಯಮದ ಕೈತುತ್ತು ಉಂಡು ಬೆಳೆದ ದೇಹ ಮತ್ತು ಆತ್ಮ ಸ್ವಾಭಾವಿಕವಾಗಿ ಮಾತೃಭಾಷೆಯ ನಂಟಿನತ್ತಲೇ ಮುಖ ಮಾಡುವುದು ಸಹಜ. ಹಾಗೆ ನೋಡಿದರೆ 'ವಿದ್ಯಾಭ್ಯಾಸದ ಕಲಿಕೆಯ ಮಾಧ್ಯಮವಾಗಿ ಕನ್ನಡ'– ಎಂಬುದು ಹಲವು ಆಯಾಮದ ಚರ್ಚೆಯ ವಿಷಯ. ಆದರೆ ಅದೇ ವಿಷಯವನ್ನು ನಮ್ಮ ಕಲಾವರಣದೊಳಗಿನ ಪರಿಸ್ಥಿತಿಗೆ ಸಮಕಾಲೀನವಾಗಿ ಕಂಡುಕೊಳ್ಳುವಾಗ 'ವಿದ್ಯಾಭ್ಯಾಸದ ಕಲಿಕೆಯಲ್ಲಿ ಕನ್ನಡ' ಮತ್ತು 'ಕಲಾಮಾಧ್ಯಮವಾಗಿ ಕನ್ನಡ'– ಈ ಎರಡೂ ವಿಷಯವನ್ನು ಏಕಕಾಲಕ್ಕೆ ಜಿಜ್ಞಾಸೆಗೊಳ ಪಡಿಸುವುದು ಕೊಂಚ ದೀರ್ಘವಾಗಬಹುದು. ಹಾಗಾಗಿ ಕಲಾನಿಯತಕಾಲಿಕೆಯಾಗಿ 'ಕಲೆಯಲ್ಲಿ ಮಾತೃ ಭಾಷೆಯ ಬಳಕೆ ಹಾಗೂ ಮಿತಿ–ಸಾಧ್ಯತೆಗಳನ್ನೂ ಮಾತ್ರ ವಿವೇಚಿಸುವ ಕರ್ತವ್ಯಕ್ಕೆ ಇಲ್ಲಿ ಮುಂದಾಗುತ್ತಿದ್ದೇವೆ.

ಸಂಗೀತ, ನೃತ್ಯ, ಚಿತ್ರಕಲೆ, ಶಿಲ್ಪ.. ಹೀಗೆ ಯಾವುದೇ ಕಲೆಯಾಗಿರಲಿ ಅದಕ್ಕೆ ಭಾಷೆಯ ಹಂಗಿಲ್ಲ. ಯಾವುದೇ ಭಾಷೆಗಾದರೂ ಕಾಲಾಂತರದಲ್ಲಿ ಅಳಿವಿರಬಹುದು. ಆದರೆ ಕಲೆಯೆನ್ನುವುದು ಅನಂತ, ಅನಾದಿ, ಅಜರಾಮರ. ಅದರದ್ದು ವಿಶ್ವಭಾಷೆ. ಆದ್ದರಿಂದಲೇ ಅದು ದೇಶ–ಭಾಷೆಗಳನ್ನೂ ಮೀರಿ ನಿಂತಿದೆ, ಬೆಳೆದಿದೆ, ಎಲ್ಲರನ್ನೂ ಎಲ್ಲ ಕಾಲಕ್ಕೂ ಸೆಳೆದಿದೆ, ಸೆಳೆಯುತ್ತಲೇ ಇದೆ. ಅದೇ ಕಲೆಯ ಶಕ್ತಿ. ಕಲೆಯೊಂದನ್ನುಳಿದು ಬೇರಾವ ಮಾಧ್ಯಮಕ್ಕೂ ಈ ಅಪೂರ್ವ, ವಿಶಿಷ್ಟ, ಅಸಾಧಾರಣ ಶಕ್ತಿಯಿಲ್ಲ. ಅಷ್ಟಕ್ಕೂ ಭಾಷೆಯ ಹಂಗು ಪ್ರಥಮತಃ ಬೇಕಿರುವುದು ಶಾಬ್ದಿಕ ಸಂವಹನಕ್ಕೆ. ಆದ್ದರಿಂದಲೇ ಕಲೆಯ ಭಾಷೆಯೇ ಬೇರೆ ಎಂಬುದಾಗಿ ನಂತರದಲ್ಲಿ ತತ್ತ್ವ, ಮೀಮಾಂಸೆ, ಸಿದ್ಧಾಂತಗಳು ಬೆಳೆದಿವೆ. ಅದಕ್ಕೆ ಭಾಷೆಯ ಹಂಗನ್ನು ಒಳಪಡಿಸುವುದು ಮೂರ್ಖತನದ ಕೆಲಸ ಜೊತೆಗೆ ಕಲೆಯನ್ನು ಭಾಷೆಯ ಮಿತಿ–ಬಂಧನದೊಳಗೆ ಸೇರಿಸುವುದು ಸರ್ವಥಾ ಸಾಧುವಲ್ಲ ಮತ್ತು ಸಾಧ್ಯವೂ ಇಲ್ಲ.

ಹಾಗಾದರೆ ಕಲೆಯೆನ್ನುವುದು ಆಯಾಯ ದೇಶಭಾಷೆಗಳ ಆವರಣದಲ್ಲಿ ಬೆಳೆದಿರುವುದು, ಆಯಾಯ ಸಂಸ್ಕೃತಿಯ ಸಂಕೇತವಾಗಿರುವುದು, ಯಾವುದೇ ಭಾಷೆಯ ಅವಿಭಾಜ್ಯ ಅಂಗವಾಗಿರುವುದು ಹೇಗೆ?– ಎಂಬ ಈ ಪ್ರಶ್ನೆಗೆ ಸರಳವಾಗಿಯೂ ಉತ್ತರ ಕೊಡಬಹುದು; ಅಂತೆಯೇ ಪುಟಗಟ್ಟಲೆ ಪ್ರಬಂಧವನ್ನೂ ಬರೆಯಬಹುದು. ಕಲಾಜಗತ್ತಿನ ಇತಿಹಾಸ, ಮೀಮಾಂಸೆಗಳ ಅಧ್ಯಯನದಲ್ಲಿ ಇದಕ್ಕೆ ಉತ್ತರ ವಿಷದವಾಗಿರುತ್ತದೆ. ಸೂಕ್ಷ್ಮವಾಗಿ ಹೇಳುವುದಾದರೆ ದೇಶೀ ಸಂಸ್ಕೃತಿಗೆ ಅಳವಟ್ಟು ಅದೆಷ್ಟೋ ನೃತ್ಯ, ಸಂಗೀತ, ವಾದ್ಯ, ಚಿತ್ರ ಮಾಧ್ಯಮಗಳು ಬೆಳೆದಿವೆ. ನಿಜ. ಆದರೆ ಅವು ಏಕಕಾಲಕ್ಕೆ ಆಯಾಯ ಸಂಸ್ಕೃತಿಯ, ಭಾಷೆಯ ಅಂಗವಾಗಿರುವ ಹೊತ್ತಿಗೇ ಆ ಆವರಣದಿಂದಾಚೆಗೂ ಬೆಳೆದು ಕೊಡುಕೊಳ್ಳುವಿಕೆಗಳೊಂದಿಗೆ ಶ್ರೀಮಂತವಾಗಿದೆ.

ಶಿಕ್ಷಣ ಮಾಧ್ಯಮದಂತೆ ಕಲೆಗೂ ಮಾತೃಭಾಷೆ ಎಂಬ ಸ್ವರೂಪವೇ ಇಲ್ಲ. ಕಲೆಯಲ್ಲಿ ಭಾಷೆ ಮುಖ್ಯವಲ್ಲ. ಭಾವ ಮುಖ್ಯ. ಸಂಗೀತದಲ್ಲಿ ರಾಗಕ್ಕೆ ತಕ್ಕಂತೆ ಭಾಷೆ ಬದಲಾಗುವುದನ್ನು ಎಲ್ಲಾದರೂ ಕಂಡಿದ್ದೀರಾ? ಅಥವಾ ಭಾಷೆಗೆ ತಕ್ಕಂತೆ ರಾಗ ಹೆಣೆಯುವುದಿದೆಯಾ? ಭಾಷೆಗೆ ಒಗ್ಗುವ/ಒಗ್ಗದ ರಾಗ ಎಂಬುದನ್ನು ಎಲ್ಲಾದರೂ ಕೇಳಿದ್ದೀರಾ? ತೀರಾ ಭಿನ್ನ ಸನ್ನಿವೇಶಗಳಲ್ಲಿ ಅಂದರೆ ಪಾಶ್ಚಾತ್ಯ, ಭಾರತೀಯ ಸಂಗೀತ ಸಂಪ್ರದಾಯಗಳಲ್ಲಿ ಇಂಗ್ಲೀಷ್ ಮತ್ತು ಭಾರತದ ದೇಶೀಯ ಭಾಷೆಗಳು ಎಂಬ ಭಿನ್ನತೆ ಬಿಟ್ಟರೆ (ಅದೂ ಈಗ ಕಡಮೆಯಾಗಿದೆ) ಸಂಗೀತದ ಮೂಲ ಅಭ್ಯಾಸದಲ್ಲಿರುವುದು ಭಾಷೆಯಲ್ಲ. ಬದಲಾಗಿ ಸ್ವರಕಲ್ಪನೆಗಳು ಮಾತ್ರ. ಅಂತೆಯೇ ನೃತ್ಯದಲ್ಲಿ ಚಲನೆಗಳು, ಭಾವನೆಗಳು ಮಾತ್ರ ಮುಖ್ಯ. ಅವರವರ ಸಂಸ್ಕೃತಿ ಸಂಪ್ರದಾಯಕ್ಕೆ ತಕ್ಕಂತೆ, ಸಂವಹನದ ಅಗತ್ಯ, ಚೆಂದಕ್ಕೆ ತಕ್ಕಂತೆ ವೇಷಭೂಷಣ, ಸಾಹಿತ್ಯರಚನೆ ಕಂಡುಬಂದಿವೆಯಷ್ಟೇ. ಉದಾಹರಣೆಗೆ: ಸಾಮಾನ್ಯ ಜನಕ್ಕೆ ಹತ್ತಿರವಾಗಿ ಸಂದೇಶ, ಹಿತೋಕ್ತಿಗಳನ್ನು ಹೇಳಲು ದಾಸರು, ವಚನಕಾರರು ಕರ್ನಾಟಕದಲ್ಲಿ ಕನ್ನಡ ಬಳಸಿದಂತೆ; ಆಲಾಪನೆ, ಸ್ವರಕಲ್ಪನೆಗೆ ಹೊಂದಲು ಅನುಕೂಲವಾಗುವ ತೆಲುಗನ್ನು ತ್ಯಾಗರಾಜರಾದಿಯಾಗಿ ಅನೇಕ ವಾಗ್ಗೇಯಕಾರರು ಕೃತಿಗಳಲ್ಲಿ ಬಳಸಿದಂತೆ.

ಆದರೆ ಸಂಗೀತ ಮತ್ತು ನೃತ್ಯಮಾಧ್ಯಮದ ಅಭಿವ್ಯಕ್ತಿಯಲ್ಲಿ ಭಾಷೆಯೊಂದರ ಬಳಕೆಯನ್ನು ಕಂಡೇ ಕಾಣುತ್ತೇವಲ್ಲಾ? ಅದು ಆ ಕಲಾಮಾಧ್ಯಮವನ್ನು ಆಳುವುದಿಲ್ಲವೇ? ಎಂದರೆ –ಇಲ್ಲಿ 'ಭಾಷೆಯ ಬಳಕೆ' ಯನ್ನು ಕಾಣುವುದು ಅದರ ಸಾಹಿತ್ಯ ಅಥವಾ ಅದರ ಅಭಿವ್ಯಕ್ತಿಗೆ ಅವಲಂಬಿಸುವ ಕಾವ್ಯದ ರೂಪದಲ್ಲಿ. ಹಾಗಂತ ಈ ಸಾಹಿತ್ಯದ ಭಾಷೆ ಕಲಾಮಾಧ್ಯಮವನ್ನು ಆಳುತ್ತದೆ ಎನ್ನುವ ಮಾತೇ ಸುಳ್ಳು. ಇದ್ದರೂ ಇಂತಹುದೊಂದು ಗ್ರಹಿಕೆಯಿರುವುದು ಮನುಷ್ಯರ/ಮೂಲಭೂತವಾದಿಗಳ ಮನಸ್ಸಿನಲ್ಲಿಯೇ ಹೊರತು ಕಲೆಯ ಸ್ವರೂಪ–ರೂಪವನ್ನು ಆಸ್ವಾದಿಸುವ ಸಹೃದಯನಲ್ಲಿ ಅಲ್ಲ. ಕಲೆ ತನ್ನ ಸ್ವರೂಪದ ಅಭಿವ್ಯಕ್ತಿಗೆ ಒಂದೊಂದು ರೂಪವನ್ನು ತಾಳುತ್ತದೆ. ಒಂದೊಂದು ಆವರಣವನ್ನು ಅಪ್ಪಿಕೊಳ್ಳುತ್ತದೆ. ಉದಾಹರಣೆಗೆ ಕರ್ಣಾಟಕ ಸಂಗೀತದ ಅಭಿವ್ಯಕ್ತಿಯಲ್ಲಿ ತೆಲುಗು, ತಮಿಳು, ಕನ್ನಡ, ಸಂಸ್ಕೃತ ಭಾಷೆಗಳ ಸಾಹಿತ್ಯರೂಪ ಹೆಚ್ಚು ಕಂಡುಬರುತ್ತದೆ. ಅದೇ ಹಿಂದೂಸ್ಥಾನಿ ಸಂಗೀತದಲ್ಲಿ ಹಿಂದಿ, ಮರಾಠಿ ಇತ್ಯಾದಿ ಉತ್ತರ ಭಾರತದ ಭಾಷೆಗಳ ಸಾಹಿತ್ಯರೂಪ ಹೆಚ್ಚು ಗೋಚರಿಸುತ್ತದೆ. ಅಂತೆಯೇ ನೃತ್ಯವೂ ಕೂಡಾ. ಆಯಾಯ ಪ್ರಾಂತೀಯ ಚಲನೆಗಳಲ್ಲಿ ರೂಪ ತಳೆದ ನೃತ್ಯಗಳು ಆಯಾಯ ದೇಶೀಭಾಷೆಗಳನ್ನು ತನ್ನ ಸ್ವರೂಪಕ್ಕೆ ತಕ್ಕಂತೆ ರೂಪಿಸಿಕೊಳ್ಳುತ್ತದೆ. ಇದು ರೂಪ–ಸ್ವರೂಪದಲ್ಲಿನ ಹೊಂದಾಣಿಕೆಯೇ ಹೊರತು ಆಳ್ತನ, ಕೀಳುತನಗಳ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ.

'ಭಾರತೀಯ ಸಂಸ್ಕೃತಿ ಮತ್ತು ಕಲೆಗಳನ್ನು ಆಳವಾಗಿ ಅರ್ಥ ಮಾಡಿಕೊಳ್ಳಬೇಕೆಂದರೆ ಭಾರತೀಯ ಭಾಷೆಗಳ ಪೈಕಿ ಯಾವುದಾದರೊಂದು ಭಾಷೆಯನ್ನು ಕರಗತ ಮಾಡಿಕೊಂಡು ತಕ್ಕಮಟ್ಟಿನ ಪ್ರಭುತ್ವ ಸಾಧಿಸುವುದು ಪ್ರಾಥಮಿಕ ಅಗತ್ಯ' ಎನ್ನುತ್ತಾರೆ ಶತಾವಧಾನಿ ಡಾ.ಆರ್.ಗಣೇಶ್. ಆ ಮಟ್ಟಿಗೆ ಯಾವುದೇ ಭಾರತೀಯ ಭಾಷೆಯ ಕಲಿಕೆ ಅಪೇಕ್ಷಿತ. ಆದರೆ ಈ ಭಾಷೆ ಕನ್ನಡವೇ ಏಕಾಗಬಾರದು ಅಥವಾ ಏಕಾಗಬೇಕು? ಅದರಲ್ಲೂ ಇಂದಿನ ಕಾಲಘಟ್ಟದಲ್ಲಿ ಕಲೆಯ ಮೇಲೆ ಕೆಲವೊಂದು ಭಾಷೆಯ ಹೆಚ್ಚಿದ ಪ್ರಭುತ್ವ, ಇದರಿಂದಾಗಿ ಭಾಷಾಬಳಕೆಯಲ್ಲಿ ತರತಮ, ಮೇಲುಸ್ತುವಾರಿಕೆಯ ದೋಷಗಳನ್ನು ಕಾಣುತ್ತಲಿದ್ದೇವೆ. ಆಗೆಲ್ಲಾ ಮಾತೃಭಾಷೆಯನ್ನು ನಮ್ಮ ವಿದ್ಯಾಭ್ಯಾಸದ ಚೌಕಟ್ಟಿಗೇ ತರದೇ ಹೋದರೆ, ಇನ್ನು ಮುಂದಿನ ತಲೆಮಾರಿಗೆ ಕನ್ನಡ ಕಲೆಯಲ್ಲಿ ಕಾಣುವುದು ಸಾಧ್ಯವೇ ಎಂಬ ಚಿಂತೆಯೂ ಕಾಡುತ್ತದೆ. ಅದರ ಕುರಿತು ಮತ್ತಷ್ಟು ವಿವೇಚಿಸೋಣ.. ಮುಂದಿನ ಸಂಚಿಕೆಯಲ್ಲಿ. ನಿಮ್ಮ ಅಭಿಪ್ರಾಯಗಳಿಗೂ ಸ್ವಾಗತವಿದೆ. [ಅಂದಹಾಗೆ ಪ್ರಸ್ತುತ ಸಂಚಿಕೆಯು ಜ್ಯೇಷ್ಠ– ಆಷಾಢ (ಮೇ–ಜೂನ್) 2014 ರ ಸಂಚಿಕೆಯನ್ನೂ ಹೊಂದಿಕೊಂಡಂತೆ ಜ್ಯೇಷ್ಠ– ಭಾದ್ರಪದವಾಗಿ ಪ್ರಕಟವಾಗಿದೆ. ಕಾರಣಾಂತರಗಳಿಂದ ಸಂಚಿಕೆ–3 ಪ್ರಕಟವಾಗದೇ ಇರುವುದಕ್ಕೆ ಕ್ಷಮೆ ಕೋರುತ್ತೇವೆ.]

ಪ್ರೀತಿಯಿಂದ,
**ಸಂಪಾದಕರು**

# ಸಾರ್ಥಕವಾದ 'ನಾಟ್ಯಚಿಂತನ'– ನಾಟ್ಯಶಾಸ್ತ್ರದ ಕಾರ್ಯಾಗಾರ

**–ವಿಪ್ರಭ, ಪುತ್ತೂರು**

ದೀವಟಿಗೆ

ಭರತನ ನಾಟ್ಯಶಾಸ್ತ್ರ– ಎಲ್ಲ ಕಲೆಗಳ ತಾಯಿಬೇರು. ಆದರೆ ಭರತನ ನಾಟ್ಯಶಾಸ್ತ್ರದ ಅರಿವನ್ನು ಹೆಚ್ಚಿಸುವ ತರಗತಿಗಳು, ಕಾರ್ಯಾಗಾರಗಳ ಸಂಖ್ಯೆ ಇಂದಿಗೆ ನೃತ್ಯಕ್ಷೇತ್ರದಲ್ಲಿ ಬಹಳಷ್ಟು ವಿರಳ. ಭರತನಾಟ್ಯಾದಿ ನೃತ್ಯತರಗತಿಗಳಲ್ಲೂ ನಾಟ್ಯಶಾಸ್ತ್ರದ ಪರಿಚಯ ಅಷ್ಟಾಗಿ ಇರುವುದಿಲ್ಲ. ಕಾರಣ ಇಂದು ನಾವು ಕಾಣುತ್ತಿರುವ ಶಾಸ್ತ್ರೀಯನೃತ್ಯಗಳೆನಿಸಿಕೊಂಡ ದೇಶೀಸಾಂಪ್ರದಾಯಿಕನೃತ್ಯಗಳು (ಭರತನಾಟ್ಯ, ಕೂಚಿಪುಡಿ ಇತ್ಯಾದಿ) ಮೂಲತಃ ನಾಟ್ಯಶಾಸ್ತ್ರದ ಮೂಲಾಂಶಗಳತ್ತ ಯೋಚಿಸದೆ ಬೇರೆ ಬೇರೆ ಶಾಸ್ತ್ರಗ್ರಂಥಗಳ ಆಧಾರದಲ್ಲಿ ನೆಲೆ ಕಂಡುಕೊಂಡಿವೆ. ಹೀಗಿರುವಾಗ ನಾಟ್ಯಶಾಸ್ತ್ರದಲ್ಲಿ ಹೇಳಲಾದ ಅಂಶಗಳ ಥಿಯರಿಯನ್ನೂ ಕಲಿತು ಪ್ರಾಯೋಗಿಕವಾಗಿ ಅದನ್ನು ನರ್ತನಕ್ಕೆ ಬಳಸಿಕೊಳ್ಳುವ ದೃಷ್ಟಿಯುಳ್ಳ ಪ್ರದರ್ಶನ/ಕಾರ್ಯಾಗಾರಗಳು ನೃತ್ಯಕ್ಷೇತ್ರದಲ್ಲಿ ನಡೆಯುವುದು ಎಲ್ಲಿಂದ? ಅದೂ ಚಿಣ್ಣರಿಗೆ, ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಏಕಕಾಲಕ್ಕೇ ಹೊಂದುವಂತೆ ಉಪಯೋಗವಾಗುವ ಅನುಕೂಲವಿರುವಂತದ್ದು ಎಲ್ಲಿದೆ?– ಈ ಪ್ರಶ್ನೆಗಳಿಗೆ ಸಮರ್ಥವಾಗಿ ಉತ್ತರ ಕಂಡುಕೊಂಡದ್ದು ಪುತ್ತೂರಿನಲ್ಲಿ ಎಪ್ರಿಲ್ 20ರಿಂದ 26 ರವರೆಗೆ ನಡೆದ 'ನಾಟ್ಯಚಿಂತನ' ಎಂಬ ಕಾರ್ಯಾಗಾರ. ಇದನ್ನು ನೂಪುರ ಭ್ರಮರಿ ಟ್ರಸ್ಟ್ ಹಾಗೂ ಮೂಕಾಂಬಿಕಾ ಕಲ್ಚರಲ್ ಅಕಾಡೆಮಿ ಪುತ್ತೂರು – ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು.



ಪುತ್ತೂರಿನ ಮುಳಿಯ ಸಭಾಂಗಣದಲ್ಲಿ ನಡೆದ "ನಾಟ್ಯಚಿಂತನ" ಕಾರ್ಯಾಗಾರವನ್ನು ಪುತ್ತೂರು ಜೇಸಿರೆಟ್ ಅಧ್ಯಕ್ಷೆ ಅಶ್ವಿನಿಕೃಷ್ಣ ಮುಳಿಯ ಉದ್ಘಾಟಿಸಿದ್ದರು. ಇದೇ ಸಂದರ್ಭ ಭಾರತದಲ್ಲೇ ಏಕೈಕ ಮತ್ತು ಪ್ರಪ್ರಥಮ ಸಂಶೋಧನಾ ಸಂಚಿಕೆಯೆಂಬ ಮನ್ನಣೆ ಗಳಿಸಿರುವ ನೂಪುರ ಭ್ರಮರಿಯ ವಾರ್ಷಿಕ ವಿಶೇಷಾಂಕ–ಸಂಶೋಧನ ಸಂಚಿಕೆಯನ್ನು ಅನಾವರಣಗೊಳಿಸಿದ್ದು ವಿಶೇಷವಾಗಿತ್ತು.

ನಾಟ್ಯಚಿಂತನ– ಕಾರ್ಯಾಗಾರದ ಆಯೋಜನೆಯೂ ಕರಾವಳಿಯ ನೃತ್ಯಕ್ಷೇತ್ರದ ಪಾಲಿಗೆ ಪ್ರಪ್ರಥಮವೆನಿಸುವಷ್ಟು ಹೊಸದು, ಅಷ್ಟೇ ಅಲ್ಲ, ಕಾರ್ಯಾಗಾರದ ಫಲಶ್ರುತಿ, ಅದರಿಂದ ಒಡಮೂಡಿದ ಕಲ್ಪನೆಗಳೂ ಕೂಡಾ ಕಲಾಕ್ಷೇತ್ರದ ಪಾಲಿಗೆ ಹೊಚ್ಚಹೊಸತು. ಇಲ್ಲಿ ನಾಟ್ಯದ ಕುರಿತಾಗಿ ಅರಿವು ಮೂಡಿಸುವ ಹೆಜ್ಜೆಗಳಲ್ಲೆದರಲ್ಲೂ ನಾವೀನ್ಯವಿತ್ತು, ನಾಟ್ಯಶಾಸ್ತ್ರವನ್ನಾಧರಿಸಿ ಹೊಸತೊಂದು ಸಾಹಿತ್ಯ–ಕಾವ್ಯವೇ ನಿರ್ಮಾಣವಾಗಿತ್ತು. ನೃತ್ಯನಿರ್ದೇಶನದ ಸಂವಿಧಾನದಲ್ಲಿ ಕ್ರಾಂತಿಯಿದ್ದಿತ್ತು. ಅದನ್ನು ಸಮರ್ಥವಾಗಿ ಭವಿಷ್ಯದ ಪೀಳಿಗೆಗೆ ಕೊಡುವಲ್ಲಿ ಕ್ರಮಬದ್ಧವಾದ ಕಾರ್ಯಕ್ರಮ–ನಿರ್ದೇಶನದ ಯೋಜನೆಯಿದ್ದಿತ್ತು. ಈ ನಿಟ್ಟಿನಲ್ಲಿ ನೂಪುರ ಭ್ರಮರಿಯ ನಿರ್ದೇಶಕಿ ಮನೋರಮಾ ಬಿ.ಎನ್ ಮತ್ತು ಶ್ರೀ ಮೂಕಾಂಬಿಕಾ ಕಲ್ಚರಲ್ ಅಕಾಡೆಮಿಯ ವಿದ್ವಾನ್ ದೀಪಕ್‌ಕುಮಾರ್ ಮತ್ತು ಬಳಗ ಸದಾ ಅಭಿನಂದನಾರ್ಹರು.



ಸಾಮಾನ್ಯವಾಗಿ ನೃತ್ಯಕಾರ್ಯಾಗಾರಗಳಲ್ಲಿ ಸಂಪನ್ಮೂಲ ವ್ಯಕ್ತಿಗಳು ನೃತ್ಯವನ್ನೋ/ನೃತ್ಯಬಂಧಗಳನ್ನೋ ಪಾಠ ಮಾಡಿ ತಾವು ಕಲಿತ/ನಿರ್ದೇಶಿಸಿದ ವಿಷಯಗಳನ್ನೇ ಅಭ್ಯರ್ಥಿಗಳಿಂದ ಮಾಡಿಸುತ್ತಾರೆ. ಆದರೆ ಈ ಕಾರ್ಯಾಗಾರದ ಸ್ವರೂಪವೇ ಹೊಸತು. ಇಲ್ಲಿ ನಿತ್ಯವೂ ನಾಟ್ಯಶಾಸ್ತ್ರವನ್ನಾಧರಿಸಿ ಒಂದೂವರೆ ಗಂಟೆಯ ಕಥಾನಿರೂಪಣೆ/ಉಪನ್ಯಾಸ ತರಗತಿಯ ನಂತರ ಸ್ವತಃ ಅಭ್ಯರ್ಥಿ/ವಿದ್ಯಾರ್ಥಿಗಳಿಂದಲೇ ಕೊರಿಯೋಗ್ರಫಿ ಮಾಡಿಸಲಾಗಿದೆ. ಈ ಸಂಬಂಧವಾಗಿ ಅಭ್ಯರ್ಥಿಗಳಿಗೆ ನಿತ್ಯವೂ ಬೇರೆ ಬೇರೆ ಬಗೆಯ ಕೊರಿಯೋಗ್ರಫಿ ವಿಧಾನಗಳ ಬಗ್ಗೆ, ಅದಕ್ಕೆ ಪೂರಕವಾದ ಕಥೆ ಇತ್ಯಾದಿ ಅಂಶಗಳ ಬಗ್ಗೆ ನಿರ್ದೇಶನ ನೀಡಲಾಗಿದೆ. ಅಭ್ಯರ್ಥಿಗಳನ್ನು ವಯೋಮಾನ, ಕಾರ್ಯಕ್ಷಮತೆ, ಆಸಕ್ತಿಯ ಮತ್ತು ಕಲಿಕೆಯ ಮಟ್ಟದ ಆಧಾರದ ಮೇಲೆ ವಿಭಾಗ ಮಾಡಿ ಹೊಸ ಹೊಸ ಅಂಶಗಳತ್ತ ಅವರಿಂದಲೇ ನೃತ್ಯ/ನೃತ್ತವನ್ನು ಸಂಯೋಜಿಸಲಾಗಿದೆ. ಇದಕ್ಕೆ ಪೂರಕವಾಗುವ ಸಾಹಿತ್ಯವನ್ನು ಬರೆದ ಮನೋರಮಾ ಬಿ.ಎನ್‌ರವರ ಕಥನಕಾವ್ಯಕಲ್ಪನೆ ಕಾರ್ಯಾಗಾರದ ಮಟ್ಟಿಗಷ್ಟೇ ಸೀಮಿತವಾಗಿಲ್ಲ; ಬದಲಾಗಿ ನಾಟ್ಯಶಾಸ್ತ್ರದ ಕಥಾವಾಙ್ಮಯವನ್ನು ಸರಳವಾಗಿ ಕನ್ನಡಭಾಷೆಯಲ್ಲಿ ಕಲಾವಿದರಿಗೆ ಕೊಡುವಲ್ಲಿ ಮಹತ್ತ್ವದ ಹೆಜ್ಜೆಯನ್ನಿಟ್ಟಿದೆ. ಆ ಮೂಲಕವಾಗಿ ಇದುವರೆಗೆ ಕಲಾಕ್ಷೇತ್ರದಲ್ಲಿ ಅಲಭ್ಯವಿದ್ದ ನಾಟ್ಯಶಾಸ್ತ್ರವನ್ನಾಧರಿಸಿದ ಕನ್ನಡ ಕಾವ್ಯದ ಕೊರತೆಯನ್ನು ನೀಗಿಸಿ ಅಭಿನಯಕ್ಕೆ ಒಗ್ಗುವ ಸಾಹಿತ್ಯವನ್ನು

**‘ನಾಟ್ಯಶಿಬಿರವು ಈ ನೆಲದಲ್ಲಿ ಬೆಳೆದ ಎಳನೀರಿನ ಹಾಗೆ’**

‘ನಾಟ್ಯಶಿಬಿರವೆನ್ನುವುದು ಉಳಿದೆಲ್ಲಾ ಮಿಕ್ಸ್ಡ್ ಸಲಾಡ್‌ನಂತಿರುವ ಶಿಬಿರದ ಕಲ್ಪನೆಗಳಿಗಿಂತ ವಿಶೇಷವಾದುದು. ಇದು ಈ ನೆಲದಲ್ಲಿ ಬೆಳೆದ ಎಳನೀರಿನ ಹಾಗೆ. ಬೇರೆ ರೀತಿಯ ಶಿಬಿರಗಳು ಪೆಪ್ಸಿ, ಕೋಕಾಕೋಲಾ ಇದ್ದಹಾಗೆ. ಆರೋಗ್ಯಕ್ಕೆ ಅನುಕೂಲ ಎಳನೀರು. ಆದರೆ ಪೆಪ್ಸಿ, ಕೋಕಾಕೋಲಾ ಕುಡಿಯುವುದರಿಂದ ಕರುಳು ಕರಗುತ್ತದೆ ಎನ್ನುತ್ತಾರೆ ಪ್ರಾಜ್ಞರು. ಆದರೆ ಇಂದಿನ ಕಾಲಕ್ಕೆ ಬೇಕಿರುವುದು ಹೃದಯ ಕರಗುವಂತಹ ವಿಚಾರದ ಶಿಬಿರಗಳು. ಇಂತಹ ಶಿಬಿರಗಳಲ್ಲಿ ಮಕ್ಕಳಿಗೆ ಕಥೆ ಹೇಳುವ ಮತ್ತು ಕೇಳುವ ಪ್ರವೃತ್ತಿ ಬೆಳೆಯಬೇಕು. ಇಂತಹ ನಮ್ಮ ಸನಾತನ ಧರ್ಮದ ಕತೆಗಳನ್ನು ಮಕ್ಕಳಿಗೆ ಹೇಳಿ ಅವರಲ್ಲಿ ನೀತಿ ನಿಯಮಗಳ ಜಾಗೃತಿಯನ್ನೂ, ಅದಕ್ಕೆ ನರ್ತಿಸುವ ಸೃಷ್ಟಿಶೀಲತೆಯನ್ನೂ ಶಿಬಿರವು ಸಮರ್ಥವಾಗಿ ಮಾಡಿದೆ. ಮಾತ್ರವಲ್ಲದೆ ಈ ಶಿಬಿರದ ಮೂಲಕವಾಗಿ ನಾಟ್ಯಶಾಸ್ತ್ರದ ಕತೆಗಳನ್ನು ನರ್ತಿಸುವ ಸಾಹಿತ್ಯ,ಸಂಗೀತ, ಸ್ವರಕಲ್ಪನೆ ವಿನೂತನವಾಗಿ ಸೃಷ್ಟಿಯಾಗಿದೆ. ಇಂತಹ ಶಿಬಿರಗಳ ಕಲ್ಪನೆ, ಸಾಧ್ಯತೆ ನಾವು ಸಣ್ಣವರಾಗಿದ್ದಾಗ ಇರಲೇ ಇಲ್ಲ. ಈ ಹಿನ್ನೆಲೆಯಲ್ಲಿ ಇಂತಹ ಶಿಬಿರಗಳನ್ನು ಮತ್ತಷ್ಟು ಆಯೋಜಿಸುವುದು ಸಾರ್ಥಕ ಪ್ರಯತ್ನ ಮತ್ತು ಅದನ್ನು ಸದುಪಯೋಗಿಸಿಕೊಳ್ಳುವುದು ಸಾರ್ವಜನಿಕರ ಕರ್ತವ್ಯ ವಿದ್ಯಾರ್ಥಿಗಳು ನೋಡಿ ಕಲಿ–ಮಾಡಿ ತಿಳಿ ಎಂಬ ನೀತಿಯನ್ನು ಅಳವಡಿಸಿಕೊಂಡಾಗ ಕಲೆಯ ಬಗೆ ಆಸಕ್ತಿ ಅರಳಲು ಸಾಧ್ಯ”– ***ವಿದ್ವಾನ್ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, ಶಿಬಿರದ ಸಂಪನ್ಮೂಲವ್ಯಕ್ತಿ, ವಿಮರ್ಶಕ, ಕವಿ, ರಂಗಕರ್ಮಿ, ರಾಮಕಥಾ ರೂಪಕ ನಿರ್ದೇಶಕ.***

ಕೊಟ್ಟ ಕೀರ್ತಿ ಅವರದ್ದು. ಅಂತೆಯೇ ಅದಕ್ಕೆ ಸೂಕ್ತವಾದ ಜತಿ/ನಡೆಯನ್ನು ವಿದ್ವಾನ್ ದೀಪಕ್ ಕುಮಾರ್, ಸಂಗೀತ-ಸ್ವರಕಲ್ಪನೆಯನ್ನು ವಿದುಷಿ ಪ್ರೀತಿಕಲಾ ದೀಪಕ್ ಕುಮಾರ್ ಅವರು ಅಭ್ಯರ್ಥಿಗಳ ಆಯ್ಕೆಗನುಸಾರವಾಗಿ ಆಶುವಾಗಿ ನೀಡಿದ್ದಾರೆ. ಇದು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಎರಡೂ ಸಂಸ್ಥೆಯ ಕಲಾವಿದರ ಪ್ರತಿಭೆಗೆ ನಿದರ್ಶನ.

**ನಾಟ್ಯಶಾಸ್ತ್ರದ ಆಂಗಿಕ ವಿನ್ಯಾಸಗಳ ಉಪನ್ಯಾಸ/ಪ್ರಾತ್ಯಕ್ಷಿಕೆ**

ಈ ಒಂದು ವಾರದ ಕಾರ್ಯಕ್ರಮಕ್ಕೆ ಮುನ್ನುಡಿಯಾಗಿ ಬೆಂಗಳೂರಿನ ಹೆಸರಾಂತ ಕಲಾವಿದೆ, ಕರಣಾಂಗಹರವನ್ನು ಕಲಿತು ಭರತನಾಟ್ಯದ ಆಂಗಿಕ-ಸಾತ್ತ್ವಿಕ ಸಮನ್ವಯತೆಯ ಮೇಲೆ ಡಾಕ್ಟರೇಟ್ ಪಡೆದ ಕರ್ನಾಟಕದ ಮೊದಲ ಸಂಶೋಧಕಿ, ಗುರು, ಬೆಂಗಳೂರು ಜೈನ್ ಯುನಿವರ್ಸಿಟಿ ಕಾಲೇಜಿನ ಡಾ.ಶೋಭಾ ಶಶಿಕುಮಾರ್ ಅವರ ನೇತೃತ್ವದಲ್ಲಿ ಉಪನ್ಯಾಸ ಕಾರ್ಯಾಗಾರ ಮತ್ತು ವಿಶೇಷವಾದ ಭರತನೃತ್ಯ ಕಾರ್ಯಕ್ರಮವು ಉದ್ಘಾಟನಾದಿನದಂದು ಜರುಗಿತ್ತು. ನಾಟ್ಯಶಾಸ್ತ್ರದ ನೃತ್ತಹಸ್ತಪ್ರಕಾರಗಳನ್ನು ಸ್ವತಃ ಅಭಿನಯಿಸಿ ತೋರಿಸುವುದರೊಂದಿಗೆ ತಮ್ಮ ಶಿಷ್ಯಂದಿರಾದ ಆರತಿ ಹಾಗೂ ಶ್ರೀಮತಿ ಮೇಘಾಕೃಷ್ಣರವರ ಜೊತೆಗೆ ನಾಟ್ಯಶಾಸ್ತ್ರದ ಚಾರಿ, ಅಂಗವಿನ್ಯಾಸ, ಕರಣ ಮುಂತಾದ ಆಂಗಿಕವಿನ್ಯಾಸವನ್ನು ನೃತ್ತ-ನೃತ್ಯಬಂಧಗಳ ಮೂಲಕವೂ ಕಾಣಿಸಿಕೊಟ್ಟರು. ಇದು ಕಾರ್ಯಾಗಾರದ ಯಾತ್ರೆಗೆ ದಿಕ್ಸೂಚಿಯಾಗಿಯೂ, ಮಕ್ಕಳಿಗೆ ಅರಿವಿನ ಕಿರಣವಾಗಿಯೂ ತೋರಿಬಂದಿತ್ತು.

ಈ ಸಂದರ್ಭ ಡಾ.ಶೋಭಾ ಅವರು ನೀಡಿದ ಉಪನ್ಯಾಸವನ್ನು ಸಂದರ್ಶನ ರೂಪದಲ್ಲಿ ತುಣುಕುಗಳನ್ನಾಗಿ ಮಾಡಿದ್ದು ಅದು ಹೀಗಿದೆ...

*** ಭರತನಾಟ್ಯಕ್ಕೂ ಭರತನ ನಾಟ್ಯಶಾಸ್ತ್ರಕ್ಕೂ ಇರುವ ಸಂಬಂಧ ಹೇಗಿದೆ ?**



ಭರತನ ನಾಟ್ಯಶಾಸ್ತ್ರದ ಹಾದಿಯನ್ನು ನಾವು ಮಾರ್ಗ ಎನ್ನುತ್ತೇವೆ. ಭರತನಾಟ್ಯದ ಹಾದಿ ದೇಶೀ. ಸದಿರ್ ಎನ್ನುವ ನೃತ್ಯಪರಂಪರೆ ಅವನತಿಯ ಸ್ಥಾನದಲ್ಲಿದ್ದಾಗ ರುಕ್ಮಿಣೀ ದೇವಿ ಅರುಂಡೇಲ್, ಕೃಷ್ಣ ಅಯ್ಯರ್ ನಂತಹ ಮಹಾನುಭಾವರು ಅದಕ್ಕೆ ಪುನರುತ್ಥಾನ ನೀಡಲು ಕೊಟ್ಟ ಹೆಸರು ಭರತನಾಟ್ಯ. ಆದರೆ ನಾಟ್ಯಶಾಸ್ತ್ರದ ವಿಚಾರಕ್ಕೂ, ಭರತನಾಟ್ಯ ಅಳವಡಿಸಿಕೊಂಡ ಹಾದಿಗೂ ಸಾಕಷ್ಟು ವ್ಯತ್ಯಾಸವಿದೆ. ಆದರೆ ಎಲ್ಲರಲ್ಲೂ ಅವೆರಡೂ ಒಂದೇ ಎಂದು ಭ್ರಮೆ, ತಪ್ಪು ಕಲ್ಪನೆ ಮುಡಿದೆ.

ಆದರೊಂದು ವಿಷಯ- ಭರತನಾಟ್ಯದ ಎಷ್ಟೋ ಹೆಜ್ಜೆಗಾರಿಕೆ ಅಂದರೆ ಅಡವುಗಳಿಗೆ ನಾಟ್ಯಶಾಸ್ತ್ರ ಸ್ಫೂರ್ತಿ ಕೊಟ್ಟಿದೆ. ಹೀಗಿರುವಾಗ ಶಾಸ್ತ್ರ ನೀಡಿರುವ ವಿಜ್ಞಾನವನ್ನು ಮರೆಯದೆ ಅಳವಡಿಸಿಕೊಂಡರೆ ನೃತ್ಯದ ದಾರಿ ಸೊಗಸಾಗುತ್ತದೆ. ಭರತನ ನಾಟ್ಯಶಾಸ್ತ್ರದ ಅರಿಯುವಿಕೆ ಯಿಂದ ಆಂಗಿಕ ಅಭಿನಯದ ವಿಸ್ತಾರವನ್ನು ಹೆಚ್ಚು ಅರಗಿಸಿಕೊಳ್ಳಲು ಸಾಧ್ಯ, ನೃತ್ಯಕ್ಕೆ ಬೇಕಾಗುವ ಹೆಚ್ಚಿನ ಎಲ್ಲಾ ವೈವಿಧ್ಯವೂ ನಾಟ್ಯಶಾಸ್ತ್ರದಲ್ಲಿದೆ.



*** ಸಾಮಾನ್ಯವಾಗಿ ನೃತ್ಯಕಲಿಯುವವರಿಗೆ ರಂಗದ ಮೇಲಿನ ಮೋಹ ಸಹಜ. ಆದರೆ ನೃತ್ಯಸೌಂದರ್ಯವನ್ನು ಮಕ್ಕಳು/ಕಲಾವಿದರು ಕಂಡುಕೊಳ್ಳುವ ಬಗೆ ಹೇಗೆ? ನಾಟ್ಯಶಾಸ್ತ್ರ ಎಷ್ಟರಮಟ್ಟಿಗೆ ಸಹಕಾರ ನೀಡುತ್ತದೆ?**

ಪ್ರತಿಯೊಬ್ಬ ವಿದ್ಯಾರ್ಥಿಯೂ ನೃತ್ಯತರಗತಿಗೆ ಯಾಕೆ ಹೋಗುತ್ತಿದ್ದೇವೆ, ಇಷ್ಟವಾಗುವುದಾದರೆ ಹೇಗೆ ಎಂದು ಅರ್ಥ ಮಾಡಿಕೊಂಡರೆ ನೃತ್ಯದ ಎಲ್ಲಾ ಸೌಂದರ್ಯದ ಪರಿಭಾಷೆಯೂ ಅರ್ಥವಾಗುತ್ತಾ ಹೋಗುತ್ತದೆ. ಅಭಿನಯವೆಂಬುದು ಮುಖಕ್ಕೆ ಮಾತ್ರ ಸೀಮಿತವಲ್ಲ, ದೇಹಭಾಷೆಗೆ ಅದು ಪೂರಕವಾಗಿರಬೇಕು. ಭಗವಂತನನ್ನು ಪುರಂದರದಾಸರಂತೆ ಕರೆದ ತಕ್ಷಣ ಕಾಣಲಾಗುವುದಿಲ್ಲ. ಆದರೆ ಕಲೆಯ ಮೂಲಕ, ನೃತ್ಯಸಾಹಿತ್ಯದ ಮೂಲಕ ನಿತ್ಯವೂ ಅನುಭವದಿಂದ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯ. ಆದರೆ ಭಗವಂತನನ್ನು ನಾವು ಆಂಗಿಕಾಭಿನಯದಲ್ಲಿ ಹಿಡಿತದಲ್ಲಿಟ್ಟುಕೊಂಡು ಆತ ನಮ್ಮೊಳಗೆ ಇಳಿಯುವುದನ್ನು ತಡೆಯುತ್ತೇವೆ. ದೇಹವನ್ನು ಬಿಗಿ ಮಾಡಿಕೊಳ್ಳುತ್ತೇವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಏನೆಂದರೆ, ದೇಹವನ್ನು ನಾವೆಷ್ಟು ಬಗ್ಗಿಸಿಕೊಳ್ಳುತ್ತೇವೆಯೋ, ಮೃದುವಾಗಿಸುತ್ತೇವೆಯೋ, ಸರಳವಾಗಿಸುತ್ತೇವೆಯೋ ಅಲ್ಲಿ ಸಹಜವಾಗಿ ಸೌಂದರ್ಯ ತೋರಿಬರುತ್ತದೆ. ಇದಕ್ಕೆ ನಾಟ್ಯಶಾಸ್ತ್ರದ ಆಂಗಿಕಾದಿ ಅಭಿನಯ ಉತ್ತಮ ಅನುಕೂಲ ದೊರಕಿಸಿಕೊಡುತ್ತದೆ. ಔಚಿತ್ಯಪೂರ್ಣವಾಗಿ ಅಡವುಗಳನ್ನು ಹಾಕಿಕೊಂಡರೆ ಒಳ್ಳೆಯ ವಿಶ್ರಾಂತಿಯೂ ಸಿಗುತ್ತದೆ. ಅಂತೆಯೇ ನಾಟ್ಯಶಾಸ್ತ್ರದ ಚಾರಿಗಳನ್ನು ಅಡವುಗಳೊಂದಿಗೆ ಹೊಂದಿಸಿಕೊಂಡರೆ ಹದ ಬರುತ್ತದೆ, ದೇಹ ತನ್ನಿಂತಾನೇ ಮೃದುವಾಗುತ್ತದೆ, ಭಾರ ಕಳೆದು ಸುಂದರವಾಗುತ್ತದೆ. ಆದರೆ ಬದಲಾದ ಕಾಲಘಟ್ಟಕ್ಕೆ ನಾವು ತಪ್ಪುಹಾದಿ ತುಳಿದಿದ್ದೇವೆ. ಫಲವಾಗಿ ನೃತ್ಯಮಾಡುವವರಿಗೂ, ನೋಡುವವರಿಗೂ ಕಷ್ಟವಾಗುತ್ತದೆ, ಹಿಂಸೆಯಾಗುತ್ತದೆ, ಭಾರವಾಗುತ್ತದೆ.

*** ಅಭಿನಯ ಮುಖಕ್ಕೆ ಸೀಮಿತವಲ್ಲ ಎಂದಿರಿ. ಹಾಗಾದರೆ ಅಭಿನಯದ ಅಭ್ಯಾಸ ಹೇಗಿರಬೇಕು?**

ಎಲ್ಲದಕ್ಕೂ ಅದರದ್ದೇ ಅದ ಸೊಗಸಿದೆ. ಆದರೆ ವಿನಿಯೋಗದಲ್ಲಿ ಮಾತ್ರ ಔಚಿತ್ಯ ಬೇಕು. ಅಂಗಶುದ್ಧಿಯ ರೇಖೆಗಳು, ಗಣಿತೀಯ ವಿನ್ಯಾಸಗಳು ಒಳ್ಳೆಯವೆ. ಅವುಗಳೆಲ್ಲಾ ಅಕ್ಷರಗಳಿದ್ದಂತೆ. ಆದರೆ ಅದು ವಾಕ್ಯವಾಗುವಾಗ ಅದರಲ್ಲಿ ಒಂದು ಹದ ಬೇಕಾಗುತ್ತದೆ. ನಮ್ಮ ಪ್ರಜ್ಞೆಯನ್ನು ಬೆಳೆಸಿಕೊಂಡಾಗ ವಿಶೇಷವಾದ ಚೆಲುವು ಸಿಗುತ್ತದೆ. ಅದನ್ನು ಬಿಟ್ಟು ಅಕ್ಷರಾಕ್ಷರಕ್ಕೂ ದೋಷಗಳನ್ನು ಕಂಡುಹಿಡಿಯುವುದಾದರೆ ಅದು ನಮ್ಮ ದೋಷ.

ಯಾವುದೇ ಕೃತಿಯಲ್ಲಿ ಬರುವ ಅಮೂರ್ತಶಕ್ತಿ ಅಥವಾ ದೇವರು ಪೂರ್ಣವಾಗಿ ನಮ್ಮ ದೇಹದೊಳಗೆ ಇಳಿಯಬೇಕೆಂದರೆ ಕಟ್ಟುಪಾಡುಗಳನ್ನು ಬಿಟ್ಟು ಕಲಾವಿದರು ದೇಹವನ್ನು ತಮ್ಮದೇ ಹಿಡಿತದಲ್ಲಿಟ್ಟುಕೊಳ್ಳಬೇಕು. ದೇಹ ನಮ್ಮ ದಾಸನಾಗಬೇಕು. ನಾವು ನುಡಿಸಿದಂತೆ ಅದು ನುಡಿಯಬೇಕು. ನಮ್ಮ ಆಂಗಿಕವು ಪಾತ್ರದ ತತ್ತ್ವಕ್ಕೆ, ಭಾವನೆಗೆ ಶರಣಾಗಬೇಕು. ದೇವರನ್ನು ನೃತ್ಯದ ಸಾಹಿತ್ಯದಲ್ಲಿ ಕರೆದು ಪಾತ್ರವಾಗಿ ಶರಣಾಗದೇ ಹೋದರೆ ಭಗವಂತ ನಮ್ಮೊಳಗೆ ಇಳಿಯಲಾರ. ಆದರೆ ಇದಕ್ಕೆ ಸಾಧನೆ, ಗಮನ, ಮುಖ್ಯ.

ಕೈಕೈಹಿಡಿದು ಕುಣಿದ ಮಾತ್ರಕ್ಕೆ ಅದು ನೃತ್ಯವಾಗುವುದಿಲ್ಲ. ಬದಲಾಗಿ ಪಾತ್ರದ ಆಂತರ್ಯಕ್ಕೆ ಇಳಿಯಬೇಕು. ಆದರೆ ಅಲ್ಲಿಗೇ ಅಭಿನಯವನ್ನು ಮಿತಿಗೊಳಿಸಿಕೊಳ್ಳಬಾರದು. ಮಿತಿಗೊಳಿಸಿದರೆ ನೃತ್ಯ ಅಪೂರ್ಣವಾಗುತ್ತದೆ. ರಾಧೆಯ ಅಂಗಶುದ್ಧಿಯ ವ್ಯಾಖ್ಯಾನಕ್ಕೂ, ಕೃಷ್ಣನ ಅಂಗಶುದ್ಧಿಗೂ ವ್ಯತ್ಯಾಸವಿದೆ. ರಾಧೆಯ ಮೃದುಭಾವಕ್ಕೂ, ಕೃಷ್ಣನ ಭಾವಕ್ಕೂ ವ್ಯತ್ಯಾಸವಿದೆ. ಆದ್ದರಿಂದ ಪ್ರತೀ ಪಾತ್ರಕ್ಕೂ ದೇಹವನ್ನು ಹೇಗೆ ಒಗ್ಗಿಸಿಕೊಳ್ಳಬೇಕು, ಆಂಗಿಕವನ್ನು ಹೊಂದಿಸಿಕೊಳ್ಳಬೇಕು ಎನ್ನುವುದೇ

ಅಂಗಶುದ್ಧಿ. ಇದು ಪಾತ್ರದ ಆಳಕ್ಕೆ ಹೋಗಿ ಆವಾಹನೆ ಮಾಡಿಕೊಂಡಾಗ ಅರ್ಥವಾಗುತ್ತದೆ. ಆದರೆ ಇದಕ್ಕೆ ವಿದ್ಯಾರ್ಥಿಗಳು ಮೊದಲು ದೇಹದ ಪ್ರಾಥಮಿಕ ಚಲನೆಗಳನ್ನು, ಚಾಚುವುದನ್ನು, ಶ್ರದ್ಧೆಯಿಂದ ನಿರ್ದಾಕ್ಷಿಣ್ಯವಾಗಿ ಕಲಿಯಬೇಕು, ಸಾಧನೆ ಮಾಡಬೇಕು. ನಂತರ ನೃತ್ಯಾಭ್ಯಾಸ ಮಾಡುತ್ತಿರುವವರ ಸಾಮರ್ಥ್ಯಕ್ಕೆ ಅನುಗುಣವಾಗಿ ಕಲೆ ಅರಳುತ್ತದೆ, ಕಲೆ ಹೇಳಿಕೊಟ್ಟು ಬರುವಂತದ್ದಲ್ಲ, ಅದೊಂದು ಸ್ವಾನುಭವದಿಂದ ಉಂಟಾಗುವ ಪ್ರಕ್ರಿಯೆ.

*** ಆದರೆ ಭರತನಾಟ್ಯದಂತಹ ನೃತ್ಯದಲ್ಲಿ ಅರ್ಥವಾಗದ ಹೆಜ್ಜೆಗಾರಿಕೆಯ ಸರಣಿಗಳು ಇರುತ್ತದಲ್ಲ ! ಅದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?**

ಹೆಜ್ಜೆಗಾರಿಕೆಯ ಸರಣಿಗಳು ಎಂದರೆ ನೃತ್ತವನ್ನೇ ತಾನೇ ನೀವು ಹೇಳುವುದು? ನೋಡಿ.., ನೃತ್ತವೆನ್ನುವುದು ಎಂದಿಗೂ ಭಾವಾಭಿನಯವಿಹೀನವಲ್ಲ; ಸಾಹಿತ್ಯರಹಿತ ಮಾತ್ರ –ಎನ್ನುವುದನ್ನು ಅರ್ಥಮಾಡಿಕೊಂಡರೆ ನೃತ್ತವು ಯಾವತ್ತಿಗೂ ಒಣ ಆಂಗಿಕದ ಜಾಳಾಗುವುದಿಲ್ಲ ಮತ್ತು ಖುಷಿ, ಆನಂದವನ್ನು ಕೊಡುವ ಆಸ್ವಾದ್ಯರಮಣೀಯವಾಗಿರುತ್ತದೆ. ಯಾವ ಸಾಹಿತ್ಯವಿಲ್ಲದಿದ್ದರೂ ಇಷ್ಟಪಟ್ಟು ಸಂಭ್ರಮದಿಂದ, ಖುಷಿಯಿಂದ, ಭಾವದಿಂದ ಜೊತೆಗೂಡಿ ಮಾಡಿದರೆ ನೋಡುವವರಿಗೂ ಆನಂದವಾಗುತ್ತದೆ. ಸಾತ್ತ್ವಿಕಾಭಿನಯ ಎನುವುದು ಪಾತ್ರೆ. ಆಂಗಿಕ ಅದರೊಳಗಿನ ನೀರು. ಪಾತ್ರೆಯ ಸ್ವರೂಪದಲ್ಲಿ ನೀರಿನ ರೂಪ ಬದಲಾವಣೆ ಪಡೆದುಕೊಳ್ಳುತ್ತದೆ. ರೂಪವನ್ನು ಸ್ವರೂಪಕ್ಕೆ ಒಗ್ಗಿಸಿಕೊಳ್ಳಬೇಕು. ರೂಪಕ್ಕೆ ನಿರ್ದಿಷ್ಟ ಅರ್ಥವೆನ್ನುವುದಿಲ್ಲ. ಅದು ಸ್ವರೂಪದ ನೆಲೆಯಲ್ಲಿ ನಿರ್ಧಾರವಾಗುತ್ತದೆ. ಕಲಾವಿದನ ಸ್ವಂತಿಕೆಯಲ್ಲಿ ಬೆಲೆ ಪಡೆಯುತ್ತದೆ. ಅಂತೆಯೇ ಪ್ರತಿಯೊಂದು ದೇಹದ ಅಂಗಗಳಿಗೂ ಅದರದ್ದೇ ಆದ ವ್ಯಕ್ತಿತ್ವವಿದೆ. ಅದನ್ನು ಒಟ್ಟಾಗಿ ಕಂಡುಕೊಳ್ಳುವುದು ಭಾವಕ್ಕೆ ಅನುಗುಣವಾಗಿ ಬಿಡಿಸಿಕೊಳ್ಳುವುದು, ಕೂಡಿಸಿಕೊಳ್ಳುವುದು ಗೊತ್ತಿರಬೇಕು. ಅದು ಕಲಾವಿದನ ಪ್ರತಿಭೆ. ಆಗಷ್ಟೇ ಕಲಿಯುವವರಿಗಾದರೆ ಅದು ವ್ಯಾಯಾಮದ ಸಾಧನೆಯಿಂದ ತಿಳಿಯುತ್ತದೆ.



**ಸಾಯಂ ಸಂಧ್ಯೆಯ ನಾಟ್ಯಾವತರಣದಲ್ಲಿ ಡಾ.ಶೋಭಾ ಶಶಿಕುಮಾರ್**

ಸಂಜೆ 2ಗಂಟೆಗಳ ಕಾಲ ನಡೆದ ಡಾ.ಶೋಭಾ ಶಶಿಕುಮಾರ್ ಅವರ ನೃತ್ಯಪ್ರದರ್ಶನ ನೆರೆದವರನ್ನು ಹೊಸ ಲೋಕಕ್ಕೆ ಕರೆದೊಯ್ದು ಮೂಕವಿಸ್ಮಿತರನ್ನಾಗಿಸಿದ್ದು ಸುಳ್ಳಲ್ಲ. ಕರಾವಳಿಯ ನೃತ್ಯಕ್ಷೇತ್ರಕ್ಕೆ ಅಪರೂಪವಾಗಿರುವ ನಾಟ್ಯಶಾಸ್ತ್ರದ ಅಂಗೋಪಾಂಗಸಮನ್ವಯವನ್ನೂ, ಕರಣಾಂಗಹಾರ ಸಾಂಗತ್ಯವನ್ನೂ ಅಲಂಕಾರಶಾಸ್ತ್ರದ ಆಧಾರದಲ್ಲಿ ನೃತ್ಯದಲ್ಲಿ ಹೆಣೆದ ಡಾ.ಶೋಭಾ ಹತ್ತು ಬಗೆಯ ನೃತ್ಯಸಂದರ್ಭಗಳನ್ನು ಪ್ರೇಕ್ಷಕರು ಆನಂದತುಂದಿಲರಾಗಿ ಅಶ್ರು ತುಳುಕಿಸುವಂತೆ ತೆರೆದಿಟ್ಟರು. ಇವುಗಳ ಪೈಕಿ 7 ರಚನೆಗಳೂ ಕನ್ನಡ ಕಾವ್ಯಪರಂಪರೆಯವೇ ಆಗಿದ್ದು; ಪುರಂದರದಾಸ, ಡಿವಿಜಿ, ಕುವೆಂಪು, ಶತಾವಧಾನಿ ಗಣೇಶ್‌ರ ಕಾವ್ಯಗಳೇ ನೃತ್ಯಾಲಂಕಾರಕ್ಕೆ ಶೋಭಾಯಮಾನವಾಗಿ ರೂಪ ಪಡೆದಿದ್ದವು.



ನೃತ್ಯನಿರ್ಮಾಣಕ್ಕೆ ಸವಾಲೆನಿಸುವ 'ಮಧುರಾಷ್ಟಕ'ವನ್ನು ಎಲ್ಲಿಯೂ ಕೊಂಡಿ ತಪ್ಪದಂತೆ ಜತಿ, ಸ್ವರಕಂಬಗಳ ಸಹಿತ ಲೀಲಾಜಾಲವಾಗಿ ನಿಭಾಯಿಸಿದ ಡಾ.ಶೋಭಾ, ಕೃಷ್ಣನ ಸಕಲಗುಣ–ಸೌಂದರ್ಯವನ್ನು ನಾಜೂಕಾಗಿ ಮೂರ್ತೀಕರಿಸಿದರು. 'ರಾಮನ ಪರಿವಾರ'ದ ಗುಣವಿಶೇಷವನ್ನು ಹೇಳುವ ಶತಾವಧಾನಿ ಗಣೇಶರ ರಚನೆಗೆ ಇಂದಿನ ಲೋಕದ ಪರಿವಾರದ್ವಂದ್ವಗಳನ್ನು ಸಮನ್ವಯಿಸುತ್ತಾ ರಾಮಾಯಣದ ಪಾತ್ರಗಳೇ ಆಗಿಹೋಗಿದ್ದರು ಶೋಭಾ. ವಾಲ್ಮೀಕಿ ರಾಮಾಯಣದ ಕಾವ್ಯಕಲ್ಪಕ್ಕೆ ಅನುಗುಣವಾಗಿದ್ದ ಅಭಿನಯವು ಡಾ.ಶೋಭಾ ಅವರ ಕಲ್ಪನೆಯಿಂದ ಮತ್ತೂ ವಿಸ್ತಾರಗೊಂಡಿತು. ಸಾತ್ತ್ವಿಕದ ಪರಮೋತ್ಕಟಸ್ಥಿತಿಯಲ್ಲಿ ಭರತನಾಗಿ, ಸೀತೆಯಾಗಿ, ಹನುಮಂತನಾಗಿ ರಸೋಜ್ವಲತೆಯನ್ನು ಬೆಳಗಿಸಿದ ಡಾ.ಶೋಭಾ ಅವರ ಅಭಿನಯಕ್ಕೆ ಅಂತಃಪುರ ಗೀತೆಯ 'ಆಭರಣ ನಿನಗೇತಕೆ' ಎಂಬ ನೃತ್ಯವೂ ಅನ್ವರ್ಥವಾಗಿತ್ತು. ಡಿವಿಜಿ ಅವರ ಸಾಹಿತ್ಯದ ನೃತ್ಯಾವತರಣಿಕೆಯಲ್ಲಿ ಬೇಲೂರಿನ ಶಿಲಾಬಾಲಿಕೆಯನ್ನೂ ಕಲ್ಪನೆಯಲ್ಲಿ ಮೂರ್ತೀಕರಿಸಿಕೊಂಡ ಯಾತ್ರಿಕನ ಪಿಸುಮಾತು ಕೂಡಾ ಸ್ಪಷ್ಟವಾಗಿತ್ತು. ಉತ್ತಮ ನೃತ್ಯಕಲಾವಿದೆಗೆ

**'ಸಹಜ ಕಲಿಕೆಗೆ ಅವಕಾಶ ಕೊಟ್ಟದ್ದಕ್ಕೆ ನೂರ್ಮಡಿ ಧನ್ಯತೆ ದೊರಕಿದೆ'**

'ಮಕ್ಕಳಿಗೆ ನೃತ್ಯಶಾಲೆಗಳಲ್ಲಿ ಗುರುಗಳು ಪಾಠ ಮಾಡುವುದು, ಹೇಳಿಕೊಟ್ಟದ್ದನ್ನಷ್ಟೇ ಕಲಿಯುವುದು ರೂಢಿ. ಆದರೆ ಮಕ್ಕಳಿಂದಲೂ ಸಾಕಷ್ಟು ಅಂಶಗಳನ್ನು ಕಲಿಯುವುದಿರುತ್ತದೆ ಎನ್ನುವುದು ಗೊತ್ತಾಗುವುದು ಇಂತಹ ವಿಶಿಷ್ಟ ಕಲ್ಪನೆಗಳನ್ನು ಜಾರಿಗೊಳಿಸಿದಾಗಲೇ ! ಸಂಯೋಜಕರಾಗಿ ನಾವು ಕಲಿಸಿಕೊಟ್ಟದ್ದಷ್ಟೇ ಅಲ್ಲ; ಕಲಿತ, ನಿಭಾಯಿಸಿದ ಅಂಶವೂ ಸಾಕಷ್ಟಿದೆ. ಅವರ ಕ್ರಿಯಾಶಕ್ತಿ, ಯೋಚನೆಗಳ ಮಟ್ಟ ಅಚ್ಚರಿ ತರಿಸುವಂತದ್ದು. ಅವರಿಗೆ ಎಲ್ಲಿಯೂ ಏಕತಾನತೆ ಅನ್ನಿಸದಂತೆ ಪಾಠ ಮಾಡುವುದು ನಮಗೂ ಒಂದು ಸವಾಲು. ನನಗಂತೂ ಪೂರ್ಣ ವಿಶ್ವಾಸವಿತ್ತು; ಮಕ್ಕಳೂ ಅವರವರ ನೃತ್ಯಗಳನ್ನು ತಾವು ತಾವೇ ಸಂಯೋಜನೆ ಮಾಡುವ ಮಟ್ಟದಲ್ಲಿರುತ್ತಾರೆ ಎಂಬುದು. ಎಷ್ಟೊಂದು ಆತ್ಮವಿಶ್ವಾಸ ಮಕ್ಕಳಲ್ಲಿ ಮನೆಮಾಡಿರುತ್ತದೆ ಎಂದರೆ ಅದನ್ನು ಬಂಧಿಸದೆ ಮುಕ್ತವಾಗಿ ಹೊರಬಿಟ್ಟಾಗ ಅವರಿಂದ ಹೊಮ್ಮುವ ನೃತ್ಯಗಳನ್ನು ನೋಡಲೆರಡು ಕಣ್ಣು ಸಾಲದು. ಜೊತೆಗೆ ಯಾವುದೇ ಭರತನಾಟ್ಯವನ್ನೇ ಮಾಡಬೇಕೆಂದು ಕಡ್ಡಾಯ ಮಾಡಿರಲಿಲ್ಲ. ಕರಾಟೆಯೋ, ಜಾನಪದವೋ, ಫ್ರೀಸ್ಟೈಲೋ ತಮಗಿಷ್ಟವಾಗುವುದುದನ್ನು ಔಚಿತ್ಯಪೂರ್ಣವಾಗಿ ಹೊಂದಿಸಲು ಅನುಕೂಲವಾಗುವಂತೆ ವಾತಾವರಣ ಕೊಟ್ಟಿದ್ದೆವು. ನಾಟ್ಯಶಾಸ್ತ್ರದ ಅಂಶಗಳನ್ನು ಹೇಳುತ್ತಾ ಸಹಜವಾಗಿರುವಂತೆ ಸೂಚಿಸಿದ್ದೆವು. ಅವರು ಬೇಕೆಂದಾಗಲೆಲ್ಲಾ ಜತಿ, ನಡೆ, ಸ್ವರಗಳನ್ನು ಸಂದರ್ಭಕ್ಕೆ ಸರಿಯಾಗಿ ಒದಗಿಸುತ್ತಿದ್ದೆವು. ಈ ಕಾರ್ಯಾಗಾರದಿಂದಾಗಿ ಮಕ್ಕಳಲ್ಲಿ ಪುರಾಣದ ಬಗ್ಗೆ ಆಸ್ಥೆ, ವರ್ತನೆಯ ಮೇಲೆ ಎಚ್ಚರಿಕೆ, ಅಧ್ಯಯನದ ಮೇಲೆ ಪ್ರೀತಿ, ವೈಯಕ್ತಿಕ ನಡತೆಯಲ್ಲಿ ಸುಧಾರಣೆ, ಮೌಲ್ಯಗಳ ಮೇಲೆ ಕಾಳಜಿ, ನೃತ್ಯವನ್ನು ಮಾಡುವುದಷ್ಟೇ ಅಲ್ಲ ನೋಡುವ ಕ್ರಮವೂ ಖಂಡಿತಾ ಮೂಡಿದೆ ಎಂದು ಹೇಳಬಲ್ಲೆ. ಚಿಣ್ಣರ ಪೋಷಕರು ಕೂಡಾ ನಾಟ್ಯಚಿಂತನ ಶಿಬಿರ ಮುಗಿದ ನಂತರದಲ್ಲಿ ತಮ್ಮ ಮಕ್ಕಳ ಮಾನಸಿಕ ಬೆಳವಣಿಗೆ, ಚುರುಕುತನ, ಧನ್ಯತೆ, ನೃತ್ಯಾಭ್ಯಾಸದ ಓದಿನತ್ತ ಆಸಕ್ತಿಯ ಬಗ್ಗೆ ಆಗಾಗ್ಗೆ ಹಂಚಿಕೊಳ್ಳುತ್ತಿದ್ದ ಸಂಭ್ರಮ ಮತ್ತಷ್ಟು ಕೃತಜ್ಞರಾಗುವಂತೆ ಮಾಡಿದೆ.'

***–ಮನೋರಮಾ ಬಿ.ಎನ್, ಕಾರ್ಯಾಗಾರದ ಸಂಯೋಜಕರು ಮತ್ತು ನೂಪುರ ಭ್ರಮರಿಯ ಅಧ್ಯಕ್ಷೆ, ಸಂಪಾದಕರು***



ಸಾಹಿತ್ಯವನ್ನು ಔಚಿತ್ಯಪೂರ್ಣವಾಗಿ ಸಮನ್ವಯಿಸಿ ಕೊಳ್ಳುವ ಕಲೆ ತಿಳಿದಿರುತ್ತದೆ ಎಂಬುದಕ್ಕೆ ಕುವೆಂಪು, ಡಿವಿಜಿ ಅವರ ಕಾವ್ಯಸವಾಗವುವೇ ಕಾರಣ ವಾಯಿತು. ಜತಿ, ಸ್ವರಕಲ್ಪನೆಗಳನ್ನು ಸಾಹಿತ್ಯದ ಔಚಿತ್ಯಕ್ಕೆ, ನೃತ್ಯಸೌಂದರ್ಯಕ್ಕೆ ಪೂರಕವಾಗಿ ದುಡಿಸಿಕೊಂಡು ಆಯಾಯ ನೃತ್ಯಬಂಧಗಳ ಸಮಗ್ರತೆಯನ್ನು ಕಣ್ಣೆವೆಗೆ ತಂದ ಡಾ. ಶೋಭಾ, ನೃತ್ಯಾವರಣಕ್ಕೆ ಹೊಸ ಸಂವಿಧಾನವನ್ನೇ ಬರೆದರು ಎಂದರೆ ಖಂಡಿತಾ ಅದು ಅತಿಶಯವಲ್ಲ.

ಇವಿಷ್ಟು ಹೆಚ್ಚಾಗಿ ಇಂದಿನಕಾಲದ ನೃತ್ಯಪ್ರದರ್ಶನದಲ್ಲಿ ಕಾಣಸಿಗದ ಸಾಹಿತ್ಯವನ್ನು ಡಾ.ಶೋಭಾ ಪುನರ್ ಸೃಷ್ಟಿಸಿದರೆ, ಪ್ರಸಿದ್ಧವಾದ 'ಗುಮ್ಮನ ಕರೆಯದಿರೆ' ಕೃತಿಗೆ ಕೃಷ್ಣನ ಬಾಲ್ಯಕ್ಕೆ ಜಿಗಿದು ಮುಗ್ಧಮುರಾರಿಯ ಆಂತರ್ಯದ ಒಳಸುಳಿಗಳನ್ನು, ಯಶೋದೆಯ ಹುಸಿಮುನಿಸಿನ ಪ್ರೀತಿಯನ್ನು ಉಣಬಡಿಸಿದರು. 'ಬೆಟ್ಟದ ಮೇಲೊಂದು ಮನೆಯ ಮಾಡಿ'– ಎಂಬ ಅಕ್ಕಮಹಾದೇವಿ ಅವರ ವಚನದ ಅನುಭಾವಕ್ಕೆ ಅನುಭವದ, ಲೋಕಧರ್ಮಿಯ ಆಯಾಮವನ್ನು ನಾಟ್ಯಕ್ಕೆ ಎಷ್ಟರಮಟ್ಟಿಗೆ ಒಗ್ಗಿಸಿದರೆಂದರೆ ನೆರೆದ ಮಕ್ಕಳ ಮುಖದಲ್ಲೂ ಸಂತೋಷ, ನೃತ್ಯವನ್ನು ಅರ್ಥ ಮಾಡಿಕೊಂಡ ಖುಷಿ ಇಂಚಿಂಚೂ ಹರಿಯುತ್ತಿತ್ತು. ಬೆಟ್ಟದ ಕಾಡಿನ ನಡುವಿನ ಪ್ರಾಣಿಗಳ ಆಂಗಿಕವನ್ನೂ, ಸಂತೆಯ ಬಿಕ್ಕಟ್ಟು, ಚೌಕಾಸಿಗಳನ್ನು ನೇರಾನೇರಾ ರಂಗದ ಆಯಾಮಕ್ಕೆ ಒಗ್ಗಿಸಿದ ಡಾ.ಶೋಭಾ ಸಮುದ್ರದಂಚಿನ ತೆರೆಗಳ ಬಡಿತಕ್ಕೆ ಬೆದರದ ಕರಾವಳಿಯ ಜನಸಮೂಹದ ನಡೆನುಡಿಗಳಿಗೆ ಪರೋಕ್ಷವಾಗಿ ಇಂಬಾದರು. ವಚನದ ಅಂತ್ಯಕ್ಕೆ ನರನರಗಳಲ್ಲಿ ಶಾಂತರಸವನ್ನು ಆಸ್ವಾದಿಸಿದ ಡಾ.ಶೋಭಾ ಅವರ ರಂಗಕ್ರಿಯೆಯಲ್ಲಿ ಪ್ರೇಕ್ಷಕವರ್ಗವೂ ಶಾಂತರಸದ ಚಿನ್ಮಯ ಸ್ವರೂಪವನ್ನು ಆನಂದಿಸಿತು.

ಅವರ ಶಿಷ್ಯೆಯರಾದ ಮೇಘಾ ಮತ್ತು ಆರತಿಯವರ ನೃತ್ಯದಲ್ಲಿ ಮೂಡಿಬಂದ 'ಶಿವಂಶಂಕರಂ ಶಂಭುಮೀಶಾನಮೀಳೆ'–ಶಿವಸ್ತುತಿ, ಆಡಿದನೋ ರಂಗ, 'ಗೀತಧುನಿಕ್ ತಕ'– ಧನಶ್ರೀ ತಿಲ್ಲಾನ, ಕೌತ್ವ, ಜತಿಸ್ವರಗಳಂತಹ ಎಂದಿನ ಮಾದರಿಯ ನೃತ್ಯಸಾಹಿತ್ಯವೂ ಹೊಸರೂಪದಲ್ಲಿ ಉದ್ಧತ, ಸುಕುಮಾರದ ಸೂಕ್ಷ್ಮವೆನಿಸುವ ನೃತ್ಯದ ಚೆಲುವನ್ನು ಕಾಣುವಲ್ಲಿ ಅನುಕೂಲವಾದವು.

ಈ ಸಂದರ್ಭ ಉಪಸ್ಥಿತರಿದ್ದ ಹೆಸರಾಂತ ಚಿಂತಕ ಲಕ್ಷ್ಮೀಶ ತೋಳ್ಪಾಡಿಯವರು ಕಲಾವಿದರನ್ನು ಗೌರವಿಸಿ, 'ಡಾ.ಶೋಭಾ ಅವರ ನೃತ್ಯಕಾರ್ಯಕ್ರಮ ಕಲಾಭಿವ್ಯಕ್ತಿಯ ಅತ್ಯುನ್ನತ ಗುರಿಯಾದ ಶಾಂತರಸವನ್ನು ತಲುಪಿದೆ, ಆ ಮೂಲಕ ಪ್ರೇಕ್ಷಕರಮಣೀಯವಾಗಿ ಆನಂದಕರವಾಗಿ ಮೂಡಿಬಂದಿದೆ. ನೋಡದೇ ಹೋಗಿದ್ದರೆ ಒಂದು ಅತ್ಯುತ್ತಮ ಕಲಾಭಿವ್ಯಕ್ತಿಯ ಗ್ರಹಣವನ್ನು ಕಳೆದುಕೊಳ್ಳುತ್ತಿದ್ದೆ'



ಎಂದು ಸುಂದರಸಂಜೆಯನ್ನು ಕಣ್ತುಂಬಿಕೊಂಡರೆ; ಮೂಕವಿಸ್ಮಿತರಾಗಿ ಆನಂದಕ್ಕೆ ಒದ್ದೆಯಾದ ಕಣ್ಣಂಚನ್ನು ಒರೆಸಿಕೊಂಡವರು ಹಲವು ಮಂದಿ.

**ಸಮಾರೋಪ ಸಂಭ್ರಮ**



ಕಾರ್ಯಾಗಾರದಲ್ಲಿ ದಿನಕ್ಕೊಂದು ನಾಟ್ಯಶಾಸ್ತ್ರದ ಕಥಾಮಾಲಿಕೆಯ ಉಪನ್ಯಾಸ, ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನ, ಸಂವಾದ, ಪ್ರಶ್ನೋತ್ತರಗಳು ಮುಕ್ತವಾಗಿ ನಡೆದವು. ಶಿಬಿರದಲ್ಲಿ ಭಾಗವಹಿಸಿದ ಅಭ್ಯರ್ಥಿ/ವಿದ್ಯಾರ್ಥಿಗಳ ಕಲ್ಪನೆ, ಶ್ರಮ, ಆಸಕ್ತಿಯೂ ಅಭಿನಂದನೀಯ. ಅದು ಏಳನೇ ದಿನದ ಸಮಾರೋಪ ಸಂಜೆಯುಲ್ಲಿ ವಿದ್ಯುಕ್ತವಾಗಿ ತೋರಿಬಂದಿತ್ತು. ಭಾಗವಹಿಸಿದ 26 ವಿದ್ಯಾರ್ಥಿಗಳಿಂದ 16 ವಿವಿಧ ಬಗೆಯ ನೃತ್ಯಸಂದರ್ಭಗಳು ನಿರ್ದೇಶಿತವಾಗಿದ್ದವು. ಅವುಗಳಲ್ಲಿ ಕೆಲವು ನೃತ್ಯನಿರ್ದೇಶನಗಳನ್ನು ಆಯ್ದು ಸಮಾರೋಪ ಸಂಜೆಯುಲ್ಲಿ ಸೊಗಸಾದ ನೃತ್ಯ ಕಾರ್ಯಕ್ರಮವೂ ನಡೆದು ನೆರೆದವರ ಮೆಚ್ಚುಗೆಗೆ ಪಾತ್ರವಾಯಿತು. ಮಕ್ಕಳೇ ಸಮೂಹವಾಗಿ ನಿರ್ದೇಶನ ನೀಡಿ ರೂಪಿಸಿದ ನೃತ್ಯಗುಚ್ಛ ಅದೆಷ್ಟು ಸೊಗಸಾಗಿತ್ತೆಂದರೆ ವೃತ್ತಿಪರ ಕಲಾವಿದರೂ ನಾಚುವಷ್ಟು, ನೋಡಿ ಅನುಸರಿಸುವಷ್ಟು. ಯಾವೊಂದು ಅಂಶವೂ ನಿರ್ಭಾವುಕವಾಗಿರಲಿಲ್ಲ. ಯಾವೊಂದು ನೃತ್ಯದ ಭಾಗವೂ ಅರ್ಥವಾಗದೇ ಉಳಿಯಲಿಲ್ಲ. ಬದಲಾಗಿ ಪ್ರದರ್ಶಿಸಲಾದ ಕಥೆಯ ಒಳಸುಳಿಗಳು ಪ್ರೇಕ್ಷಕರಿಗೆ ಅರ್ಥವಾಗಿ ತಲೆದೂಗುವಷ್ಟು ನಯನ ಮನೋಹರವಾಗಿತ್ತು. ಇದಕ್ಕೆ ಪೂರಕವಾಗಿ ವಿದ್ಯಾರ್ಥಿ ಗಳೇ ತಮ್ಮ ವೇಷಭೂಷಣದ ಹೊಂದಾಣಿಕೆಯನ್ನು ಸ್ವತಃ ತಮ್ಮ ಕಲ್ಪನೆಗನುಗುಣವಾಗಿ ಮಾಡಿ ಕೊಂಡಿದ್ದರು ಎಂಬುದು ಗಮನಿಸಬೇಕಾದ ಅಂಶ !

ಕಾರ್ಯಾಗಾರದಲ್ಲಿ 8 ವರುಷದ ಮಕ್ಕಳಿಂದ 25 ವರ್ಷದ ಯುವಕರೂ ಪಾಲ್ಗೊಂಡಿದ್ದರು. ಆಗತಾನೇ ನೃತ್ಯಾಭ್ಯಾಸಕ್ಕೆ ಹೆಜ್ಜೆಯಿಟ್ಟವರಿದ್ದರು. ಕೆಲವರು ಅದಾಗಲೇ ವಿದ್ವತ್ತು ಪದವಿಯನ್ನು ಪೂರೈಸಿಕೊಂಡವರಿದ್ದರು. ಬೇರೆ ಬೇರೆ ನೃತ್ಯಶಾಲೆಗಳ ಭಿನ್ನ ಭಿನ್ನ ನೃತ್ಯಕ್ರಮದವರಿದ್ದರು. ಆದರೆ ಈ ವಯೋಮಾನ, ಕಲಿಕೆಯ ಭೇದಗಳಿಂದಾಚೆಗೆ ಎಲ್ಲರಿಗೂ ಈ ಶಿಬಿರ ಆಪ್ತವಾಗಿದೆಯೆಂದರೆ ಅದರ ಒಟ್ಟು ಯೋಜನೆಯ ಹಿಂದಿನ ಸಮಗ್ರತೆಯ ಯೋಚನೆ–ಪರಿಕಲ್ಪನೆಯನ್ನು ಒಮ್ಮೆ ಊಹಿಸಿ!

**‘ಒಂದುವಾರ ಹೇಗೆ ಕಳೆಯಿತು ಅಂತ ಗೊತ್ತಾಗ್ತಾ ಇಲ್ಲ’**

‘ಪುರಾಣ ಕಥೆಯನ್ನು ನೃತ್ಯಕ್ಕೆ ಹೊಂದಿಸಿಕೊಳ್ಳಲು ಬೇಕಾಗುವ ಅರ್ಥ, ಸ್ವಾರಸ್ಯ, ಅಭಿನಯದ ಪ್ರಮಾಣ, ಅದು ಜೀವನಕ್ಕೆ ಒಪ್ಪುವ ರೀತಿಯನ್ನು ಹೇಳಿಕೊಟ್ಟಿದ್ದಾರೆ. ನಾವು ಈವರೆಗೂ ಕಂಡು ಕೇಳಿರದ ಕಥೆಯ ಎಲ್ಲಾ ಬಗೆಯ ಮಜಲುಗಳನ್ನು ಹೇಳುವುದನ್ನು ಕೇಳಿ ನಂತರ ಅದನ್ನು ನಾವೇ ಕೊರಿಯೋಗ್ರಫಿ ಮಾಡುವುದು ಮತ್ತೂ ಸಂತೋಷದ, ಸವಾಲಿನ ಸಂಗತಿ. ಅದೂ ಯಾವುದೇ ಕಟ್ಟುಪಾಡು, ನಿರ್ಬಂಧಗಳಿಲ್ಲದೆ ಆಟವಾಡಿದಂತೆ ಖುಷಿಖುಷಿಯಾಗಿ ನಲಿಯುತ್ತಾ ಡ್ಯಾನ್ಸ್ ಮಾಡುವುದು ನಮಗಿಷ್ಟವಾಯಿತು. ಒಂದು ವಾರ ಹೇಗೆ ಕಳೆಯಿತು ಎಂಬುದೇ ಗೊತ್ತಾಗಲಿಲ್ಲ. ದೂರದೂರಿನಿಂದ ಬಂದು ತಲುಪುವ ತನಕವೂ ನಮಗಿದ್ದದ್ದು ಒಂದೇ ಟೆನ್ಶನ್– ಕಲಿಯುವ ವಿಷಯಗಳಲ್ಲಿ ಯಾವುದೂ ತಪ್ಪಿಹೋಗಬಾರದು ಎಂಬುದು ಒಂದೇ. ’

– ***ಶಿಬಿರಾರ್ಥಿಗಳ ಒಕ್ಕೊರಲ ಮಾತು.***

**‘ಬೇಸಿಗೆ ಶಿಬಿರಗಳ ಸಾಲಿಗೆ ಹೊಸ ಕಲ್ಪನೆಯಿದು’**

ಬೇಸಿಗೆ ಶಿಬಿರಗಳಲ್ಲಿ ನಾಟ್ಯದ ಕುರಿತಾದ ಚಿಂತನೆಗಳನ್ನು ತಿಳಿಸುವ ಕಾರ್ಯಾಗಾರಗಳ ಸಂಖ್ಯೆ ಬಹಳ ವಿರಳ. ಆದರೆ ಇಂತಹ ಅತ್ಯಪೂರ್ವ ಕಾರ್ಯವನ್ನು ನೂಪುರ ಭ್ರಮರಿ ಮತ್ತು ಮೂಕಾಂಬಿಕಾ ಕಲ್ಚರಲ್ ಅಕಾಡೆಮಿಯ ಸಮಸ್ತರೂ ಕೈಗೆತ್ತಿಕೊಂಡು ಜವಾಬ್ದಾರಿಯುತವಾಗಿ ನಡೆಸಿಕೊಟ್ಟು ಅರಿವನ್ನು ಮೂಡಿಸಿದ್ದಾರೆ. ದೇಶೀಯ ನಾಟ್ಯವಿಶೇಷಗಳನ್ನು ಅರ್ಥಮಾಡಿಸುವ ಇಂತಹ ಹೊಸ ಕಲ್ಪನೆಗಳಿಂದ ಮಕ್ಕಳು ಹೆಚ್ಚಿನ ಪ್ರಯೋಜನ ಪಡೆಯುತ್ತಾರೆ, ಮತ್ತು ಇದು ನಾಟ್ಯದ ವಿಕಾಸಕ್ಕೆ ಕಾರಣವಾಗಲಿ.

***– ಕೃಷ್ಣನಾರಾಯಣ ಮುಳಿಯ, ಜೇಸೀ ಪುತ್ತೂರು ಅಧ್ಯಕ್ಷ, ಮುಳಿಯ ಜ್ಯುವೆಲ್ಸ್‌ನ ವ್ಯವಸ್ಥಾಪಕ ನಿರ್ದೇಶಕರು***




ಸಮಾರೋಪದಲ್ಲಿ ನೃತ್ಯಕ್ರಮದ ಭಿನ್ನತೆ ಕಾಣದೆ ಸೌಂದರ್ಯವೇ ಎಲ್ಲರಿಗೂ ಆಪ್ಯಾಯಮಾನವಾಗಿ ತ್ತೆಂದರೆ ಇದಕ್ಕಾಗಿ ಆಯೋಜಕರು ಮಾಡಿಕೊಂಡಿರುವ ಹೋಂ ವರ್ಕ್‌ನ್ನು ಒಮ್ಮೆ ಆಲೋಚಿಸಿ ! ಎಷ್ಟೊಂದು ಅಧ್ಯಯನಶೀಲ ವೆಂದರೆ ಕಾರ್ಯಾಗಾರ ದಿಂದಾಚೆಗೂ ಮಕ್ಕಳ ಸರ್ವತೋಮುಖ ನೃತ್ಯದ ಬೆಳವಣಿಗೆಯನ್ನು, ಪ್ರತಿಭೆಯನ್ನು ಅಂದಾಜಿಸಿ, ಒರೆಗೆ ಹಚ್ಚಿಸಿ ಬೆಳೆಸುವ ರೀತಿ ! ಇದಕ್ಕೆ ಅಲ್ಲಿಗೆ ಬಂದ ಎಲ್ಲ ಅಭ್ಯರ್ಥಿಗಳಷ್ಟೇ ಅಲ್ಲದೆ, ಪೋಷಕರೂ, ಪ್ರೇಕ್ಷಕರೂ ಒಕ್ಕೊರಲಿನಿಂದ ಆಗಾಗ್ಗೆ ಇಂತಹ ಶಿಬಿರಗಳು ನಡೆಯಲೇಬೇಕು ಎಂದು ಒತ್ತಾಯಿಸಿದ್ದರಲ್ಲೇ ಅದರ ಹೆಚ್ಚುಗಾರಿಕೆ ತಿಳಿಯುತ್ತದೆ. ಕೆಲವರಂತೂ ಶಿಬಿರ ಮುಗಿದದ್ದಕ್ಕೆ ಕಣ್ಣಂಚಿನಲ್ಲಿ ನೀರು ತುಳುಕಿಸಿದ್ದೂ ಕಾಣುವಂತಿತ್ತು. ‘ಮತ್ತೆ ಯಾವಾಗ ನಡೆಸುತ್ತೀರಿ?’, ‘ಆರು ತಿಂಗಳಿಗೊಮ್ಮೆಯಾದರೂ ನಡೆಸಲೇಬೇಕು ಎಂದು ಆಗ್ರಹದಿಂದ ದುಂಬಾಲು ಬೀಳುವುದೂ ಕೇಳಿಬರುತ್ತಿತ್ತು.

ಕಾರ್ಯಾಗಾರದ ಸಮಾರೋಪದಂದು ಉಪಸ್ಥಿತರಿದ್ದು ‘ಅಭಿನಯ’ದ ಕುರಿತಾಗಿ ಸಾಭಿನಯಸಹಿತ ಪ್ರಾತ್ಯಕ್ಷಿಕೆ, ಉಪನ್ಯಾಸ ನೀಡಿದ ವಿದ್ವಾಂಸ, ರಂಗಕರ್ಮಿ, ಕವಿ, ಯಕ್ಷಗಾನ ರಚನೆಕಾರ, ‘ರಾಮಕಥಾ’ ರೂಪಕ ನಿರ್ದೇಶಕ, ನಟ ವಿದ್ವಾನ್ ಕೊರ್ಗಿ ಶಂಕರ ನಾರಾಯಣ ಉಪಾಧ್ಯಾಯ ಅವರ ಮಾತುಗಳು ಉಲ್ಲೇಖನೀಯ. “ಅಭಿನಯದಲ್ಲಿ ಕಲಾವಿದನ ಕಣ್ಣು ಕಿಟಕಿ ಇದ್ದ ಹಾಗೆ. ಅದರ

**‘ಅಭಿನಯದ ವಿಷಯದಲ್ಲಿ ಮಕ್ಕಳೇ ಮೊದಲಿಗರು, ಸರಳರು’**

‘ಮಗುವಿನ ಹಾಗೆ ಶಿಬಿರಕ್ಕೆ ಬಂದೆ. ಕಲಿಯುವುದು ಸಾಕಷ್ಟಿದೆ ಎಂಬುದು ಅರ್ಥವಾಗಿದೆ. ತೃಪ್ತಿ ಖಂಡಿತಾ ಇದೆ. ಮಕ್ಕಳಿಂದಲೂ ಕಲಿಯುವ ಸೌಭಾಗ್ಯ ! ನಾಟ್ಯದ, ಅಭಿನಯದ ವಿಷಯದಲ್ಲಿ ಪುಟ್ಟಮಕ್ಕಳಿಂದಲೂ ಕಲಿಯುವುದು ಸಾಕಷ್ಟಿದೆ. ನಮ್ಮಂಥ ದೊಡ್ಡವರೂ ಮಕ್ಕಳಿಂದ ಯಾವ ಮಟ್ಟಿಗೆ ಜ್ಞಾನ ಹೆಚ್ಚಿಸಿಕೊಂಡರೆಂದರೆ ಮಕ್ಕಳು ದೊಡ್ಡವರಾದರು; ದೊಡ್ಡವರೆನಿಸಿಕೊಳ್ಳುವಂತ ನಮ್ಮಂತವರು ಮಕ್ಕಳಾದರು. ಅಭಿನಯದ ವಿಷಯದಲ್ಲಿ ಮಕ್ಕಳೇ ಮೊದಲಿಗರು, ಸರಳರು ಎಂದರ್ಥವಾಯಿತು. ದಿನದಿಂದ ದಿನಕ್ಕೆ ಸವಾಲುಗಳು ಏರುತ್ತಾ ಹೋಗುವ ಅದಕ್ಕೆ ತಕ್ಕಂತೆ ನಮ್ಮ ವರ್ತನೆಗಳನ್ನು, ನೃತ್ಯವನ್ನು ರೂಪಿಸಿಕೊಳ್ಳುವ ಎಲ್ಲಾ ಚಿಂತನ ಮಂಥನ ನಡೆದಿದೆ. ನಮ್ಮಿಂದ ಎಷ್ಟರಮಟ್ಟಿಗೆ ಇದರ ಔಟ್ಪುಟ್ ಹೊರಜಗತ್ತಿಗೆ ನೀಡಲ್ಪಡುತ್ತದೆ ಎಂಬುದು ನಮಗೆ ತಿಳಿದಿಲ್ಲ. ಆದರೆ ಈ ಕಾರ್ಯಾಗಾರವು ಕಲೆಯ ಕುರಿತ, ಬದುಕನ್ನು ನೋಡುವ ಕುರಿತ ಜವಾಬ್ದಾರಿಯನ್ನು ಹೆಚ್ಚಿಸಿದೆ.’

***– ಶ್ರೀಮತಿ ಸುಮಂಗಲಾ, ಶಿಬಿರಾರ್ಥಿ, ಉಪನ್ಯಾಸಕಿ, ಕುಕ್ಕೆಸುಬ್ರಹ್ಮಣ್ಯ.***

**‘ಮಕ್ಕಳಿಗೆ ಶಿಬಿರ ಬಿಟ್ಟು ಹೋಗಲು ಮನಸ್ಸಿಲ್ಲದೆ ಕಣ್ಣುಂಬಿಕೊಂಡರು’**

ಈ ಮಾದರಿಯ ಶಿಬಿರದ ಕಲ್ಪನೆ ಮತ್ತು ಸಂಯೋಜನೆಯೇ ನೃತ್ಯಕ್ಷೇತ್ರಕ್ಕೆ ಹೊಸತು. ಇದಕ್ಕಾಗಿ ಮನೋರಮಾರಿಂದ ಮೊದಲ್ಗೊಂಡು ನಾವೆಲ್ಲರೂ ಸಾಕಷ್ಟು ಚಿಂತನೆ ನಡೆಸಿದ್ದೇವೆ. ಮೊದಮೊದಲಿಗೆ ಇದರ ಸಫಲತೆಯ ಬಗ್ಗೆ ಸಂದೇಹಗಳಿದ್ದದ್ದು ನಿಜ. ಆದರೆ ಈಗ ನಾಟ್ಯದ ಶಿಬಿರವೊಂದು ಕೇವಲ ನೃತ್ಯಗಳನ್ನು ಹೇಳಿಕೊಡಲು ಮಾತ್ರ ಇರುವುದಿಲ್ಲ; ಬದಲಾಗಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಸಹಾಯಕವಾಗುವಂತೆ ಅವರಿಂದಲೇ ವಿನ್ಯಾಸಗೊಳ್ಳುತ್ತದೆ ಎಂಬುದು ಕಲಾವಿದರೆಲ್ಲರಿಗೂ ಗೊತ್ತಾಗಿದೆ. ಚಿಕ್ಕಮಕ್ಕಳೂ ಕೂಡಾ ಮಧ್ಯಾಹ್ನ ಶಿಬಿರ ಮುಗಿಸಿ ಮನೆಗೆ ಹೋದಾಗ ಇಡೀ ದಿನ ಶಿಬಿರ ಇಲ್ಲವಲ್ಲ ಎಂದು ಅಮ್ಮಂದಿರಲ್ಲಿ ಅಳುತ್ತಿದ್ದರೆಂದು ಪೋಷಕರೇ ಹೇಳುತ್ತಿದ್ದರು. ಇನ್ನೂ ಕೆಲವು ಮಕ್ಕಳಂತೂ ವಾರದ ಶಿಬಿರದ ಪ್ರಯೋಜನ ಪಡೆದು ಹೊರಡುವಾಗ ಕಣ್ಣೀರು ಹಾಕಿ ಹಟ ಮಾಡಿದ ಉದಾಹರಣೆಯೂ ಇದೆ. ಈ ನಿಟ್ಟಿನಲ್ಲಿ ನಮ್ಮಿಂದ ಆರಂಭಗೊಂಡ ವಿನೂತನ ಹೆಜ್ಜೆ ಮುಂದೆ ಕ್ಷೇತ್ರಕ್ಕೇ ಮಾದರಿಯಾಗಿ ನಿಲ್ಲಲಿದೆ ಎಂಬ ಸಾರ್ಥಕತೆ ಮೂಡಿದೆ. ಇದಕ್ಕೆ ಗುರುಗಳು, ಕಲಾವಿದರು ತಮ್ಮ ಮನಸ್ಸಿನ ದ್ವಂದ್ವಗಳನ್ನು ಬದಿಗಿಟ್ಟು ಮುಕ್ತ ಮನಸ್ಸಿನಿಂದ ಸಹಕಾರ ನೀಡಿದರೆ ಮುಂದಿನ ವರುಷಗಳಲ್ಲಿ ಮತ್ತಷ್ಟು ಭರವಸೆಯ ನೃತ್ಯಸಂಯೋಜಕರು ನಿರ್ಮಾಣಗೊಳ್ಳುತ್ತಾರೆ. ಒಟ್ಟಿನಲ್ಲಿ ಮಕ್ಕಳ ವ್ಯಕ್ತಿತ್ವವಿಕಸನಕ್ಕೂ ಈ ‘ನಾಟ್ಯಚಿಂತನ’ ಸಾಕಷ್ಟು ಕೊಡುಗೆ ನೀಡಿದೆ ಎಂಬ ಭರವಸೆಯಿದೆ.’– ***ದೀಪಕ್ ಕುಮಾರ್, ಕಾರ್ಯಾಗಾರದ ಸಂಯೋಜಕರು, ಮೂಕಾಂಬಿಕಾ ಕಲ್ಚರಲ್ ಅಕಾಡೆಮಿಯ ನಿರ್ದೇಶಕರು***

ಮೂಲಕ ದೇಹವು ಬೆಳಕನ್ನು ಕಾಣುತ್ತದೆ. ಅಭಿನಯ ಮುಖಕ್ಕೆ ಮಾತ್ರ ಸೀಮಿತವಲ್ಲ. ಆದರೆ ಮುಖವನ್ನು ಅಭಿನಯದಲ್ಲಿ ಬೆಳಗಿಸು ವುದರಿಂದ ಜನರಿಗೆ ನಮ್ಮ ಅನುಭವವನ್ನು ತಿಳಿಸಬಹುದು. ಅನುಭವದಿಂದ ಅಭಿನಯ ಹೆಚ್ಚು ಮಾಗುತ್ತದೆ. ಅನುಭವವೇ ಅಭಿನಯಕ್ಕೆ ಪೋಷಣೆ ಕೊಡುತ್ತದೆ. ಹಾಗೆಂದು ಅಭಿನಯ ಮಾಡುವುದಕ್ಕೆ ಬರುತ್ತದೆಯೆಂದುಕೊಂಡು ಎಲ್ಲವನ್ನೂ ಎಲ್ಲಾ ಸಮಯದಲ್ಲೂ ಮಾಡಲಾಗುವುದಿಲ್ಲ. ಕಲಾವಿದ ನಿಗೆ ಈ ಸಂದರ್ಭ ಬೇಕಾದದ್ದು ಔಚಿತ್ಯಪ್ರಜ್ಞೆ. ಕನ್ನಡಿಯ ಮುಂದೆ ನಿಂತು ಅಭ್ಯಾಸ ಮಾಡುತ್ತಾ ಅಭಿನಯ ವನ್ನು ಗಮನಿಸಿದರೆ ಹೆಚ್ಚು ಪಕ್ವತೆ ಬರುತ್ತದೆ.’

ಈ ಸಂದರ್ಭ ಅಭ್ಯರ್ಥಿಗಳಾದ ಸುಮಂಗಲಾ, ಸೌಂದರ್ಯ, ಆದ್ಯ ಸುಲೋಚನಾ, ವಿಸ್ಮಯ ಮತ್ತು ಭೂಮಿಕಾ ಶಿಬಿರದ ಕುರಿತ ಅನುಭವಗಳನ್ನು ಹಂಚಿಕೊಂಡರು. ನಂತರ ಪಾಲ್ಗೊಂಡ ಎಲ್ಲ ಅಭ್ಯರ್ಥಿ ಗಳಿಗೆ ಗಣ್ಯರಿಂದ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಕಥಾ ನಿರೂಪಣೆ/ಸಾಹಿತ್ಯ ರಚನೆಯಲ್ಲಿ ಮನೋರಮಾ ಬಿ.ಎನ್; ಗಾಯನದಲ್ಲಿ ವಿ। ಪ್ರೀತಿಕಲಾ ದೀಪಕ್ ಕುಮಾರ್ ಮತ್ತು ನಟುವಾಂಗದಲ್ಲಿ ವಿ। ದೀಪಕ್ ಕುಮಾರ್, ವಿ। ಗಿರೀಶ್ ಕುಮಾರ್, ಆಯೋಜನೆಯಲ್ಲಿ ವಿಷ್ಣುಪ್ರಸಾದ್ ನಿಡ್ವಾಜೆ, ಭವಾನಿಶಂಕರ ಆಚಾರ್ಯ ಸಹಕರಿಸಿದರು. ಕಾರ್ಯಾಗಾರಕ್ಕೆ ಮಂಗಳೂರು, ವಿಟ್ಲ, ನೆಲ್ಯಾಡಿ, ಕೊಕ್ಕಡ, ಸುಬ್ರಹ್ಮಣ್ಯ, ಸುಳ್ಯ, ಪುತ್ತೂರಿನಿಂದ ಚಿಣ್ಣರು, ಹಿರಿಯ ನೃತ್ಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಈ ಶಿಬಿರ ಮಕ್ಕಳಿಗೆ ಹೆಚ್ಚು ಆಪ್ತವಾಗಲು ಕಾರಣ– ಇಂದಿನ ಕಾಲಕ್ಕೆ ಅಪರೂಪವಾಗುತ್ತಿರುವ



ಕಥೆಗಳನ್ನು ಹೇಳುವ ಕೊರತೆಯನ್ನು ತುಂಬಿದ್ದರ ಮೂಲಕ. ಕಥೆಗಳ ಕಲ್ಪನೆಯಲ್ಲಿ ಮಿಂದೆದ್ದ ಮಕ್ಕಳು ಎಷ್ಟೊಂದು ಕ್ರಿಯಾಶೀಲರಾಗಿದ್ದರೆಂದರೆ ಮೌಕಿಕ ತರಗತಿ ಮುಗಿಯುವ ವೇಳೆಗಾಗಲೇ ತಮ್ಮ ತಂಡಗಳಲ್ಲಿ ತಾವು ಯಾವ ಕಥೆಯನ್ನು ಎಷ್ಟರಮಟ್ಟಿಗೆ ಬೆಳೆಸಿಕೊಳ್ಳಬೇಕು, ಅದರ ವಿನ್ಯಾಸ ಹೇಗಿರಬೇಕು, ಎಷ್ಟು ಸಾಹಿತ್ಯವನ್ನು ಎಲ್ಲಿ ಬಳಸಬೇಕು, ಜತಿ/ನಡೆ/ಸ್ವರ ಕಲ್ಪನೆಗಳು ಎಲ್ಲಿ ಮೂಡಿಬರಬೇಕು ಎಂಬುದರಲ್ಲೆಲ್ಲಾ ಕರಾರುವಕ್ಕಾಗಿ ನಿರ್ಣಯ ಕೊಡುತ್ತಿದ್ದರು. ಯಾವ ಬಗೆಯ ಆಂಗಿಕ–ವಾಚಿಕ–ಸಾತ್ತ್ವಿಕ ಅಭಿನಯವಿರಬೇಕೆಂದೆಲ್ಲಾ ನಿಷ್ಕರ್ಷೆ ಮಾಡಿಕೊಳ್ಳುತ್ತಿದ್ದರು. ಕೊನೆಯಲ್ಲಿ ನೃತ್ಯಕ್ಷೇತ್ರದ ಪ್ರಯೋಗಕ್ಕೆ ತೀರಾ ಅಪರೂಪದ ಕಥೆಗಳಾದ ನಾಟ್ಯೋತ್ಪತ್ತಿ, ಅಪ್ಸರಸೃಷ್ಟಿ, ಪ್ರಥಮನಾಟ್ಯಪ್ರಯೋಗ, ಜರ್ಜರ, ಸಮವಕಾರ, ಡಿಮ, ಅವನದ್ಧ ವಾದ್ಯನಿರ್ಮಾಣ, ವೃತ್ತಿವಿಕಲ್ಪದ ಕಥೆಗಳನ್ನು ನೃತ್ಯವಾಗಿ ಪ್ರದರ್ಶಿಸಿದರು.

ನಾಟ್ಯಚಿಂತನದಲ್ಲಿ ಶಿಬಿರಾರ್ಥಿಗಳು ಏನೆಲ್ಲಾ ಕಲಿತರು ಎಂಬುದನ್ನು ಅಕ್ಷರರೂಪದಲ್ಲಿ ಹೇಳಿ ಮುಗಿಸಲು ಸಾಧ್ಯವಿಲ್ಲ. ನಾಟ್ಯಶಾಸ್ತ್ರ, ಅದರ ರಸಸ್ವರೂಪ, ಅದನ್ನು ಅಳವಡಿಸಿಕೊಳ್ಳಲು ಮಾಡಬೇಕಾದ ತಯಾರಿ, ನೃತ್ಯದ ಸೌಂದರ್ಯಕ್ಕೆ ದುಡಿಯಬೇಕಾದ ಕ್ರಮ ಹೇಗಿರಬೇಕು? ಕಥೆಯ ಪೋಷಣೆಯನ್ನು ಮಾಡುವ ದಿಕ್ಕು ಯಾವುದು? ಎಂಬುದರಿಂದೆಲ್ಲಾ ಮೊದಲ್ಗೊಂಡು ನೃತ್ಯದ ಮೂಲಕ ಬದುಕಿನ ಸಾರ್ಥಕತೆಯನ್ನು ಪಡೆಯುವ ಎಲ್ಲಾ ಬಗೆಯ ಜೀವನಮೌಲ್ಯ ಸಂಗತಿಗಳೂ ವಿದ್ಯಾರ್ಥಿಗಳಿಗೆ ಪ್ರಾಪ್ತವಾದವು. ಒಟ್ಟಿನಲ್ಲಿ ಮಕ್ಕಳ ಪೋಷಕರೂ ಕೇಳಿ ತಲೆದೂಗಿ ಅನುಕರಿಸುವ ಮಟ್ಟಿಗೆ ಕಾರ್ಯಾಗಾರ ಫಲಪ್ರದವಾಗಿತ್ತು.

ನಾಟ್ಯಶಾಸ್ತ್ರದಂತಹ ಬೃಹತ್ ಗ್ರಂಥವನ್ನೂ ಎಷ್ಟು ಸುಲಭವಾಗಿ ಮಕ್ಕಳಿಗೆ ಮುಟ್ಟಿಸಬಹುದು ಎಂಬುದಕ್ಕೆ ಕಾರ್ಯಾಗಾರ ಚೊಕ್ಕದಾದ ರೀತಿಯಲ್ಲಿ ಆಯೋಜನೆ ಗೊಂಡು ಉತ್ತಮ ಮಾದರಿಯನ್ನಿತ್ತಿದೆ. ಯಾವುದೇ ಹಮ್ಮುಬಿಮ್ಮುಗಳಿಲ್ಲದೆ, ಹೆಚ್ಚಿನ ಗೌಜುಗದ್ದಲಗಳಿಲ್ಲದೆ, ಔಪಚಾರಿಕತೆಯ ಬಿಕ್ಕಟ್ಟುಗಳಿಲ್ಲದೆ ನಡೆದ 'ನಾಟ್ಯಚಿಂತನ' ಹೊಸ ಚಿಂತನೆಯ ಅಲೆಯನ್ನೂ, ಭವಿಷ್ಯದ ನೃತ್ಯ ಕಾರ್ಯಕ್ರಮಗಳಿಗೆ ದಿಕ್ಸೂಚಿ



ಯನ್ನೂ ನೀಡಿದೆ. ಇಂತಹ ಕಾರ್ಯಾಗಾರಗಳ ಸಂಖ್ಯೆ ಗುಣಾತ್ಮಕವಾಗಿ ಹೆಚ್ಚಲಿ ಮತ್ತು ಆಸಕ್ತ ಅಭ್ಯರ್ಥಿ ಗಳೂ ಭೇದ–ಪೂರ್ವಾಗ್ರಹಗಳನ್ನು ಬದಿಗಿಟ್ಟು ಭವಿಷ್ಯದಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಮುಕ್ತವಾಗಿ ತೊಡಗಿಸಿ ಕೊಂಡರೆ ನೃತ್ಯಕ್ಷೇತ್ರ ಬೆಳಗುವುದರಲ್ಲಿ ಸಂಶಯವಿಲ್ಲ.

# ಶ್ರೀ ಭಾರತೀ ಪ್ರಕಾಶನದಿಂದ 'ಗುರುಗ್ರಂಥಮಾಲಿಕಾ'

## ೬೦ದಿನಕ್ಕೆ ೬೦ಪುಸ್ತಕಗಳ ನಿರಂತರ ಪ್ರಕಟಣೆಯ ವಿಶ್ವದಾಖಲೆಯಲ್ಲಿ ಕಲೆಯ ಕುರಿತ ಪುಸ್ತಕಗಳು

– 'ಮನೂಬನ'

**ತ**ಮ್ಮ ಗುರುತ್ವದಿಂದ ಲೋಕವನ್ನು ಬೆಳಗಿದ ಭಾರತೀಯ ಪರಂಪರೆಯ 60 ಮಹಾಪುರುಷರ ಜೀವನಕಥನ–ಮಾಹಿತಿಯನ್ನು ಒಳಗೊಂಡ 60 ಕನ್ನಡ ಪುಸ್ತಕಗಳ ಲೋಕಾರ್ಪಣೆ ಈ ಬಾರಿಯ ಶ್ರೀರಾಮಚಂದ್ರಾಪುರ ಮಠದ ಶ್ರೀಶ್ರೀಶ್ರೀ ರಾಘವೇಶ್ವರ ಸ್ವಾಮೀಜಿಗಳ ಚಾತುರ್ಮಾಸ್ಯದ ವಿಶೇಷ. ಈ ಪುಸ್ತಕಸರಣಿಯಲ್ಲಿ ಕಲಾದಿಗಂತದ ಮಹೋನ್ನತ ವ್ಯಕ್ತಿಗಳ ಜೀವನಸಂಕಥನವೂ ಇದೆಯೆಂಬುದು ನಮ್ಮ ಪಾಲಿಗೆ ಖುಷಿಯ ಸಂಗತಿ. ಅಷ್ಟೇ ಅಲ್ಲ, ಭರತಖಂಡದ ಶ್ರೇಯಸ್ಸಿಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟ ವಿಶೇಷ ವ್ಯಕ್ತಿಗಳ, ಗುರುಮಹಾತ್ಮರ, ಶಾಸ್ತ್ರಕಾರರ ಜೀವನಚರಿತ್ರೆ ಮತ್ತು ದುರ್ಲಭವೆನಿಸುವ ಶಾಸ್ತ್ರವಿಶೇಷಗಳನ್ನು ತಿಳಿಸುವ ಈ ಉಪಕ್ರಮ ಹಿಂದೆಂದೂ ನಡೆದಿರದ ದಾಖಲೆಯಾಗಿದೆ. ಆದ್ದರಿಂದ ಬೆಂಗಳೂರಿನ ಶ್ರೀ ಭಾರತೀ ಪ್ರಕಾಶನ ಹಮ್ಮಿಕೊಂಡ ಈ ಪುಸ್ತಕಯಾತ್ರೆಯು 'ಲಿಮ್ಕಾ ಬುಕ್ ಆಫ್ ರೆಕಾರ್ಡ್'ಗೆ ಸೇರಲಿದೆ ಎಂಬುದು ಕನ್ನಡ ಸಾಹಿತ್ಯಲೋಕ ಹೆಮ್ಮೆಪಡಬೇಕಾದ ಅಂಶ.




ಹಾಗೆಂದು ಈ 60 ಪುಸ್ತಕದ ಯೋಜನೆ ದಾಖಲೆ ಮಾಡುವ ಉದ್ದೇಶಕ್ಕೆಂದೇ ಹೊರಟ ಪ್ರಯತ್ನವಲ್ಲ! ಆದರೂ ವಿಶ್ವದಾಖಲೆಯಾಗುವ ಎಲ್ಲಾ ಕಾರಣಗಳನ್ನು ಹೊಂದಿದೆ. 60 ದಿನಗಳ ಕಾಲ ಒಂದೇ ಪ್ರಕಾಶನದಿಂದ 60 ಪುಸ್ತಕ ಬಿಡುಗಡೆ; ಹೀಗೆ ಬಿಡುಗಡೆಯಾಗುವ ಪ್ರತೀ ಪುಸ್ತಕದ 250 ಪ್ರತಿಗಳನ್ನು ಉಚಿತವಾಗಿ 60 ದಿನಗಳ ಕಾಲ (ಅಂದರೆ ಒಟ್ಟಾರೆ ಸುಮಾರು 25,000 ಪ್ರತಿಗಳನ್ನು) ಉಚಿತವಾಗಿ ಮಠದ ಶಿಷ್ಯಪರಂಪರೆಯ ಮನೆಮನೆಗಳಿಗೆ ತಲುಪಿಸುವುದೆಂದರೆ ಸಾಮಾನ್ಯ ಮಾತೇ? ಪ್ರಸಕ್ತ ಜುಲೈ 12 ರಿಂದ ಪ್ರಾರಂಭವಾದ ಈ ಪಯಣ ಸೆಪ್ಟೆಂಬರ್ 9 ರವರೆಗೆ ಪ್ರತಿನಿತ್ಯ ಮಠದ ಶ್ರೀಭಾರತೀ ಪ್ರಕಾಶನದ ಕಡೆಯಿಂದ ಜರುಗುತ್ತಲಿದ್ದು ದಿನಕ್ಕೊಂದು ಪುಸ್ತಕ ಲೋಕಾರ್ಪಣೆಗೊಳ್ಳುತ್ತಾ ಅರಿವಿನ ಲೋಕಕ್ಕೆ ಹೊಸಬೆಳಕಿನ ಮುನ್ನುಡಿ ಬರೆಯುತ್ತಿದೆ.

'ಪುಸ್ತಕ ಓದುವ ಪರಂಪರೆಯೇ ಕ್ಷೀಣಿಸುತ್ತಿದೆ' ಎಂಬ ಅಪವಾದವನ್ನೇ ಸುಳ್ಳಾಗಿಸುವಂತೆ ಈ ಬೃಹತ್ ಯೋಜನೆ ಪ್ರಕಟಣೆಯ ಜೊತೆಜೊತೆಗೆ ಅಪಾರ ಓದುಗರನ್ನೂ ಏಕಕಾಲಕ್ಕೆ ಹೊಂದುತ್ತಲಿದೆ. ಪ್ರಕಾಶನವೊಂದು ಹೀಗೆ ಏಕಕಾಲದಲ್ಲಿ, ನಿರಂತರವಾಗಿ, ಅದೂ 60 ದಿನಗಳ ಕಾಲ ವಿಶೇಷ ಕಾರ್ಯಕ್ರಮ ಆಯೋಜಿಸುತ್ತಾ ಭಾರತೀಯ ಗುರು–ಮಹಾಪುರುಷರ ಕುರಿತು ದಿನಕ್ಕೊಂದು ಪುಸ್ತಕದಂತೆ ಬಿಡುಗಡೆ ಮಾಡುತ್ತಿರುವುದು ಸಾಹಿತ್ಯ–ಪ್ರಕಾಶನ ಕ್ಷೇತ್ರದಲ್ಲೇ ಪ್ರಥಮ ಅಲ್ಲದೆ ಸಮಾಜದ 25–30ಸಾವಿರ ಮನೆಗಳಿಗೆ ಉಚಿತವಾಗಿ ಪುಸ್ತಕ ನೀಡಲಾಗುತ್ತಿರುವುದು ಇತಿಹಾಸದಲ್ಲೊಂದು ಮೈಲುಗಲ್ಲು.

ಈ ಮಾದರಿಯಲ್ಲೇ ಹಿಂದೊಮ್ಮೆ ರಾಷ್ಟ್ರೋತ್ಥಾನ ಪ್ರಕಾಶನವು 'ಭಾರತ–ಭಾರತೀ' ಪುಸ್ತಕಮಾಲೆಯಲ್ಲಿ ಒಂದೇ ಗುಕ್ಕಿಗೆ ಓದಿ ಮುಗಿಸುವಂತೆ ಹಲವು ದೇಶಭಕ್ತರ–ಪುರಾಣ ಪುರುಷರ ಕುರಿತು ಪುಟ್ಟ ಪುಟ್ಟ ಪುಸ್ತಕಗಳನ್ನು ಪ್ರಕಟಿಸಿತ್ತು. ಕನ್ನಡ–ಇಂಗ್ಲೀಷ್ ಭಾಷೆಗಳಲ್ಲಿ ಅನಾವರಣಗೊಂಡ ಈ ಕೃತಿಸರಣಿಯು ಚೆಣ್ಣರಿಂದ ಮೊದಲ್ಗೊಂಡು ಬೇರೆ ಬೇರೆ ವಯೋಮಾನದ ಮನೆ–ಮನಗಳನ್ನು ತಲುಪಿತ್ತು. ನೃತ್ಯ–ಸಂಗೀತಾದಿ ಕಲಾವಿಷಯಗಳ ವಿಕಾಸಕ್ಕೆ ದುಡಿದ ಹಲವು ಮಹಾಪುರುಷರ ಸಂಕ್ಷಿಪ್ತಚಿತ್ರಣ ಆ ಮಾಲಿಕೆಯೊಳಗಿತ್ತು. ಈಗ ಶ್ರೀಭಾರತೀ ಪ್ರಕಾಶನ ಈ ನಿಟ್ಟಿನಲ್ಲಿ ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ ನಿಯಮಿತವಾಗಿ ಗುರುವರೇಣ್ಯರ ಪುಸ್ತಕಗಳು ಲೋಕಾರ್ಪಣೆಗೊಳ್ಳುವಂತೆ ಸಮಗ್ರವಾಗಿ, ಸಂಕ್ಷಿಪ್ತವಾಗಿ, 'ಭಾರತ–ಭಾರತೀ' ಪುಸ್ತಕಮಾಲೆಗಿಂತಲೂ ಕೊಂಚ ದೊಡ್ಡ ಗಾತ್ರದಲ್ಲಿ ಪುಸ್ತಕಗಳನ್ನು ಪ್ರಕಟಿಸುತ್ತಿದೆ. (ವಿಶೇಷವೆಂದರೆ ಮುದ್ರಣದ ಜವಾಬ್ದಾರಿಯನ್ನು ರಾಷ್ಟ್ರೋತ್ಥಾನವೇ

ವಹಿಸಿಕೊಂಡಿದೆ.)




ವಸಿಷ್ಠ,ವ್ಯಾಸ,ವಿಶ್ವಾಮಿತ್ರ,ಬೃಹಸ್ಪತಿ,ಅಗಸ್ತ್ಯ, ನಾರದ,ಪರಾಶರರಂತಹ ಹಲವು ಋಷಿ ಮುನಿಗಳು; ಯಾಜ್ಞವಲ್ಕ್ಯ,ಪಾಣಿನೀ, ಪಿಂಗಳ,ಬೋಧಾಯನ ಮುಂತಾದ ಶಾಸ್ತ್ರಕಾರರು; ಚರಕ,ಸುಶ್ರುತ,ವರಾಹಮಿಹಿರರಂತಹ ಶೋಧಕರು;ಸಮರ್ಥ ರಾಮದಾಸ, ಜ್ಞಾನೇಶ್ವರ, ಕೃಷ್ಣಚೈತನ್ಯ ರಂತಹ ಭಗವದ್ಭಕ್ತ ಕೃತಿರಚನಕಾರ–ದಿಗ್ದರ್ಶಕರು, ಶಂಕರ, ಚಾಣಕ್ಯ, ಕುಮಾರಿಲಭಟ್ಟ, ಶ್ರೀರಂಗ, ಶ್ರೀಧರ, ರಮಣ, ವಿದ್ಯಾರಣ್ಯ, ದತ್ತ ಗುರುಗಳಂತಹ ಮಹಾ ಪುರುಷರು, ಪದ್ಮಪಾದ– ತೋಟಕ–ಹಸ್ತಾಮಲಕ–ದ್ರೋಣ–ಭೀಷ್ಮರಂತಹ ಆಚಾರ್ಯ ಸ್ವರೂಪರು.. ಹೀಗೆ ಹಲವು ನೆಲೆಯಲ್ಲಿ ಬಾಳಿಬದುಕಿದ ಮಹಾತ್ಮರ ಮಾಹಿತಿ, ಜೀವನಸಂಕಥನ, ತಿಳಿದುಕೊಳ್ಳಬೇಕಾದ ಕೃತಿ–ಶಾಸ್ತ್ರದ ಸಂಕ್ಷಿಪ್ತ ಪರಿಚಯಗಳು ಈ ಪುಸ್ತಕಮಾಲಿಕೆಯಲ್ಲಿ ಸಿಗುವುದು ವಿಶೇಷ. ನೃತ್ಯ–ಸಂಗೀತದ ಆಸಕ್ತರಿಗೆ, ಅಧ್ಯಯನಾಪೇಕ್ಷಿಗಳಿಗೆ ವರವಾಗುವಂತೆ **ಭರತಮುನಿ, ಆನಂಧವರ್ಧನ, ಅಭಿನವಗುಪ್ತ, ತ್ಯಾಗರಾಜ, ಸದಾಶಿವ ಬ್ರಹ್ಮೇಂದ್ರ, ವಿದ್ಯಾರಣ್ಯರ** ಕುರಿತೂ ಪುಸ್ತಕಗಳು ಹೊರಬಂದಿವೆ. ಈ ಪುಸ್ತಕಗಳು ನಿತ್ಯ ಜೀವನದಲ್ಲಿ ಅನುಸರಿಸಬೇಕಿರುವ ಅಂಶಗಳು ಸೇರಿದಂತೆ ಬದುಕಲ್ಲಿ ಅಳವಡಿಸಿಕೊಳ್ಳಲೇಬೇಕಾದ ಪರಿಪೂರ್ಣ ವಿಚಾರ ಸಂದೇಶ ಸಾರುವ ಹೊತ್ತಿಗೆಯಾಗಿ ಜನರ ಕೈಸೇರುತ್ತಲಿದೆ.

ಆಕರ್ಷಕವಾದ ಮುಖಪುಟ, ಉತ್ತಮ ಗುಣಮಟ್ಟದ ಪುಟಗಳು, ಅಚ್ಚುಕಟ್ಟಾದ ಪುಟವಿನ್ಯಾಸ, ವೃದ್ಧರೂ ಓದಲು ಅನುಕೂಲವಾಗುವಂತೆ ದೊಡ್ಡ ಅಕ್ಷರಗಳಲ್ಲಿ ಮುದ್ರಣ ಈ ಪುಸ್ತಕಮಾಲಿಕೆಯ ಹೆಚ್ಚುಗಾರಿಕೆಗೆ ಸೇರ್ಪಡೆಯಾಗುವಂತದ್ದು. ಜೊತೆಗೆ ಇಂತಹ ಪುಸ್ತಕಗಳನ್ನು ಬರೆಯುವುದಾದರೂ ಯಾರು? ಸಾಹಿತ್ಯ–ಸಾಂಸ್ಕೃತಿಕ–ವಿದ್ವಲ್ಲೋಕದ ಸಂಪನ್ಮೂಲವ್ಯಕ್ತಿಗಳು, ವಿದ್ವಾಂಸರು, ಸಾಹಿತಿಗಳೇ ಪುಸ್ತಕಮಾಲಿಕೆಯ ಲೇಖಕರೂ ಕೂಡಾ ! ಹಿರಿಯ ವಿದ್ವಾಂಸ ಡಾ.ಕೆ.ಎಲ್. ಶಂಕರನಾರಾಯಣ ಜೋಯಿಸ್ ಅವರ ಮುಖವಚನ ಈ ಪುಸ್ತಕಮಾಲಿಕೆಯ ಪ್ರತೀ ಪುಸ್ತಕಗಳಿಗಿದೆ. ಈ ಮಾಲಿಕೆಯ ಸಂಪಾದಕತ್ವಕ್ಕಾಗಿ ವಿದ್ವಾನ್ ಜಗದೀಶಶರ್ಮ ಅವರ ಮುಂದಾಳತ್ವದಲ್ಲೆ ಹಲವು ಮಂದಿ ಪ್ರಾಜ್ಞರ ಕಾರ್ಯನಿರ್ವಹಣ ಸಮಿತಿಯೂ ಟೊಂಕ ಕಟ್ಟಿ ನಿಂತಿದೆ. ಆದ್ದರಿಂದಲೇ ಈ ಪ್ರಯತ್ನವು ಸಾಂಸ್ಕೃತಿಕ–ಸಾಹಿತ್ಯಿಕ–ಧಾರ್ಮಿಕ–ಸಾಮಾಜಿಕ–ಸಂಶೋಧನೆ... ಹೀಗೆ ಯಾವುದೇ ಕೋನಗಳಿಂದ ನೋಡಿದರೂ ಐತಿಹಾಸಿಕ ದಾಖಲೆಯಾಗಲಿದೆ. ರಾಘವೇಶ್ವರ ಶ್ರೀಗಳು ತಮ್ಮ ವ್ರತಕಾಲದಲ್ಲಿ ಭಾರತೀಯ ಗುರುವರೇಣ್ಯರನ್ನು ಗುರುತಿಸಿ ದಾಖಲಿಸಿ ಪ್ರಸರಿಸುವ ಕಾರ್ಯ ಹಮ್ಮಿಕೊಂಡಿರುವುದು ನಿಜಕ್ಕೂ ಸ್ತುತ್ಯರ್ಹ.

ಹಾಗೆಂದು ಈ ಪ್ರಯತ್ನ 60ದಿನ– 60ಪುಸ್ತಕಕ್ಕೆಂದೇ ಸೀಮಿತವಾಗಿಲ್ಲ. ಈಗಾಗಲೇ 60 ಪುಸ್ತಕಗಳಿಂದಾಚೆಗೂ ಈ ಪ್ರಯತ್ನ ವಿಸ್ತರಿಸಿದೆ. ಇದೀಗ ಗುರುಗ್ರಂಥಮಾಲಿಕೆಯಲ್ಲಿ 90ಕ್ಕಿಂತಲೂ ಹೆಚ್ಚಿನ ಗುರುವರೇಣ್ಯರ ಪುಸ್ತಕಗಳು ಮುದ್ರಣಗೊಳ್ಳುವುದು ಖಚಿತವಾಗಿದೆ. ಕನ್ನಡದ ಯುವಜನತೆ ಸೇರಿದಂತೆ ಎಲ್ಲ ಬಗೆಯ ಓದುಗರಿಗೂ–ಅಧ್ಯಯನಾಪೇಕ್ಷಿಗಳಿಗೂ ತಲುಪಿಸುವ ಸದುದ್ದೇಶದಿಂದ ಹೊರಟಿರುವ ಪ್ರಕಾಶನದ ಈ ಕಾರ್ಯ ಸಾರಸ್ವತ ಲೋಕಕ್ಕೆ ಉತ್ತಮ ಕೊಡುಗೆಯಾಗಿದೆ.

ಪ್ರತಿಯೊಂದು ಪುಸ್ತಕದ ಬೆಲೆ 60ರೂ (ಪುಸ್ತಕದ ಪುಟ, ವಿಷಯಗಳನ್ನು ಹೊಂದಿಕೊಂಡಂತೆ 80ರೂ ಇದೆ) ಸದ್ಯಕ್ಕೆ ಈ ಗುರುಗ್ರಂಥಮಾಲಿಕೆಯ 60ಪುಸ್ತಕಗಳನ್ನು ಒಮ್ಮೆಗೇ ಖರೀದಿಸುವವರಿಗೆ ರಿಯಾಯಿತಿಯಲ್ಲಿ 3000ರೂ.ಗಳಿಗೆ (ಮೂಲಬೆಲೆ 4000ರೂ) ಲಭ್ಯವಾಗಲಿದೆ. ಪುಸ್ತಕಗಳಿಗೆ ಭಾರತೀ ಪ್ರಕಾಶನದ ಅನೂರಾಧಾ ಪಾರ್ವತೀ ಬೆಂಗಳೂರು (ಮೊಬೈಲ್: 9880455776) ಇವರನ್ನು ಸಂಪರ್ಕಿಸಬಹುದು.

# ಪ್ರಾಚೀನಭಾರತದಲ್ಲಿ ಕಲಾವೈವಿಧ್ಯ ಮತ್ತು ವಾತ್ಸ್ಯಾಯನರ ಕಾಮಸೂತ್ರ: ಪ್ರಸ್ತುತತೆ ಮತ್ತು ಪ್ರಾಯೋಗಿಕತೆ

– **ಪ್ರೊ. ಇ. ಮಹಾಬಲ ಭಟ್ಟ,** ಉಜಿರೆ.

## ವಿದ್ಯೆ–ಮಹತ್ತ್ವ, ಕಲಿಕಾಪದ್ಧತಿ ಮತ್ತು ಉಪಯೋಗ

'ವಿದ್ಯಾವಿಹೀನಃ ಪಶುಃ'[1] – ವಿದ್ಯೆ ಕಲಿಯದ ಮನುಷ್ಯನು ಪಶು (ಪ್ರಾಣಿ) ಎಂದಿರುವ ಭರ್ತೃಹರಿಯ ಮಾತು ಎಲ್ಲಾ ಕಾಲಗಳಿಗೆ ಅನ್ವಯಿಸುತ್ತದೆ. ಆಹಾರ, ನಿದ್ರೆ, ಭಯ, ಕಾಮ[2] ಹೀಗೆ ಈ ನಾಲ್ಕು ವಿಷಯಗಳಲ್ಲಿ ಮನುಷ್ಯ ಮತ್ತು ಪ್ರಾಣಿಗಳ ನಡುವೆ ಯಾವ ವ್ಯತ್ಯಾಸವಿಲ್ಲ. ಆದರೆ ಒಳ್ಳೆಯ ಮತ್ತು ಕೆಟ್ಟ ವಿಚಾರಗಳನ್ನು ತಿಳಿದುಕೊಳ್ಳುವ ವಿವೇಕ ಎಂಬ ಶಕ್ತಿಯಿರುವುದು ಮನುಷ್ಯರಿಗೆ ಮಾತ್ರ. ವಿವೇಕ ಇರುವುದರಿಂದ ಮನುಷ್ಯನಿಗೆ ಮಹತ್ವವಿದೆ. ವಿವೇಕವನ್ನು ಮತ್ತಷ್ಟು ಬಲಪಡಿಸುವಂತಹುದು ವಿದ್ಯೆ. ವಿದ್ಯೆ ಮತ್ತು ವಿವೇಕ ಎರಡೂ ಒಟ್ಟಾದರೆ ಹೊಳೆಯುವ ಬಂಗಾರದಂತೆ ಸಮಾಜದಲ್ಲಿ ಶೋಭಿಸುತ್ತಾನೆ. ಮನುಷ್ಯನ ವಿವೇಕವನ್ನು ವಿಕಸನಗೊಳಿಸುವಂತಹುದು ವಿದ್ಯೆ.

ಸಂಸ್ಕೃತದ "ವಿದ್[3]–" ಎಂಬ ಧಾತು (ಶಬ್ದದ ಮೂಲ ರೂಪ) ವಿದ್ಯೆಯ ಮೂಲ. ಇದರಿಂದ ವಿದ್ಯೆ ಎಂಬ ಶಬ್ದ ಹುಟ್ಟಿದುದಾಗಿದೆ. ಈ ವಿದ್ಯೆಯು ಶಿಕ್ಷಣದಿಂದ ದೊರೆಯುತ್ತದೆ. ಶಿಕ್ಷಣ ಎಂದರೆ, ವಿದ್ಯೆಯನ್ನು ನೀಡುವಂತಹುದು. ಇದರ ಮೂಲ ರೂಪ –'ಶಿಕ್ಷ[4]' – ವಿದ್ಯೆಯನ್ನು ನೀಡುತ್ತದೆ. ಈ ಶಿಕ್ಷಣ ಮನುಷ್ಯನ ಬಾಲ್ಯದಿಂದ ಪ್ರಾರಂಭವಾಗುತ್ತದೆಯಾಗಿ; ಓರ್ವ ಕನ್ನಡದ ಅಜ್ಞಾತ ಕವಿ 'ಚಿಕ್ಕಂದಿನಾ ವಿದ್ಯೆ ಪೊರೆಗು ಚೂಡಾರತ್ನಾ' ಎಂದು ಹಾಡಿ ಹೊಗಳುತ್ತಾನೆ.

**ಶೋಧಭ್ರಮರಿ**

ಬಾಲ್ಯದಿಂದಲೇ ಕಲಿಯಬೇಕಾದ ವಿದ್ಯೆ ಯಾವುದು? ಎಂಬ ಪ್ರಶ್ನೆಗೆ ಪಂಡಿತರು ಕೊಡುವ ಉತ್ತರ – ಬದುಕು ಕೊಡುವ ವಿದ್ಯೆ[5] (ಸಾರ್ಥಕವಾದ ವಿದ್ಯೆ). ಈ ರೀತಿಯ ವಿದ್ಯೆಯನ್ನು ಪಡೆಯುವಾಗ ಮನುಷ್ಯನಲ್ಲಿ ವಿನಯವು[6] ಹುಟ್ಟುತ್ತದೆ. ವಿನಯದಿಂದ ಬೇಕಾದ ಅರ್ಹತೆಯ ಸಂಪಾದನೆ ಆಗುತ್ತದೆ. ಅರ್ಹತೆಯಿಂದ ಒಳ್ಳೆಯ ಸಂಪತ್ತು ಕ್ರೋಢೀಕರಣವಾಗುತ್ತದೆ. ಸಂಪತ್ತಿನಿಂದ ಧರ್ಮ. ಧರ್ಮದಿಂದ ಸುಖ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ. ಇದಕ್ಕಾಗಿ ವಿದ್ಯೆಯನ್ನು ಪಡೆಯಲು ಹವಣಿಸುವುದೂ; ತಂದೆ–ತಾಯಿಗಳು ಮಕ್ಕಳಿಗೆ ವಿದ್ಯೆಯನ್ನು ಕೊಡಿಸುವುದೂ ನಡೆಯುತ್ತಲೇ ಬಂದಿದೆ.

ಪ್ರತಿಯೊಬ್ಬ ಮನುಷ್ಯನು ವಿದ್ಯೆಯಿಂದ ಧರ್ಮ, ಅರ್ಥ, ಕಾಮ ಮೋಕ್ಷ ಎಂಬ ಪ್ರಯೋಜನವನ್ನು ಪಡೆಯುತ್ತಾನೆ. ಇದನ್ನು 'ಪುರುಷಾರ್ಥ[7] ಎನ್ನುತ್ತೇವೆ. ಈ ಪುರುಷಾರ್ಥಗಳಲ್ಲಿ ಸುಖವನ್ನೇ ಪ್ರಧಾನವಾಗಿ ಹೊದಿರುವ ಮೋಕ್ಷ ಪ್ರಮುಖವಾದುದು. ಸುಖವು ಮೋಕ್ಷದ ಪ್ರಯೋಜನ.[8] ಈ ಸುಖ ಮನುಷ್ಯನು ಜೀವದಲ್ಲಿರುವಾಗಲೂ ಬೇಕು; ಮರಣಾನಂತರದಲ್ಲೂ ಬೇಕು. ಮನುಷ್ಯನು ಪಡೆಯಬಹುದಾದ ಸುಖಗಳಲ್ಲಿ ನಿರಂತರ ಸಂಪತ್ತಿನ ಸಂಗ್ರಹ, ಆರೋಗ್ಯ, ಪ್ರಿಯವಾದ ಮಾತುಗಳನ್ನು ಆಡುವ ಮತ್ತು ಪ್ರಿಯಳಾದ ಹೆಂಡತಿ, ವಿಧೇಯನಾಗಿರುವ ಮಗ, ಸಂಪತ್ತನ್ನು ನೀಡುವ ವಿದ್ಯೆ[9] ಮುಖ್ಯವಾದುವುಗಳೆಂದು ಶಾಸ್ತ್ರಗಳು ತಿಳಿಸಿವೆ.

ಸುಖ ಎಂಬುದು ಸಂಪತ್ತಿನ ಪ್ರಯೋಜನ. ಈ ಸಂಪತ್ತು ವಿದ್ಯೆಯಿಂದ ಬರುತ್ತದೆ. ಆದ್ದರಿಂದ ಬದುಕುಕೊಡುವ ವಿದ್ಯೆ ಕಲಿತಾಗ ಅದು ಸಾರ್ಥಕ ವಿದ್ಯೆ ಎನಸಿಕೊಳ್ಳುತ್ತದೆ. ಈ ವಿದ್ಯೆ ಯಾವುದು? ಈ ವಿದ್ಯೆಯನ್ನು ಪಡೆದುಕೊಳ್ಳುವುದು ಹೇಗೆ? ಎಂಬ ವಿಷಯ ಅನ್ವೇಷಣೆಯೇ ಈ ಲೇಖನದ ಪ್ರಮುಖ ಗುರಿ.

ವಿದ್ಯೆಯನ್ನು ಪಡೆಯುವುದು ಸುಲಭದ ಕೆಲಸವಲ್ಲ. ವಿದ್ಯೆಯನ್ನು ಪಡೆಯಲು ಶಿಕ್ಷಣದ ಅಗತ್ಯವಿದೆ. ಶಿಕ್ಷಣಕ್ಕೆ ಅಗತ್ಯವಾದುದು ಶ್ರದ್ಧೆ. ಭಗವದ್ಗೀತೆಯಂತೂ ಜ್ಞಾನವನ್ನು ಪಡೆಯಲು ಮುಖ್ಯವಾದ ಅಂಗ ಶ್ರದ್ಧೆ, ಶ್ರದ್ಧೆಯುಳ್ಳವನಷ್ಟೇ ವಿದ್ಯೆಯನ್ನು ಪಡೆಯಲು ಸಾಧ್ಯ[10] ಎನ್ನುತ್ತದೆ. ಆದರೆ

ಶ್ರದ್ಧೆಯುಳ್ಳವನಾದರೂ ಕೂಡಾ ತನ್ನಿಂದ ತಾನಾಗಿ ವಿದ್ಯೆಯನ್ನು ಪಡೆಯಲಾರನು. ವಿದ್ಯೆಯನ್ನು ಪಡೆಯದೆ ಹಸನಾದ ಬಾಳನ್ನು ಹೊಂದಲಾರನು. ಇದಕ್ಕೆ ಹಿಂದಿನಿಂದಲೇ ಮಾನವನ ಉಗಮದೊಂದಿಗೇ ವಿದ್ಯೆಯನ್ನು ಕಲಿಸುವ, ಕಲಿಯುವ ಪರಂಪರೆ ಹುಟ್ಟಿದೆ. ಗುರು–ಶಿಷ್ಯ ಪರಂಪರೆ – ಗುರುಕುಲ ಪದ್ಧತಿ (ಇಂದಿನ ಹಾಸ್ಟೆಲ್ ಪದ್ಧತಿ) ಇವೆಲ್ಲ ಅವಿರತವಾಗಿ ಬಂದಿವೆ. ವಿದ್ಯೆಯನ್ನು ಕಲಿಸಲು, ಕಲಿಯಲು ಬೇಕಾದ ವಿಚಾರಸರಣಿಯನ್ನು ನಿರ್ದಿಷ್ಟವಾಗಿ ರಚಿಸಿ, 'ಶಾಸ್ತ್ರ' ಎಂಬ ಮಾತಿನಲ್ಲಿ ಪ್ರಾಚೀನರು ಹೇಳಿದ್ದಾರೆ. ಆಧುನಿಕ ನೆಲೆಯಲ್ಲಿ ಶಿಕ್ಷಣತಜ್ಞರು 'ಶಿಕ್ಷಣನೀತಿ' ಎಂಬ ಹೆಸರಿನಡಿಯಲ್ಲಿ ನಿರೂಪಣೆ ಮಾಡಿದ್ದಾರೆ. ಪ್ರಾಚೀನ– ಅರ್ವಾಚೀನ ಕಲ್ಪನೆಗಳು ಶಿಕ್ಷಣ–ವಿದ್ಯೆ ಎಂಬುವುದನ್ನು ಪ್ರತಿಯೊಬ್ಬರು ಹೊಂದಿರಬೇಕು ಎಂಬ ಪರಿಕಲ್ಪನೆಯಲ್ಲಿ ಹೊರಟಿದೆ.

ವಿದ್ಯೆಯನ್ನು ಶಿಷ್ಯನಾದವನು ಗುರುಶುಶ್ರೂಷೆಯಿಂದ ಕಲಿಯಬಹುದು. ಹೇರಳವಾದ ಸಂಪತ್ತಿನ ದಾನದಿಂದ ಪಡೆಯಬಹುದು. ಪರಸ್ಪರ ವಿದ್ಯೆಯ ಕೊಡುಕೊಳ್ಳುವಿಕೆಯ ವಿಧಾನದಿಂದ ಪಡೆಯಬಹುದು. – ಈ ಮೂರು ಮಾರ್ಗಗಳು ವಿದ್ಯೆಯ ಸಂಪಾದನೆಗೆಂದೇ ಹೇಳಲಾಗಿದೆ. ನಾಲ್ಕನೆಯದಾದ ಇತರ ಯಾವುದೇ ಮಾರ್ಗವಿಲ್ಲ ಎಂಬುದು ಬುದ್ಧಿವಂತರೊಂದಿಗೇ ದಡ್ಡರೂ ಕೂಡಾ ಕಂಡುಕೊಂಡಂತಹ ವಿಷಯ[11] ಅದರಲ್ಲೂ ಭಾರತದ ಸಾರಸ್ವತ ಪರಂಪರೆಯಲ್ಲಿ ಹೆಚ್ಚು ಮಾನ್ಯತೆ ಗುರುಗಳಿಂದ ಕಲಿತಂತಹ ವಿದ್ಯೆಗೆ ಇರುವುದು. ಅದಕ್ಕೆ ಹಣಕೊಟ್ಟು ಪಡೆಯುವ ವಿದ್ಯೆಯಲ್ಲಿಯೂ ಕೆಲವು ದಿನ ಗುರುಗಳಿಂದ ಕೇಳಬೇಕೆಂಬ (ಕೇಳಲೇಬೇಕೆಂಬ) ವಿಶೇಷ ವ್ಯವಸ್ಥೆ ಏರ್ಪಾಡಾಗಿರುತ್ತದೆ. ಇದನ್ನು ತಪ್ಪಿಸಿದವರಿಗೆ ಮುಂದಿನ ಅವಕಾಶಗಳು ನಿರಾಕರಿಸಲ್ಪಡುತ್ತದೆ. ಈ ರೀತಿ ಪಡೆದ ವಿದ್ಯೆ ಲೋಕದಲ್ಲಿರುವ ಎಲ್ಲಾ ಸಂಪತ್ತಿಗಿಂತಲೂ ಹಿರಿದಾದದ್ದು, ಪರಮೋಚ್ಚವಾದದ್ದು. ಈ ವಿದ್ಯಾ ಸಂಪತ್ತು ತನ್ನ ದೇಶದಲ್ಲಿ ವ್ಯಕ್ತಿಯನ್ನು ವಿಶೇಷವಾದ ಸ್ಥಾನಕ್ಕೆ ಕರೆದೊಯ್ಯುತ್ತದೆ. ವಿದೇಶದಲ್ಲೂ ವಿದ್ಯಾವಂತನಾದ ವ್ಯಕ್ತಿಗೆ ಬಹಳ ಮಾನ್ಯತೆ ದೊರೆಯುತ್ತದೆ ಎಂಬುದನ್ನು ನಾವೀಗಾಗಲೇ ಕಂಡುಕೊಂಡಿದ್ದೇವೆ.

ಇನ್ನು ಈ ವಿದ್ಯೆಯನ್ನು ಪಡೆಯಲು ಸಂಪತ್ತನ್ನು ದಾನ ಮಾಡಬಹುದು. ಆದರೆ ಅದು ವಿಶೇಷ ಫಲಕಾರಿಯಾದ ವ್ಯವಸ್ಥೆ ಆಗಿರುವುದಿಲ್ಲ. ಇನ್ನೊಂದು 'ಕೊಡು–ಕೊಳ್ಳುವಿಕೆ' ಎಂಬ ವಿಧಾನದಿಂದ ವಿದ್ಯೆಯನ್ನು ಪಡೆಯುವ ಕ್ರಮ. ಈ ಮೂರಕ್ಕಿಂತ ಹೊರತಾಗಿ ಯಾವ ರೀತಿಯಲ್ಲೂ ವಿದ್ಯೆಯನ್ನು ಪಡೆಯಲು ಸಾಧ್ಯವಿಲ್ಲ.

ಆಧುನಿಕಕಾಲ ಸ್ಪರ್ಧಾಯುಗವಾಗಿ ಬದಲಾಗಿದೆ. ದಿನದಿಂದ ದಿನಕ್ಕೆ ಬೆಳೆಯುವ ತಂತ್ರಜ್ಞಾನ, ಕೌಶಲ, ಸಂಶೋಧನೆ ಇವುಗಳು ಭಾರತವನ್ನು ಆವರಿಸುವ ಆವೇಗ. ಇದರೊಂದಿಗೇ ಕುಸಿಯುತ್ತಿರುವ ನೈತಿಕ ಜೀವನ, ರೋಗಗಳ ವ್ಯಾಪಕತೆ, ಅವಿವೇಕ–ಅಸಾರಭೂತವಾದ ವಿದ್ಯೆ, ಆರ್ಥಿಕ ಪ್ರಗತಿಯ ಸಂದೇಶ– ಇವುಗಳಿಗೆಲ್ಲ ನೆಲೆಯಾಗುತ್ತಿದೆ ಭಾರತದೇಶ. ಇದರೊಂದಿಗೆ ನಾಶವಾಗುತ್ತಿರುವ ಭಾವನಾತ್ಮಕತೆ, ತನ್ಮಯತೆ, ಪ್ರತಿಭಾಶಕ್ತಿ, ತೃಪ್ತಿ, ಶಾಂತಿ – ಇವುಗಳಿಗೆಲ್ಲ ಮೂಲಾಧಾರವಾಗಿದೆ ಇಂದಿನ ಆಧುನಿಕ ವಿದ್ಯೆ. ವಿದ್ಯೆಯಿಂದ ಬದುಕುವ ಮನುಷ್ಯ, ಸಂಘಸಂಸ್ಥೆಗಳು, ವಿದ್ಯೆಗಾಗಿ ಹಣವನ್ನು ಬೇಕಾಬಿಟ್ಟಿಯಾಗಿ ಖರ್ಚು ಮಾಡುವ ತಂದೆ–ತಾಯಿಗಳು, ಇವೆಲ್ಲ ಆಧುನಿಕ ವಿದ್ಯೆಯ ವಿದ್ಯಾಕ್ಷೇತ್ರಗಳ ದಂತಕಥೆಗಳಾಗುತ್ತಿವೆ. ಹಿಂದೊಮ್ಮೆ ದೇಶ–ವಿದೇಶಕ್ಕೆ, ಇಡೀ ಭವ್ಯ ಜನಾಂಗಕ್ಕೆ ಭದ್ರ ಬುನಾದಿಯನ್ನು ಕಲ್ಪಿಸಿದಂತಹ ಭಾರತದ ಸಾರಸ್ವತ ಪರಂಪರೆಯು ಮರೀಚಿಕೆಯಾಗುತ್ತಿರುವಾಗ ಹಿಂದೆ ಈ ಪರಂಪರೆ ಪೂರ್ಣನಷ್ಟಪ್ರಾಯವಾಗುವ ಮುನ್ನ ಈ ಪರಂಪರೆಯನ್ನು ಮಗದೊಮ್ಮೆ ಶೋಧಿಸುವುದು ಪ್ರಕೃತ ಉದ್ದೇಶ.

### ಚತುಃಷಷ್ಟಿ ಕಲೆಗಳು ಮತ್ತು ಅವುಗಳ ಮಹತ್ತ್ವ

ಭಾರತದ ಸಾರಸ್ವತ ಪರಂಪರೆಯ ಮೂಲ– ವೇದಗಳು. "ತಿಳಿಸುವಂತಹುದು" ಎಂಬ ಅರ್ಥದಲ್ಲೇ, ವ್ಯಾಪಕತೆಯನ್ನು ಕಂಡಿದ್ದ ವೇದಗಳು ಬಹುಮಂದಿಯ ಅಧ್ಯಯನ ವಸ್ತುವಾಗಿತ್ತು ಮತ್ತು ಇದನ್ನೇ ಕಲಿಯಬೇಕಾಗಿತ್ತು. ಅಧ್ಯಯನ ಮಾಡದೇ ಉಳಿದವರು ಕೊಡು–ಕೊಳ್ಳುವಿಕೆಯ ನೀತಿಯಿಂದ ಸಾರವನ್ನು ಅರಿಯಬಹುದಾಗಿತ್ತು. ಇದರೊಂದಿಗೆ ಕಲಿಯಲೇಬೇಕಾದ ವಿದ್ಯೆ 'ಚತುಃಷಷ್ಟಿ

ಕಲೆಗಳು', "ಚೌಷಷ್ಟಿ ಕಲೆ" ಎಂದು ಕರೆಯಲ್ಪಡುತಿದ್ದವು. ಇವೇ 64 ವಿದ್ಯೆಗಳು. ಈ ವಿದ್ಯೆಗಳಿಗೆ ವೇದಗಳೇ ಮುಖ್ಯವಾಗಿದ್ದರೂ ಕೂಡಾ ಅವ್ಹೊಂದೇ ಕಲಿಕೆಯ ಹಿಂದಿನ ಕಾರಣಗಳಾಗಿರಲಿಲ್ಲ. ಜೊತೆಗೆ ಸಮಾಜದಲ್ಲಿದ್ದ ವೇದ ಅನಾಭ್ಯಾಸಿಗಳಿಗೆ ಕಲಿಯಲು ಇವು ಬಹಳ ಅನುಕೂಲವಾಗಿದ್ದವು.

ಚತುಃಷಷ್ಟಿ ಕಲೆಗಳು ಆಗಿನ ಕಾಲಕ್ಕೆ ಆಧುನಕ ವಿದ್ಯೆಗಳು ಎಂದೇ ಕರೆಯಲ್ಪಡುತ್ತಿದ್ದರೂ ಶಾಸ್ತ್ರಗಳೇ ಆಧಾರವಾಗಿತ್ತು. ಭಾರತದಲ್ಲಿ ಪ್ರಾಚೀನದಲ್ಲಿ ಶಾಸ್ತ್ರಗಳು ಜನ–ಜೀವನವನ್ನು ನಿಯಂತ್ರಣ ಮಾಡುತ್ತಿದ್ದವು. ಈ ಶಾಸ್ತ್ರಗಳು ಕಾರ್ಯಾಕಾರ್ಯ ಎರಡನ್ನೂ ತಿಳಿಸಿಕೊಡುತ್ತಿದ್ದವು. ಯಾವುದೇ ಕೆಲಸ–ಕಾರ್ಯಗಳನ್ನು ನಿರ್ವಹಿಸುವಲ್ಲಿ ನಿರ್ವಹಿಸದೇ ಇರುವಲ್ಲಿ ಇವುಗಳೇ ಆಧಾರಸ್ತಂಭಗಳಾಗಿದ್ದವು. ಇವುಗಳ ಪೈಕಿ ವೇದ, ವೇದಾಂಗವೇ ಮೊದಲಾದ ದೈವಿಕ, ಪಾರತ್ರಿಕ ಚಿಂತನೆಯಿಂದ ಪ್ರಾರಂಭಿಸಿ ಲೌಕಿಕ ಜೀವನವನ್ನು ಬೋಧಿಸುವ ಚಾರ್ವಾಕ, ಕಾಮಶಾಸ್ತ್ರದಂತಹ ಶಾಸ್ತ್ರಶಾಖೆಗಳೂ ಇದ್ದವು. ಇವುಗಳ ಮೂಲ ಉದ್ದೇಶ ಮನುಕುಲದ ಉದ್ಧಾರವೇ ಆಗಿತ್ತು.

ಭಾರತೀಯ ಸಾರಸ್ವತ ಪರಂಪರೆಯಲ್ಲಿ ಬಂದ 64 ವಿದ್ಯೆಗಳು ಪ್ರಾಚೀನದಿಂದಲೂ ಪ್ರಸಿದ್ಧ.[12]ಇವುಗಳು:–

1. ಸಂಗೀತ/ಹಾಡು – ಇದು ಸ್ವರ, ಪದ, ಲಯ, ಹೇಗೂ ಮನಸ್ಸಿಗೆ ಸುಸ್ಥಿತಿಯುಂಟುಮಾಡುವಂಥಾದ್ದು ಎಂದು ನಾಲ್ಕು ಬಗೆ.
2. ನೃತ್ಯ – ನರ್ತಿಸುವುದು
3. ವಾದ್ಯ – ವಿವಿಧ ಸಂಗೀತವಾದ್ಯಗಳನ್ನು ನುಡಿಸುವಿಕೆ
4. ಆಲೇಖ್ಯ – ಚಿತ್ರಕಲೆ
5. ವಿಶೇಷಕಚ್ಛೇದ್ಯ – ತಿಲಕದ ಆಕೃತಿಯಂತೆ ಭೂರ್ಜಪತ್ರವನ್ನು ಕತ್ತರಿಸುವುದು/ ಬೇರೆ ಬೇರೆ ಆಕಾರದಲ್ಲಿ ತಿಲಕವನ್ನಡುವುದು
6. ತಂಡುನಕುಸುಮಾವಲಿವಿಕಾರ – ತುಂಡಾಗದ ಇಡೀ ಅಕ್ಕಿಯ ಕಾಳುಗಳು ಮತ್ತು ಹಣ್ಣುಗಳಿಂದ ದೇವರ ಸನ್ನಿಧಿಯಲ್ಲಿ ವಿವಿಧ ಆಕೃತಿಗಳನ್ನು ರಚಿಸುವುದು
7. ಪುಷ್ಪಾಸ್ತರಣ – ನಾನಾ ಬಣ್ಣದ ಹೂಗಳಿಂದ ಬೇರೆ ಬೇರೆ ಆಕೃತಿಗಳಿಗೆ ತಕ್ಕಂತೆ ವಿವಿಧರಚನೆಗಳನ್ನು ಮಾಡುವುದು
8. ದಶನವಸನಾಂಗರಾಗ – ಹಲ್ಲುಗಳು, ವಸ್ತುಗಳು ಹಾಗೂ ಅಂಗಾಂಗಗಳನ್ನು ಕುಂಕುಮ ಮೊದಲಾದುವುಗಳಿಂದ ಅಲಂಕರಿಸುವುದು
9. ಮಣಿಭೂಮಿಕಾಕರ್ಮ – ಅತ್ಯುತ್ತಮ ಮಣಿಗಳನ್ನು ಬಳಸಿ ನೆಲದ ರಚನೆಯನ್ನು ಮಾಡುವುದು
10. ಶಯನರಚನ – ವಿವಿಧ ರೀತಿಗಳಿಂದ ಹಾಸಿಗೆ ಹಾಸುವುದು
11. ಉದಕವಾದ್ಯ – ಜಲತರಂಗ ಮುಂತಾದ ನೀರಿನ ವಾದ್ಯ ಸಂಗೀತ
12. ಉದಕಾಘಾತ – ಜಲಕ್ರೀಡೆಯಂತೆ ನೀರಿನಿಂದ ಪರಸ್ಪರ ಹೊಡೆಯುವುದು
13. ಚಿತ್ರಯೋಗ – ದೌರ್ಭಾಗ್ಯವನ್ನುಂಟುಮಾಡುವಂತಹ ಕೆಟ್ಟ ಕಾರ್ಯಗಳು ಉದಾಹರಣೆಗೆ ಅಕಾಲಿಕವಾಗಿ ತಲೆಗೂದಲನ್ನು ಹಣ್ಣಾಗಿಸುವಿಕೆ ಮುಂತಾದವು
14. ಮಾಲ್ಯಗ್ರಂಥನ ವಿಕಲ್ಪ – ವಿವಿಧ ರೀತಿಗಳಿಂದ ಹೂಮಾಲೆಗಳನ್ನು ಕಟ್ಟುವಿಕೆ
15. ಶೇಖರಕಾಪೀಡಯೋಜನ – ತಲೆಯ ಜುಟ್ಟಿಗೆ ಸಿಕ್ಕಿಸುವ ಮಾಲೆಗಳ ರಚನೆ
16. ನೇಪಥ್ಯಪ್ರಯೋಗ – ಆಯಾ ದೇಶ, ಕಾಲಗಳಿಗೆ ತಕ್ಕಂತೆ ಉಡುಪುಗಳನ್ನು ರಚಿಸುವುದು
17. ಕರ್ಣಪತ್ರಭಂಗ – ಆನೆಯ ದಂತ ಹಾಗೂ ಶಂಖ, ಚಿಪ್ಪುಗಳಿಂದ ಕಿವಿಗೆ ಹಾಕುವ ಆಭರಣಗಳನ್ನು ರಚಿಸುವುದು
18. ಗಂಧಯುಕ್ತಿ – ಪರಿಮಳಭರಿತ ಗಂಧವನ್ನು ತಯಾರಿಸಿ ಲೇಪಿಸುವುದು

19. ಭೂಷಣಯೋಜನ – ಬೇರೆ ಬೇರೆ ರೀತಿಯ ಆಭರಣಗಳನ್ನು ಮಾಡಿ ಜೋಡಣೆ ಮಾಡುವುದು
20. ಐಂದ್ರಜಾಲ – ಬಗೆಬಗೆಯ ಐಂದ್ರಜಾಲಗಳನ್ನು ಮಾಡುವುದು
21. ಕೌಚುಮಾರಯೋಗ – ಬಗೆಬಗೆಯಾಗಿ ದೇಹದ ಸೌಂದರ್ಯವನ್ನು ಹೆಚ್ಚು ಮಾಡುವುದು
22. ಹಸ್ತಲಾಘವ – ಅತ್ಯಂತ ಚುರುಕಾಗಿ ಕೈಗಳಿಂದ ಕೆಲಸವನ್ನು ಮಾಡುವುದು
23. ವಿಚಿತ್ರಶಾಕಯೂಷಭಕ್ಷವಿಕಾರಕ್ರಿಯೆ – ವಿಚಿತ್ರ ರೀತಿಯ ತರಕಾರಿ ತಿನಿಸುಗಳು, ಮಾಂಸದ ತಿಂಡಿಗಳನ್ನು, ಮಾಂಸದ ಸಾರನ್ನು ತಯಾರಿಸುವ ವಿಧಾನ
24. ಪಾನಕರಸರಾಗಾಸವಯೋಜನವಿಧಿ – ವಿವಿಧ ಪಾನೀಯ, ಲೇಹ, ಆಸವಗಳನ್ನು ತಯಾರಿಸುವುದು
25. ಸೂಚೀವಾನಕರ್ಮ– ಸೂಜಿಯನ್ನು ಉಪಯೋಗಿಸಿ ಮಾಡುವಂತಹ ಕೆಲಸಗಳು
26. ಸೂತ್ರ ಕ್ರೀಡೆ – ದಾರಗಳನ್ನು ಮಧ್ಯದಲ್ಲಿ ತುಂಡುಮಾಡಿ ಪುನಃ ಇಡಿಯಾಗಿರುವಂತೆ ತೋರಿಸುವುದು
27. ವೀಣಾಡಮರುಕವಾದ್ಯ – ವೀಣೆ, ಡಮರು ಮುಂತಾದವುಗಳನ್ನು ನುಡಿಸುವುದು
28. ಪ್ರಹೇಲಿಕಾ – ಒಗಟುಗಳನ್ನು ಹೇಳುವುದು ಹಾಗೂ ಬಿಡಿಸುವುದು
29. ಪ್ರತಿಮಾಲಾ – ಅಂತ್ಯಾಕ್ಷರಿಯಂತೆ ಸ್ಪರ್ಧೆಯಲ್ಲಿ ಶ್ಲೋಕಗಳ ರಚನೆ
30. ದುರ್ವಾಚಕಯೋಗ – ಶಬ್ದಗಳನ್ನು ಉಚ್ಚರಿಸಲು ಅತ್ಯಂತ ಕಷ್ಟವಾಗುವ ಮತ್ತು ಅವುಗಳ ಅರ್ಥಗಳನ್ನು ತಿಳಿಯಲು ಇನ್ನಷ್ಟು ಕಷ್ಟವಾಗುವ ಶ್ಲೋಕಗಳನ್ನು ಹೇಳುವುದು
31. ಪುಸ್ತಕವಾಚನ – ಕಾವ್ಯಗಳನ್ನು ಆಯಾ ರಸಗಳಿಗೆ ತಕ್ಕಂತೆ ವಾಚನ ಮಾಡುವುದು (ಗಮಕ)
32. ನಾಟಕ– ಆಖ್ಯಾಯಿಕೆಗಳನ್ನು ರಂಗಸ್ಥಳದ ಮೇಲೆ ಅಭಿನಯಪೂರ್ವಕವಾಗಿ ತೀರಿಸುವುದು
33. ಕಾವ್ಯ ಸಮಸ್ಯಾಪೂರಣ – ಕಾವ್ಯದಲ್ಲಿ ಪದ್ಯವೊಂದರಲ್ಲಿರುವ ಒಂದು ಸಾಲನ್ನು ಬೇರೆ ಅರ್ಥ ಬರುವಂತೆ ಹೇಳಿ ಪೂರ್ಣವಾಗಿ ಭರ್ತಿಮಾಡುವಂತೆ ಕೇಳುವುದು
34. ಪಟ್ಟಿಕಾವೇತ್ರವಾನವಿಕಲ್ಪ – ಚೂರಿಯಿಂದ ಬೆತ್ತವನ್ನು ಕೆರೆದು ಸೀಳಿ ಬುಟ್ಟಿ ಮುಂತಾದವುಗಳನ್ನು ಮಾಡುವುದು
35. ತಕ್ಷಕರ್ಮ– ಬಡಗಿಯು ಮಾಡುವ ಒಂದಷ್ಟು ಕೆಲಸಗಳು
36. ತಕ್ಷಣ– ಒಳ್ಳೆಯ ಮಂಚ ಮುಂತಾದುವುಗಳನ್ನು ತಯಾರಿಸುವುದು
37. ವಾಸ್ತುವಿದ್ಯೆ – ಮನೆಕಟ್ಟುವ ವಿದ್ಯೆ
38. ರೂಪ್ಯರತ್ನಪರೀಕ್ಷೆ: ನಾಣ್ಯಗಳನ್ನು ಮತ್ತು ರತ್ನಗಳನ್ನು ಪರೀಕ್ಷಿಸುವುದು
39. ಧಾತುವಾದ – ಮಣ್ಣು, ಕಲ್ಲು, ರತ್ನ ಮುಂತಾದ ಧಾತುಗಳನ್ನು ಬೀಳಿಸಿ ಅಂತಹ ಜಾಗಗಳ ಮಹತ್ವವನ್ನು ತಿಳಿಸುವುದು
40. ಮಣಿರಾಗಕರ ಜ್ಞಾನ – ಸ್ಫಟಿಕವೇ ಮುಂತಾದ ಮಣಿಗಳ ಬಣ್ಣ ಹಾಗೂ ಅವುಗಳು ಲಭಿಸುವ ಗಣಿಗಳ ಜ್ಞಾನ
41. ವೃಕ್ಷಾಯುರ್ವೇದಯೋಗ – ಮರಗಳನ್ನು ಅಂದರೆ ಗಿಡಗಳಿಗೆ ಬೇಕಾದ ಮಣ್ಣಿನ ಪರೀಕ್ಷೆ ನಡೆಸಿ ಅಲ್ಲಿ ಗಿಡಗಳನ್ನು ನೆಟ್ಟು ಮರವಾಗಿಸುವ ಜ್ಞಾನ
42. ಮೇಷಕುಕ್ಕುಟಲಾವಕಯುದ್ಧವಿಧಿ – ಟಗರು, ಕೋಳಿ ಮತ್ತು ಲಾವಕ ಹಕ್ಕಿಗಳ ಹೊಡೆದಾಟವನ್ನು ಏರ್ಪಡಿಸುವುದು
43. ಶುಕಸಾರಿಕಾಪ್ರಲಾಪನ– ಗಂಡು ಹೆಣ್ಣು ಗಿಳಿಗಳು ಮಾನವ ಭಾಷೆಯಿಂದ ಮಾತನಾಡುವಂತೆ ಮಾಡುವುದು

44. ಉತ್ಸಾದನ, ಸಂವಾಹನ, ಕೇಶವರ್ಧನ ಕೌಶಲ – ಕಾಲಿನಿಂದ ಒತ್ತುವುದು ಉತ್ಸಾದನ. ಅದೇ ರೀತಿ ತಲೆಗೆ ಎಣ್ಣೆ ಹಾಕಿ ಕೂದಲು ಬೆಳೆಯಲು ಸಹಕಾರಿಯಾಗುವಂತೆ ಮಾಡುವುದು ಕೇಶವರ್ಧನ. ಉಳಿದ ಎಲ್ಲ ಅಂಗಗಳನ್ನು ನೀವುವುದು ಅಂಗಮರ್ದನ– ಇವುಗಳಲ್ಲಿ ಕುಶಲತೆ

45. ಅಕ್ಷರಮುಷ್ಠಿಕಾಕಥನ – ಮುಷ್ಠಿಯೊಳಗೆ ಅಕ್ಷರಗಳನ್ನು ಮುಚ್ಚಿ ಇಟ್ಟಿದ್ದರೂ ಅದರೊಳಗಿರುವ ಸಂಗತಿಯನ್ನು ಸರಿಯಾಗಿ ಹೇಳುವುದು

46. ಮ್ಲೇಚ್ಛಿತವಿಕಲ್ಪ – ಸರಿಯಾದ ಶಬ್ದವನ್ನೇ ಪ್ರಯೋಗಿಸಿದ್ದರೂ ಅದನ್ನು ಯಾವುದೋ ಒಂದು ಗುಪ್ತ ವಿಷಯವನ್ನು ತಿಳಿಸುವುದಕ್ಕಾಗಿ ಅಸ್ಪಷ್ಟವಾಗಿ ಹೇಳುವುದು

47. ದೇಶಭಾಷಾವಿಜ್ಞಾನ – ಗೊತ್ತಾಗದ ವಿಷಯವನ್ನು ತಿಳಿದುಕೊಳ್ಳುವ ಸಲುವಾಗಿ ಆಯಾ ದೇಶಭಾಷೆಗಳನ್ನು ಶೀಘ್ರವಾಗಿ ಕಲಿಯುವುದು

48. ಪುಷ್ಪಶಕಟಿಕಾ – ಹೂವುಗಳನ್ನು ಮಕ್ಕಳ ಆಟಿಕೆಯ ರೂಪದಿಂದ ಜೋಡಿಸುವುದು

49. ನಿಮಿತ್ತ ಜ್ಞಾನ – ಶುಭ ಮತ್ತು ಅಶುಭಫಲಗಳನ್ನು ಅರಿತು ಹೇಳುವ ನಿಮಿತ್ತವಿದ್ಯೆ

50. ಯಂತ್ರಮಾತೃಕಾ – ಹಾಳಾಗಿರುವ ಮತ್ತು ಸರಿಯಾಗಿರುವ ಯಂತ್ರಗಳನ್ನು ದುರಸ್ತಿಮಾಡಿ ಯುದ್ಧಕ್ಕೆ ಸಜ್ಜುಗೊಳಿಸುವುದು

51. ಧಾರಣಮಾತೃಕಾ – ಅಧ್ಯಯನ ಮಾಡಿರುವ ಗ್ರಂಥವನ್ನು ಬುದ್ಧಿಯಲ್ಲಿ ನೆಲೆನಿಲ್ಲಿಸುವುದು

52. ಸಂಪಾಠ್ಯ: ಒಬ್ಬನು ಮೊದಲೇ ನಿರ್ಧರಿಸಲ್ಪಟ್ಟಿರುವ ಗ್ರಂಥವೊಂದನ್ನು ಓದುತ್ತಿರುವಾಗ ಎರಡನೆಯವನು ಆ ಗ್ರಂಥವನ್ನು ಓದದಿದ್ದರೂ ತಪ್ಪಿಲ್ಲದಂತೆ ದನಿಗೂಡಿಸುವುದು

53. ಮಾನಸೀ ಕಾವ್ಯಕ್ರಿಯೆ – ಒಬ್ಬನು ಬರೆದುದನ್ನು ಮನಸ್ಸಿನಲ್ಲೇ ಪರಿಭಾವಿಸಿ ಪೂರ್ವತಯಾರಿಯಿಲ್ಲದೆ ಓದುವುದು ಹಾಗೂ ಸ್ವತಂತ್ರವಾಗಿ ಕಾವ್ಯಗಳನ್ನು ರಚಿಸುವುದು

54. ಅಭಿದಾನಕೋಶ – ಬೇರೆ ಬೇರೆ ಕೋಶಗಳಲ್ಲಿ ಶಬ್ದಗಳಿಗೆ ಯಾವ ಯಾವ ಅರ್ಥಗಳನ್ನು ಹೇಳಿದ್ದಾರೆ ಎಂದು ಕೂಡಲೇ ತಿಳಿಯುವುದು

55. ಛಂದೋಜ್ಞಾನ – ವೃತ್ತಗಳು, ಗಣಗಳು ಮೊದಲಾದ ವಿವಿಧ ಪದ್ಯರಚನಾ ಛಂದಸ್ಸುಗಳ ತಿಳಿವಳಿಕೆ

56. ಕ್ರಿಯಾಕಲ್ಪ – ಕಾವ್ಯವನ್ನು ರಚಿಸುವ ಕಲೆ

57. ಛಲಿತಕಯೋಗ – ಇನ್ನೊಬ್ಬರನ್ನು ಭ್ರಮೆಗೊಳ್ಳುವಂತೆ ಮಾಡುವ ಸಮ್ಮೋಹಿನಿ ವಿದ್ಯೆ

58. ವಸ್ತ್ರಗೋಪನೀ – ಹರಿದ ಬಟ್ಟೆಯನ್ನು ಅದು ಹರಿಯದಿರುವ ಬಟ್ಟೆಯೋ ಎಂಬ ರೀತಿಯಲ್ಲಿ ಉಡುವುದು

59. ದ್ಯೂತವಿಶೇಷ – ವಿಶೇಷ ರೀತಿಯಿಂದ ಜೂಜು ಅಥವಾ ಪಗಡೆಯಾಡುವುದು

60. ಆಕರ್ಷಕ್ರೀಡಾ – ಹಗ್ಗದಿಂದ ಎಳೆಯುವ ಆಟ

61. ಬಾಲಕ್ರೀಡನಕ – ಮಕ್ಕಳಿಗಾಗಿ ಆಟಗಳು – ಚೆಂಡು, ಬೊಂಬೆ ಮುಂತಾದ ಆಟಿಕೆಗಳೊಂದಿಗೆ ಆಡುವುದು

62. ವೈನಯಿಕೀ – ಆನೆ, ಕುದುರೆ ಮುಂತಾದ ಪ್ರಾಣಿಗಳನ್ನು ಪಳಗಿಸುವುದು

63. ವೈಜಯಿಕೀ – ವಿಜಯವನ್ನು ಹೊಂದುವುದಕ್ಕಾಗಿ ಮಾಡುವ ಯುದ್ಧ ಮುಂತಾದ ಉಪಾಯಗಳು.

64. ವ್ಯಾಯಾಮಿಕೀ – ಮೈಗೆ ವ್ಯಾಯಾಮವನ್ನೊದಗಿಸುವಂತಹ ಬೇಟೆ, ವ್ಯಾಯಾಮ ಮುಂತಾದುವುಗಳು.

## ಎರಡನೇ ಮುಖ್ಯ ಕಲೆಯಾಗಿ ನೃತ್ಯ

ಶುಕ್ರನೀತಿಕಾರ, ಮಹರ್ಷಿ ವಾತ್ಸ್ಯಾಯನ ಮೊದಲಾದವರು ನೃತ್ಯವನ್ನು ಚತುಃಷಷ್ಟಿ ಕಲೆಯನ್ನಾಗಿ ಪರಿಗಣಿಸಿದವರಲ್ಲಿ ಪ್ರಥಮರು. ನೃತ್ಯವಿದ್ಯೆಯನ್ನು ಕಲಿಯುವಾಗ, ಪ್ರಯೋಗಿಸುವಾಗ ಗಮನಿಸಬೇಕಾದ ಮುಖ್ಯವಾದ ಆರು ಅಂಶಗಳನ್ನು ತಿಳಿಸುತ್ತಾನೆ ಮಹರ್ಷಿ ವಾತ್ಸ್ಯಾಯನ.– 'ಕರಣಾನ್ಯಂಗಹಾರಾಶ್ಚ ವಿಭಾವೋ ಭಾವ ಏವ ಚ । ಅನುಭಾವೋ ರಸಾಶ್ಚೇತಿ ಸಂಕ್ಷೇಪಾನ್ನೃತ್ಯಸಂಗ್ರಹಃ ॥ ಇವುಗಳಲ್ಲಿ ಕರಣಾಂಗಹಾರಗಳು ಮೂರ್ತಸ್ವರೂಪದ್ದಾದರೆ; ಭಾವ–ವಿಭಾವ–ಅನುಭಾವ–ರಸಗಳು ಅಮೂರ್ತಸ್ವರೂಪದ್ದಾಗಿದೆ. ಅಂದರೆ ಭಾವ, ವಿಭಾವ, ಅನುಭಾವ ಮತ್ತು ರಸವೆಲ್ಲವೂ ಮನಸ್ಸು, ಮುಖ, ದೇಹಭಾಷೆಗಳ ಸೂಕ್ಷ್ಮವನ್ನು ಅವಲಂಬಿಸಿರುವಂತದ್ದು.

ಮೇಲ್ಕಂಡ ಈ ಮುಖ್ಯ ಆರು ಅಂಶಗಳು ನರ್ತಕರಲ್ಲಿರುವ ಸಾಧ್ಯಾಸಾಧ್ಯತೆಗಳನ್ನು ಗಮನಿಸಿ ನೃತ್ಯವಿದ್ಯೆಯನ್ನು ನಾಟ್ಯ ಮತ್ತು ಅನಾಟ್ಯವೆಂದು ವಿಭಾಗಿಸುತ್ತಾನೆ ವಾತ್ಸ್ಯಾಯನನ ಗ್ರಂಥಕ್ಕೆ ವ್ಯಾಖ್ಯಾನ ಬರೆದ ಜಯಮಂಗಲಾ ವ್ಯಾಖ್ಯಾನಕಾರನಾದ ಯಶೋಧರ ಇಂದ್ರಪಾದ. ಯಾಕೆಂದರೆ 'ಸ್ವರ್ಗೇವ ಮರ್ತ್ಯಲೋಕೇ ವಾ ಪಾತಾಲೇ ವಾ ನಿವಾಸಿನಾಮ್ । ಕೃತಾನುಕರಣಂ ನಾಟ್ಯಮನಾಟ್ಯಂ ನರ್ತಕಾಶ್ರಿತಮ್॥ –ಎಂದರೆ ನಾಟ್ಯ, ಅನಾಟ್ಯಗಳು ನರ್ತಕನನ್ನೇ ಆಶ್ರಯಿಸಿರುತ್ತವೆ. ಇನ್ನೂ ವಿವರವಾಗಿ ಹೇಳುವುದಾದರೆ; ಶೃಂಗಾರಸ, ರತಿಭಾವ, ಆನಂದದ ಅನುಭಾವ, ವಸಂತಕಾಲದ ವಿಭಾವದ ಸನ್ನಿವೇಶದಲ್ಲಿ ಅಂಗಾಂಗಗಳ ಬಿರುಸಿನ ಚಲನೆ, ಯುದ್ಧ, ಆಯುಧಪ್ರದರ್ಶನದಂತಹ ಆಂಗಿಕವನ್ನು ಮಾಡುತ್ತಿದ್ದರೆ ನರ್ತಕನಿಗೆ ನೃತ್ಯವಿದ್ಯೆಯ ಸೂಕ್ಷ್ಮವೇ ತಿಳಿದಿಲ್ಲವೆಂದು ಅರ್ಥ.ಈ ನಿಟ್ಟಿನಲ್ಲಿ ಅಂಗಾಹಾರಗಳ ಕಲ್ಪನೆ ಬಹಳ ಮುಖ್ಯ.

ನೃತ್ಯ–ಎಂಬ ಪದವು 'ನೃತೀ ಗಾತ್ರ ವಿಕ್ಷೇಪೇ' ಎಂಬ ಧಾತುವಿನಿಂದ ಹುಟ್ಟಿದೆ. ಸಾಮಾನ್ಯಾರ್ಥದಲ್ಲಿ ದೇಹವನ್ನು ಕುಣಿಸುವುದು ಎಂದರ್ಥ. ಆದರೆ ಗಾತ್ರವಿಕ್ಷೇಪವು ತಾಲಲಯಾಶ್ರಿತವಾಗಿರಬೇಕು. 'ತಾಳಗತಿಃ ಕಪರ್ದೀ' ಎಂದು ಭಾಗವತಪುರಾಣವೇ ತಿಳಿಸುವಂತೆ ಶ್ರೀಕೃಷ್ಣನು ಕಾಳಿಂಗದ ಮೇಲೆ ನರ್ತನ ಮಾಡುವಾಗ ತಾಳವನ್ನು ನುಡಿಸಿದವನು ಶಿವ. ಅದರಲ್ಲೂ ಕರಣಾಂಗಹಾರಗಳಿಗೆ ಅಂದರೆ ನೃತ್ತಕ್ಕೆ ಗುರು ಶಿವನೇ ಆಗಿದ್ದಾನೆ; ಶಿವನ ತಾಂಡವನೃತ್ತವೇ ಮೊತ್ತಮೊದಲ ನೃತ್ಯವೂ ಆಗಿದೆ. 'ತ್ರಿಯಂಬಕೋ ಮಹಾದೇವೋ ನೃತ್ಯತೇ ಯಸ್ಯ ಸನ್ನಿಧೌ' ಎನ್ನುತ್ತದೆ ವಾಮನಪುರಾಣ. ಸ್ವತಃ ನಾಟ್ಯಕಾರನೂ, ಗುರುವೂ ಶಿವನೇ ಹೌದು. ಈತನ ನಾಟ್ಯಭಂಗಿಯೇ ನೃತ್ಯಾಭ್ಯಾಸಿಗಳಿಗೆ ಆರಾಧ್ಯ ಪ್ರತಿಮೆ.

## ಕಲೆಗಳು ಮತ್ತು ಸ್ತ್ರೀಯರ ವಿದ್ಯಾಭ್ಯಾಸ

ಸ್ತ್ರೀಯು ಶಿಕ್ಷಣದ ಮೂಲಕ ವಿದ್ಯಾವಂತೆಯಾಗಬೇಕು ಎಂಬುದನ್ನು ಮೊತ್ತಮೊದಲು ಪ್ರತಿಪಾದಿಸಿದವನು ಮಹರ್ಷಿ ವಾತ್ಸ್ಯಾಯನ. 'ಯೋಷಿತಾಂ ಶಾಸ್ತ್ರಗ್ರಹಣಸ್ಯ ಅಭಾವಾತ್ ಆನರ್ಥಕಮ್ ಇಹಶಾಸ್ತ್ರೇ ಸ್ತ್ರೀಶಾಸನಮ್ ಇತಿ ಆಚಾರ್ಯಃ' ಎಂಬುದಾಗಿ –ಸ್ತ್ರೀಯರಿಗೆ ವಿದ್ಯೆ ಇಲ್ಲದೇ ಹೋದರೆ ಸಮಾಜಕ್ಕೆ ಕುಟುಂಬಕ್ಕೆ ದುಃಖಪರಂಪರೆಯೇ ಉಂಟಾಗುತ್ತದೆ. ಆದ್ದರಿಂದ ಸಮಾಜ ಮತ್ತು ಕುಟುಂಬ ಸುಖ ಸ್ವಾಸ್ಥ್ಯವನ್ನು ಕಾಣಬೇಕಾದರೆ ಸ್ತ್ರೀಯರು ವಿದ್ಯಾವಂತೆಯಾಗಿರಲೇಬೇಕು ಎಂದು ಶಾಸನಮಾಡುತ್ತಾನೆ. ಅದಕ್ಕೆ ಸಾಕ್ಷಿಯಾಗಿ ಆಗಿನ ಕಾಲದ ಸಾಮಾನ್ಯ ಸ್ತ್ರೀಯರು  ರಾಜ ಮನೆತನದ ಸ್ತ್ರೀಯರು[13] ಕ್ಷತ್ರಿಯ ಕನ್ಯೆಯರು –64 ಕಲೆಗಳನ್ನು ವಿಶೇಷವಾಗಿ ಅಧ್ಯಯನ ಮಾಡುತ್ತಿದ್ದರು. ಅದೇ ರೀತಿ ರಾಜಮನೆತನದವರು, ಸೇವಕರು, ಪ್ರಜಾವರ್ಗದವರು[14] ಈ ಕಲೆಗಳ ಅಧ್ಯಯನ ಮಾಡುತ್ತಿದ್ದರು.

ಕಾಳಿದಾಸ 'ನಾಸ್ತಿ ಸ್ತ್ರೀಣಾಂ ಪೃಥಗ್ ಯಜ್ಞೋ' ಎಂದು ಸ್ತ್ರೀಯರಿಗೆ ಪ್ರತ್ಯೇಕ ಶಿಕ್ಷಣವನ್ನು ವಿಧಿಸಿಲ್ಲ. ಕಾರಣ ಸ್ತ್ರೀಯಾದವಳಿಗೆ ತಂದೆ ಅಥವಾ ಗಂಡ –ಇವರೇ ಅಧ್ಯಾಪಕರು ಎಂದು ಕೆಲವು ಸೂಕ್ತಿಗಳೂ ನುಡಿಯುತ್ತವೆ. ಆದರೆ ಇದನ್ನು ಮೀರಿ ಸ್ತ್ರೀಯಾದವಳು ವಿದ್ಯಾವಂತೆಯಾಗಬೇಕೆಂದು ಶಾಸನ ಮಾಡಿದವನು ಮಹರ್ಷಿ ವಾತ್ಸ್ಯಾಯನ. ಆದರೆ ಸ್ವಚ್ಛಂದವಾಗಿ ಕಲಿಯುವುದಕ್ಕಿಂತ ತಂದೆ ಅಥವಾ ಗಂಡನ ಅನುಮತಿಯೊಂದಿಗೆ ಕಲಿಯುವುದು ಉತ್ತಮ

ಎನ್ನುತ್ತಾನೆ.

ಸ್ತ್ರೀಯಾದವಳು ನೃತ್ಯಾದಿ ವಿದ್ಯೆಯನ್ನು ಕಲಿಯುವ ಕಾಲವನ್ನು 'ಪ್ರಾಗ್ ಯೌವನಾತ್ ಸ್ತ್ರೀ'– ಬಾಲ್ಯದಲ್ಲೇ ಸ್ತ್ರೀಯಾದವಳು ವಿದ್ಯೆಯನ್ನು ಕಲಿತು ಮುಗಿಸಬೇಕು; ಯೌವನದಲ್ಲಿ ತನ್ನ ಮಕ್ಕಳಿಗೆ ಕಲಿಸಬೇಕಾದ ಕಾಲವೊದಗುವ ಕಾರಣ ಮೊದಲೇ ಕಲಿತುಕೊಳ್ಳುವುದು ಒಳ್ಳೆಯದು ಎನ್ನುತ್ತಾನೆ. ಇದು ಸ್ತ್ರೀಯರಿಗೆ ಮಾತ್ರವಲ್ಲ ಎಲ್ಲರಿಗೂ ಅನ್ವಯವಾಗುತ್ತಿತ್ತು.

ಪ್ರತಿಯೊಬ್ಬ ಮನುಷ್ಯನ ಪೂರ್ಣಾಯುಷ್ಯ ನೂರುವರ್ಷಗಳು[15]. ಈ ನೂರು ವರ್ಷದಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳೆನ್ನೆಲ್ಲವೂ ಸಾಧಿಸಬೇಕಾಗಿತ್ತು. ಹಾಗೆಂದು ಪುರುಷಾರ್ಥಗಳ ಪೈಕಿ ಯಾವುದೊಂದನ್ನೂ ಅತಿಯಾಗಿ ಸೇವಿಸಬಾರದು, ಅಂತೆಯೇ ಸೇವಿಸದೆಯೂ ಇರಬಾರದು. ಹೀಗೆ ಸಮನ್ವಯತೆಯಿಂದ ಸಾಧಿಸಿದಾಗ ಪ್ರತಿವ್ಯಕ್ತಿ ಸಂಸಾರದಿಂದ ಬಿಡುಗಡೆಗೊಳ್ಳಲು ಅರ್ಹನಾಗುತ್ತಾನೆ ಎಂಬುವುದು ಸಾರಸ್ವತ ಪರಂಪರೆಯ ಶಾಸ್ತ್ರಕ್ರಮ.[16] ಅದಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಯ ವಯಸ್ಸನ್ನು ಬಾಲ್ಯ, ಕೌಮಾರ, ಯೌವ್ವನ, ವಾರ್ಧಕ್ಯ ಎಂಬ ನಾಲ್ಕು ಅವಸ್ಥೆಗಳನ್ನಾಗಿ ವಿಭಾಗಿಸಲಾಗಿದೆ. ಇದರಲ್ಲಿ ಬಾಲ್ಯ, ಕೌಮಾರದಲ್ಲಿ ವಿದ್ಯಾಭ್ಯಾಸವನ್ನು ಮಾಡಬೇಕು,[17] ಯೌವ್ವನದಲ್ಲಿ ವಿಷಯವನ್ನು ಅನುಭವಿಸಬೇಕು,[18] ವಾರ್ಧಕ್ಯದಲ್ಲಿ ಅಧ್ಯಾತ್ಮಿಕ ಚಿಂತಕನಾಗಬೇಕು[19]– ಈ ಎಲ್ಲಾ ಚಿಂತನೆಗಳು ಭಾರತೀಯ ಪ್ರಾಚೀನ ಸಾರಸ್ವತ ಪರಂಪರೆಯ ಕೊಡುಗೆಗಳು.

ವಿದ್ಯೆಯನ್ನು ಕಲಿಯುವ ಕ್ರಮಾದಿಗಳನ್ನೂ ಮಹರ್ಷಿ ವಾತ್ಸ್ಯಾಯನರು ತಿಳಿಸಿದ್ದಾರೆ. 'ತಸ್ಮಾದ್ ವೈಶ್ವಸಿಕಾದ್ ಜನಾತ್ ರಹಸಿ ಪ್ರಯೋಗಾನ್ ಶಾಸ್ತ್ರಮೇಕದೇಶಂ ವಾ ಸ್ತ್ರೀಗೃಹ್ಣೀಯಾದ್' – ಅಂದರೆ ಸ್ತ್ರೀಯಾದವಳು ವಿಶ್ವಾಸಪಾತ್ರ ಗುರುಗಳಿಂದ ಕಲಿಯಬೇಕು. ವಿಶ್ವಾಸಪಾತ್ರರಲ್ಲದ ಜನರಲ್ಲಿ ಕಲಿಯದೇ ಹೋದರೆ ಅದರಿಂದ ಬಹಳ ಆರ್ಥಿಕ, ಶಾರೀರಿಕ, ವೈಯಕ್ತಿಕ ತೊಂದರೆಗಳನ್ನು ಹೊಂದಬಹುದು. ಕ್ರಮಬದ್ಧವಲ್ಲದ ವಿದ್ಯೆಯಿಂದ ಮತ್ತು ಅದರಿಂದೊದಗುವ ದಂಡನೆಯಿಂದ ದೇಹದಲ್ಲಿ ಅಂಗಾಂಗ ವೈಫಲ್ಯ, ವೈಕಲ್ಯ, ಕೃಶತೆ, ನೋವು ಉಂಟಾಗಬಹುದು.

ಅದರಲ್ಲೂ ಕಲಿಯುವ ವಿದ್ಯೆಯನ್ನು 'ರಹಸ್ಯವಾಗಿ ಕಲಿಯಬೇಕು' ಎಂದೂ ಹೇಳಲಾಗಿದ್ದು; ಇನ್ನೊಬ್ಬರಿಗೆ ಗೊತ್ತಾಗದಂತೆ ಕಲಿತು ರಹಸ್ಯದಲ್ಲೇ ಪ್ರಯೋಗಕೌಶಲ್ಯವನ್ನೂ ಹೊಂದಬೇಕು ಎಂದು ಹೇಳಿದ್ದಾನೆ. ಜೊತೆಗೆ ಯಾವುದೇ ವಿದ್ಯೆಯನ್ನು ಪೂರ್ತಿಯಾಗಿ ಕಲಿಯಲಾಗದಿದ್ದರೂ ಸ್ವಲ್ಪವಾದರೂ ಕಲಿತುಕೊಳ್ಳಬೇಕು ಎಂದು ತಿಳಿಸಿದ್ದಾನೆ. 'ಅಭ್ಯಾಸಾನುಸಾರಿಣೀ ವಿದ್ಯಾ'– ಅಭ್ಯಾಸಕ್ಕನುಸಾರವಾಗಿ ವಿದ್ಯೆ ಸಿದ್ಧಿಸುವುದು. ವಿದ್ಯೆಯನ್ನು ಸಮರ್ಥವಾಗಿ ಪ್ರಯೋಗಿಸಲು ಸತತ ಅಭ್ಯಾಸ ಮಾಡಬೇಕು. 'ಅಭ್ಯಾಸಪ್ರಯೋಜ್ಯಾಶ್ಚ ಚಾತುಃಷಷ್ಟಿಕಾನ್ ಯೋಗಾನ್ ಕನ್ಯಾ ರಹಸ್ಯೇಕಾಕಿನೀ ಅಭ್ಯಸೇತ್' – ಎಂಬಲ್ಲಿಗೆ ಸ್ತ್ರೀಯರು ಚತುಃಷಷ್ಟಿವಿದ್ಯೆಗಳನ್ನು ಕಲಿತು ಅದನ್ನು ಯುಕ್ತಪ್ರಯೋಜನಕ್ಕಾಗಿ ಬಳಸಿಕೊಳ್ಳಬೇಕು ಎನ್ನುತ್ತಾನೆ. ಹೀಗೆ ವಿದ್ಯೆ ಅಭ್ಯಾಸಮಾಡುವಾಗ ಗುಂಪು ಅಂದರೆ ಅನೇಕ ಜನರ ಸಹಯೋಗದೊಂದಿಗೆ ಇರಬಾರದು. ವಿದ್ಯೆಯು ಸಿದ್ಧಿಯಾಗುವಂತೆ ಮಾಡಲು ರಹಸ್ಯದಲ್ಲಿ ಕಲಿತುಕೊಳ್ಳಬೇಕು ಎಂದಿದ್ದಾನೆ ವಾತ್ಸ್ಯಾಯನ.

ಸ್ತ್ರೀಗೆ ವಿದ್ಯಾಭ್ಯಾಸ ನೀಡಲು ಪಾತ್ರಾಪಾತ್ರ ಗುರುಗಳ/ಜನಗಳ ಬಗ್ಗೆ ಪ್ರಸ್ತಾಪಿಸುತ್ತಾನೆ ವಾತ್ಸ್ಯಾಯನ– 'ಆಚಾರ್ಯಸ್ತು ಕನ್ಯಾನಾಂ ಪ್ರವೃತ್ತಪುರುಷಸಂಪ್ರಯೋಗಾ ಸಹಸಂಪ್ರವೃದ್ಧಾ ಧಾತ್ರೇಯಿಕಾ, ತಥಾಭೂತ ವಾ ನಿರತ್ಯಯ ಸಂಭಾಷಣಸಖೀ, ಸವಯಾಶ್ಚ ಮಾತೃಷ್ವಸಾ, ವಿಸ್ರಬ್ಧಾ ತತ್‌ಸ್ಥಾನೀಯ ವೃದ್ಧದಾಸೀ, ಪೂರ್ವಸಂಸೃಷ್ಟವಾ ಭಿಕ್ಷುಕೀ, ಸ್ವಸಾ ಚ ವಿಶ್ವಾಸಪ್ರಯೋಗಾತ್'– ಎಂದರೆ ವಿದ್ಯೆ ಕಲಿಸುವವರು ಮುಖ್ಯವಾಗಿ ಮದುವೆಯಾಗಿರುವವರಾಗಬೇಕು. ಅದೇ ರೀತಿ ಮದುವೆಯಾಗಿ ಅನ್ನಾಹಾರಾದಿಗಳನ್ನು ಮಾಡಿಕೊಟ್ಟು ರಕ್ಷಿಸುವವಳು, ಆಕೆಯ ಮಗಳು, ಮದುವೆಯಾದ ಗೆಳತಿ, ಗೆಳತಿಯಂತಹ ತಾಯಿಯ ಅಕ್ಕತಂಗಿಯಂದಿರು, ವೃದ್ಧದಾಸಿ, ವಿಧವೆಯಾಗಿರುವ ಭಿಕ್ಷುಕಿ, ಮದುವೆಯಾಗಿರುವ ಅಕ್ಕ– ಇವರೆಲ್ಲ ವಿಶ್ವಾಸಪಾತ್ರರಾಗಿದ್ದು ಗುರುಗಳಾಗಲು ಅರ್ಹರು ಎನ್ನುತ್ತಾನೆ.

**ಉಪಸಂಹಾರ:** 'ಕಲಾನಾಂ ಗ್ರಹಣಾದೇವ ಸೌಭಾಗ್ಯಮುಪಜಾಯತೇ । ದೇಶಕಾಲೌ ತ್ವಪೇಕ್ಷ್ಯಾಸಾಂ ಪ್ರಯೋಗಃ ಸಂಭವೇನ್ನವಾ' –ಕಲೆಯನ್ನು ಕಲಿಯುವುದರ ಮುಖ್ಯಫಲವೇ ಸೌಭಾಗ್ಯ. ಈ

ಸೌಭಾಗ್ಯವೊಂದಿದ್ದರೆ ಉಳಿದೆಲ್ಲವೂ ಸಿದ್ಧಿಯಾಗುವುದು. ಕಲಿತವಿದ್ಯೆಯನ್ನು ಪ್ರಯೋಗ ಮಾಡಲು ಅವಕಾಶಗಳು ಸಿಗಲಿ, ಸಿಗದೇ ಇರಲಿ ಅದು ಸೌಭಾಗ್ಯವನ್ನಂತೂ ಕೊಡುತ್ತದೆ. ಭರತನೂ ತನ್ನ ನಾಟ್ಯಶಾಸ್ತ್ರದಲ್ಲಿ ಇದೇ ಬಗೆಯ ಮಾತುಗಳನ್ನು ಹೇಳಿದ್ದು; ಲೋಕದಲ್ಲಿ ಶುಭವು ಉಂಟಾಗಲು ನಾಟ್ಯವು ಕಾರಣವಾಗಿದೆ, ನಾಟ್ಯದ ಪ್ರದರ್ಶನದಿಂದ ದೇವತೆಗಳು ಸಂತೋಷಗೊಳ್ಳುತ್ತಾರೆ, ಮಂಗಲವನ್ನು ಉಂಟುಮಾಡುವುದೇ ನೃತ್ತ, ಅಶುಭ, ಅಮಂಗಲತ್ವವು ತೊಲಗಿ ಆನಂದ ಪಡೆಯಲು ನೃತ್ತವನ್ನು ಮಾಡಬೇಕು ಎಂದಿದ್ದಾನೆ.

64 ವಿದ್ಯೆಗಳು ಮನುಷ್ಯನ ವಿವೇಕವನ್ನು ಬಲಪಡಿಸುವುದರೊಂದಿಗೆ ಹಣ ಜೀವನ, ಸುಖಗಳನ್ನು ಧಾರೆಯೆರೆಯುತ್ತವೆ.[20] ಕೇವಲ ಲೌಕಿಕ ವಿದ್ಯೆಯಾಗಿ ಕಂಡರೂ ಕೂಡಾ ಅಲೌಕಿಕದ ಸಾಧನೆಗೂ ಕಾರಣವಾಗಿವೆ. ಆದ್ದರಿಂದ ಇವು ಸ್ತ್ರೀ–ಪುರುಷ, ಜಾತಿ–ಮತ–ಧರ್ಮದ ಗಡಿರೇಖೆಗಳಿಲ್ಲದೆ ಪ್ರಾಚೀನ ಭಾರತದಲ್ಲಿ ಕಲಿಯಲ್ಪಡುತ್ತಿತ್ತು.

ಪ್ರಾಚೀನ ಋಷಿಗಳಿಂದ ಶೋಧಿಸಲ್ಪಟ್ಟು ಇಂದಿನವರೆಗೆ ಬೆಳೆದು ಬಂದಿರುವ ವಿದ್ಯೆಗಳು ಸಾರ್ವಕಾಲಿಕ ಅವಶ್ಯಕ. ಇವು ಹಿಂದೊಮ್ಮೆ ಜನರ ಜೀವನದಲ್ಲಿ ಪ್ರಧಾನ ಪಾತ್ರವನ್ನು ವಹಿಸಿತ್ತು. ಅದೇ ಇಂದಿನ ಆಧುನಿಕ ವಿದ್ಯೆಯನ್ನು ಪ್ರಾಚೀನ ಸಾರಸ್ವತ ಪರಂಪರೆಯೊಂದಿಗೆ ಜೊತೆಗೂಡಿಸಿದರೆ ಅನರ್ಘ್ಯಫಲವನ್ನು ಪಡೆಯಬಹುದು. 'ಹಿತ್ತಲಗಿಡ ಮದ್ದಲ್ಲ'[21] ಎಂಬ ಭಾವನೆಯಿಂದ ಈ ವಿದ್ಯೆಗಳನ್ನು ನಾಶಗೊಳಿಸದೆ, ಆಧುನಿಕ ವಿದ್ಯೆ/ಜೀವಿತದೊಂದಿಗೆ ಸೇರಿಸಿಗೊಂಡಾಗ ಪುಟಕ್ಕಿಟ್ಟ ಚಿನ್ನದಂತೆ ನಮ್ಮ ಜೀವನ ಇನ್ನಷ್ಟು ಸಹಾಯವನ್ನು ಸುಖಮಯವಾದೀತು.

ಸಾಂಸ್ಕೃತಿಕವಾಗಿ ದೇಶ ಬೆಳೆದರೆ ದೇಶದಲ್ಲಿ ಶಾಂತಿ ಉಂಟಾಗುತ್ತದೆ. ಶಾಂತಿಯುಕ್ತ ಜೀವನ ದೇಶದ ಭದ್ರತೆಗೆ, ಏಕತೆಗೆ ಕಾರಣವಾಗುವುದರಲ್ಲಿ ಸಂದೇಹವೇ ಇಲ್ಲ. ಹೀಗೆ ವೈಜ್ಞಾನಿಕವಾದ ಫಲವನ್ನು ನೃತ್ಯಾದಿ ವಿದ್ಯೆಗಳಿಂದ ಪಡೆದರೆ ಜನರು ರೋಗಮುಕ್ತರಾಗಿ ಆನಂದದಿಂದ ಜೀವಿಸಲು ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಕಡ್ಡಾಯ ಶಿಕ್ಷಣವ್ಯವಸ್ಥೆಯೊಂದಿಗೆ ನೃತ್ಯಾದಿಕಲೆಗಳ ಕಲಿಕೆಯೂ ನರಂತರವಾಗಿ ಮುನ್ನಡೆಯಲಿ ಎಂಬುದೇ ಇಲ್ಲಿನ ಆಶಯ.

**ಅಡಿಟಿಪ್ಪಣಿಗಳು**

[1] ವಿದ್ಯಾನಾಮ ನರಸ್ಯ ರೂಪಮಧಿಕಂ ಪ್ರಚ್ಛನ್ನಗುಪ್ತಂ ಧನಮ್

ವಿದ್ಯಾಭೋಗಕರೀ ಯಶಃಸುಖಕರೀ ವಿದ್ಯಾಗುರೂಣಾಂ ಗುರುಃ

ವಿದ್ಯಾ ಬುಧಜನೋ ವಿದೇಶಗಮನೇ ವಿದ್ಯಾಪರಂ ದೈವತಮ್

ವಿದ್ಯಾ ರಾಜಸು ಪೂಜ್ಯತೇ ನ ಹಿ ಧನಂ ವಿದ್ಯಾವಿಹೀನಃ ಪಶುಃ– ವೇ ಮಾಗಡಿ ಕೃಷ್ಣಶಾಸ್ತ್ರಿ, – ಭತೃಹರಿಯ ನೀತಿಶತಕ 1 – 16 ಪ್ರಕಟಣೆ – 1924 – ಪುಟಸಂಖ್ಯೆ – 16

[2] ಆಹಾರನಿದ್ರಾ ಭಯ ಮೈಥುನಾನಿ ಸಾಮಾನ್ಯಮೇತದ್ ಪಶುಭಿರ್ನರಾಣಾಮ್।

ಏಕೋ ವಿವೇಕೋ ಹ್ಯಧಿಕೋ ಮನುಷ್ಯೇ ತೇನೈರ್ವಿಹೀನಃ ಪಶುಭಿಃ ಸಮಾನಃ॥– (ಸುಭಾಷಿತ ರತ್ನಭಾಂಡಾಗಾರ)

[3] ವಿದ್ಯಜ್ಞಾನೇ (ಸಂಸ್ಕೃತ ವೈಯಾಕರಣ ಸಿದ್ಧಾಂತ) – ಶ್ರೀಶಂಕರ ಅದ್ವೈತ ಶೋಧಕೇಂದ್ರ. ಶ್ರೀಜಗದ್ಗುರು ಮಹಾಸಂಸ್ಥಾಪನಮ್, ದಕ್ಷಿಣಾಮ್ನಾಯ ಶ್ರೀಶಾರದಾಪೀಠ ಶೃಂಗೇರಿ– 2005

[4] ಶಿಕ್ಷ– ಉಪಾದಾನೇ – ಅದೇ – ಪುಟಸಂಖ್ಯೆ 531

[5] ಅರ್ಥಕರೀ ಚ ವಿದ್ಯಾ– ಮಹಾಭಾರತ – ಉದ್ಯೋಗಪರ್ವ ಅಧ್ಯಾಯ 33 ಶ್ಲೋಕ 82 ; ಗೀತಾಪ್ರೆಸ್ ಗೋರಖಪುರ, 1956 ಪುಟ ಸಂಖ್ಯೆ – 123

[6] ವಿದ್ಯಾದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಮ್।

ಪಾತ್ರತ್ವಾದ್ಧನಮಾಪ್ನೋತಿ ಧನಾದ್ಧರ್ಮಂ ತತಃ ಸುಖಮ್ ॥ – ಸುಭಾಷಿತ ಭಾಂಡಾಗಾರ

[7] ಧರ್ಮಾರ್ಥಕಾಮಮೋಕ್ಷಾಶ್ಚ ಪುರುಷಾರ್ಥ ಉದಾಹೃತಃ ॥ – (ಅಗ್ನಿ ಪುರಾಣ) ಪರಾ ಸಂಸ್ಕೃತ – ಕನ್ನಡ ಶಬ್ದಾರ್ಥಕೋಶಃ

[8] ಮೋಕ್ಷೋಪವರ್ಗೇ ಮೃತ್ಯೌಚ ಮೋಚನೇ ಮುಷ್ಕಕದ್ರುಮೇ ( ನಾನಾರ್ಥರತ್ನಕೋಶ)

[9] ಅರ್ಥಾಗಮೋ ನಿತ್ಯಮರೋಗಿತಾ ಚ। ಪ್ರಿಯಾ ಚ ಭಾರ್ಯಾ ಪ್ರಿಯವಾದಿನೀ ಚ ॥ ವಶ್ಯಶ್ಚ ಪುತ್ರೋ ರ್ಥಕರೀ ಚ ವಿದ್ಯಾ ಷಟ್ ಜೀವಲೋಕಸ್ಯ ಸುಖಾನಿ ರಾಜನ್ ॥ (ಮಹಾಭಾರತ – ಉದ್ಯೋಗಪರ್ವ, ಅಧ್ಯಾಯ 33/ ಶ್ಲೋಕ 82) ಗೀತಾಪ್ರೆಸ್ ಗೋರಖಪುರ, 1956 ಪುಟ ಸಂಖ್ಯೆ – 123

[10] ಶ್ರದ್ಧಾವಾನ್ ಲಭತೇ ಜ್ಞಾನಮ್ (ಭಗವದ್ಗೀತೆ) ಜ್ಞಾನಕರ್ಮಸಂನ್ಯಾಸ ಯೋಗ– 8 ಅಧ್ಯಾಯ, ಶ್ಲೋಕ ಸಂಖ್ಯೆ 39, ಗೀತಾಪ್ರೆಸ್ ಗೋರಖಪುರ, 1956 ಪುಟ ಸಂಖ್ಯೆ – 123

[11] ಗುರು ಶುಶ್ರೂಷಯಾ ವಿದ್ಯಾ ಪುಷ್ಕಲೇನ ಧನೇನ ವಾ।

ಅಥವಾ ವಿದ್ಯಾಯಾ ವಿದ್ಯಾ ಚತುರ್ಥೀ ನೋಪಲಭ್ಯತೇ ॥ (ಅಜ್ಞಾತ ಕರ್ತೃಕ ಸುಭಾಷಿತ)

[12] ಗೀತಂ – ವ್ಯಾಯಾಮಿಕೀನಾಂ, ಚ ವಿದ್ಯಾನಾಂ ಜ್ಞಾನಂ ಇತಿ ಚತುಃಷಷ್ಟಿಃ ಅಂಗವಿದ್ಯಾಃ। ಕಾಮಸೂತ್ರಸ್ಯ ಅವಯವಿನ್ಯಃ॥ ಅದೇ ಪುಟ ಸಂಖ್ಯೆ –87 ರಿಂದ 120 (19 ರಿಂದ 82ರ ವರೆಗೆ)

[13] ಯೋಷಿತಾಂ ಶಾಸ್ತ್ರಗ್ರಹಣಸ್ಯಾಭಾವಾದನರ್ಥಕಮಿಹ ಶಾಸ್ತ್ರಮಿತ್ಯಾಚಾರ್ಯಾ॥ ಕಾ.ಸೂ. 1/3/3–1 ಮಹರ್ಷಿ ವಾತ್ಸ್ಯಾಯನಮುನಿಪ್ರಣೀತಂ ಕಾಮಸೂತ್ರಮ್, 1/3/3 ಚೌಖಂಬಾ ಸಂಸ್ಕೃತ ಪ್ರತಿಷ್ಠಾನ ನ್ಯೂಡೆಲ್ಲಿ– 7, 1999.

[14] ಸಂತ್ಯಪಿ ಖಲು ಶಾಸ್ತ್ರ ಪ್ರಹತ ಬುದ್ಧಯೋ ಗಣಿಕಾ ರಾಜಪುತ್ರ್ಯೋ ಮಹಾಮಾತಿರ್ದುಹಿತರಶ್ಚ ॥1/3/11 ಅದೇ ಪುಟ ಸಂಖ್ಯೆ – 81

[15] ಶತಾಯುರ್ವೈ ಪುರುಷೋ ವಿಭಜ್ಯ ಕಾನ್ಮನ್ಯೋನ್ಯಾನುಬದ್ಧಂ ಪರಸ್ಪರಾನುಪಘಾತಕಂ ತ್ರಿವರ್ಗಂ ಸೇವೇತ ॥ ಕಾ.ಸೂ. 1/2/1 –ಅದೇ ಪುಟ ಸಂಖ್ಯೆ –27

[16] ಪರಸ್ಪರಾನುಪಘಾತಕಂ ತ್ರಿವರ್ಗಂ ಸೇವೇತ 1/2/1 – ಅದೇ – ಪುಟ ಸಂಖ್ಯೆ –27

[17] ಬಾಲ್ಯೇ ವಿದ್ಯಾಗ್ರಹಣಾದೀನರ್ಥಾನ್ 1/2/2 –ಅದೇ– ಪುಟ ಸಂಖ್ಯೆ –31

[18] ಕಾಮಂ ಚ ಯೌವ್ವನೇ 1/2/3 ಅದೇ ಪುಟ ಸಂಖ್ಯೆ –33

[19] ಸ್ಥವಿರೇ ಧರ್ಮಂ ಮೋಕ್ಷಂ ಚ 1/2/4 ಅದೇ ಪುಟ ಸಂಖ್ಯೆ –33

[20] ಕಲಾನಾಂ ಗ್ರಹಣಾದೇವ ಸೌಭಾಗ್ಯಮುಪಜಾಯತೇ ಕಾ 1/3/22 ಅದೇ ಪುಟ ಸಂಖ್ಯೆ –123

[21] ಅಜ್ಞಾತಕರ್ತೃಕ ಪ್ರಸಿದ್ಧ ಕನ್ನಡ ಗಾದೆ ಮಾತು.

**ಇತರ ಪರಾಮರ್ಶನ ಗ್ರಂಥ**

1) 64 ವಿದ್ಯೆಗಳು– ಮ. ಶ್ರೀಧರಮೂರ್ತಿ– ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರು–1974

2) ಚತುಷಷ್ಟಿ ಕಲೆಗಳು– ಪ್ರೊ. ಟಿ.ಎಸ್. ಸತ್ಯವತಿ– ಯುವಜನರಿಗಾಗಿ ಸಂಸ್ಕೃತ ವಾಙ್ಮಯ ಭವನದ ಗಾಂಧೀಕೇಂದ್ರ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಅಧ್ಯಯನ ಪೀಠ, ರೇಸ್ ಕೋರ್ಸ್ ರಸ್ತೆ ಬೆಂಗಳೂರು 2002

3) ಕೌಟಿಲ್ಯನ ಅರ್ಥಶಾಸ್ತ್ರ– (ಕೌಟಿಲೀಯಮ್ ಅರ್ಥಶಾಸ್ತ್ರಮ್) ಡಾ। ರಘುನಾಥಸಿಂಹ ಚೌಖಂಬಾಕೃಷ್ಣದಾಸ ಅಕಾಡೆಮಿ ವಾರಾಣಾಸಿ –2009

4) ನಾಟ್ಯಶಾಸ್ತ್ರ ಆಫ್ ಭರತಮುನಿ ಸಂಪುಟ1 – ಡಾ.ಆರ್.ಎಸ್.ನಗರ್(ಸಂಪಾದಕ). ಪರಿಮಳ ಪಬ್ಲಿಕೇಶನ್– ದೆಹಲಿ. 1994

5) ಕಾಮಸೂತ್ರ ಆಫ್ ವಾತ್ಸ್ಯಾಯನ. ರಾಧಾವಲ್ಲಭ ತ್ರಿಪಾಠಿ. ಪ್ರತಿಭಾ ಪ್ರಕಾಶನ–ದೆಹಲಿ. 2005

**(ಲೇಖಕರು ಉಜಿರೆಯ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಮಹಾವಿದ್ಯಾಲಯದ ಸಂಸ್ಕೃತ ವಿಭಾಗ ಪ್ರಾಧ್ಯಾಪಕರು, ಚಿಂತಕರು.)**

***(ಪ್ರಸ್ತುತ ಲೇಖನದಲ್ಲಿ ಹೇಳಲಾಗಿರುವ 64 ವಿದ್ಯೆಗಳ ಕುರಿತ ವಿವರಣೆಯಲ್ಲಿ ಕೆಲವು ವ್ಯತ್ಯಾಸಗಳಿವೆ. ಬೇರೆ ಬೇರೆ ಗ್ರಂಥಗಳಿಗೆ ಅನುಸಾರವಾಗಿ ವಿವರಣೆಗಳನ್ನು ಪರಿಶೀಲಿಸಿ–ಸಂ )***

# ಸಾರಸ್ವತಲೋಕಕ್ಕೆ ಹೊಸ ಕೊಡುಗೆ 'ಮಹಾಮುನಿ ಭರತ' – ಪುಸ್ತಕ

– **'ವಿಪ್ರಭಾ'**, ಪುತ್ತೂರು.

**ಭಾ**ರತೀಯ ಪರಂಪರೆಯ 60 ಮಹಾಪುರುಷರ ಜೀವನಕಥನವನ್ನು ಒಳಗೊಂಡ 60 ಕನ್ನಡ ಪುಸ್ತಕಗಳ ಲೋಕಾರ್ಪಣೆಯಲ್ಲಿ 'ಮಹಾಮುನಿ ಭರತ' ಎಂಬ ಪುಸ್ತಕವೂ ಒಂದು. 23 ಬುಧವಾರ, 2014ರಂದು ಸಾರಸ್ವತಲೋಕಕ್ಕೆ ಸೇರ್ಪಡೆಯಾದ ಈ ಕೃತಿಯು ನಾಟ್ಯ–ನೃತ್ಯಕ್ಷೇತ್ರದಲ್ಲಿ ಈವರೆಗೆ ಇದ್ದ ಭರತಮುನಿಯ ಕುರಿತ ಪುಸ್ತಕಗಳ ಕೊರತೆಯನ್ನು ತುಂಬಿದೆಯೆಂದೇ ಹೇಳಬಹುದು.

ಭರತಮುನಿ ಕೇವಲ ಒಬ್ಬ ಲಾಕ್ಷಣಿಕನಲ್ಲ, ಶಾಸ್ತ್ರಕಾರನಾಗಿರುವಲ್ಲಿಗೋ ಅಥವಾ ಸಮನ್ವಯಕಾರನಾಗುವಲ್ಲಿಗೋ ಆತನ ಕರ್ತವ್ಯ ಮುಗಿದಿಲ್ಲವೆಂದು ಅರ್ಥವಾಗಲಿಕ್ಕಾದರೂ ಒಮ್ಮೆ ಆತನ ನಾಟ್ಯಶಾಸ್ತ್ರವೆಂಬ ಕೃತಿಯೊಳಗೆ ಇಣುಕಿ ನೋಡಬೇಕು. ಕಾರಣ, ಭರತಮುನಿಯನ್ನು ಅರಿಯಲು ನಾಟ್ಯಶಾಸ್ತ್ರ–ಮತ್ತದರ ಭಾಷ್ಯಗಳನ್ನುಳಿದು ಬೇರಾವುದೇ ಆಕರ ಇಲ್ಲ. ಆದರೆ ಇಂತಹ ಅನುಕೂಲ ಕನ್ನಡದಲ್ಲೆ ಅಷ್ಟಾಗಿ ಲಭ್ಯವಿಲ್ಲ. ಜೊತೆಗೆ ನೃತ್ಯಕ್ಷೇತ್ರವನ್ನೂ ಒಳಗೊಂಡಂತೆ ಕನ್ನಡದ ಸಮಗ್ರ ಸಾಹಿತ್ಯ ವಾಙ್ಮಯದಲ್ಲಿ ಅದರಲ್ಲೂ ಇತ್ತೀಚೆಗಿನ ದಶಕಗಳಲ್ಲಿ ಭರತನ ಬಗ್ಗೆ ಸಮಗ್ರ ಪರಿಚಯವನ್ನೀಯುವ ಕೃತಿಗಳು ಬಂದದ್ದು ವಿರಳಕ್ಕೇ ವಿರಳ. ಭರತಮುನಿ ವಿರಚಿತ ನಾಟ್ಯಶಾಸ್ತ್ರವು ಕೂಡಾ ಎಲ್ಲರಿಗೂ ತಲುಪಬಲ್ಲಂತಹ ರೀತಿಯಲ್ಲಿ ಸಮ್ಯಕ್ ದರ್ಶನ ನೀಡುವ ಮತ್ತು ಸಾಮಾನ್ಯ ಓದುಗರಿಗೂ ಕಡಿಮೆ ದರದಲ್ಲಿ ದೊರೆಯುವ ಪ್ರಕಟಣೆಯಾಗದೆ ಕಾಲವದೆಷ್ಟೋ ಕಳೆದುಹೋಗಿದೆ. ನಾಟ್ಯಶಾಸ್ತ್ರದ ಬೃಹತ್ ಸಂಪುಟಗಳಲ್ಲಿ ಭರತನ ಕುರಿತು ವಿವರಗಳು ದೊರೆಯುತ್ತವಾದರೂ; ಬಹುಮೊತ್ತದ ಬೆಲೆಯಿತ್ತು, ಆಯಾಯ ಭಾಷೆಯಲ್ಲಿ ಕೊಂಚಹಿಡಿತವನ್ನಾದರೂ ಸಾಧಿಸಿ, ಓದುವ ತಾಳ್ಮೆಗೆ ಜನ ಮನ ಮಾಡುವುದಿಲ್ಲ; ಅಲ್ಲಲ್ಲಿ ಮಿಂಚಿ ಮರೆಯಾಗುವ ವಿದ್ವತ್ಪೂರ್ಣ ಉಪನ್ಯಾಸಗಳ ಇರವು–ಸೆಳೆವು ಸರ್ವರಿಗೂ ಸಕಾಲಕ್ಕೆ, ಅರ್ಥಗರ್ಭಿತವಾಗಿ ದೊರೆಯುವುದಿಲ್ಲ.

ಅಷ್ಟೇಕೆ, ಪಾಶ್ಚಾತ್ಯ ಮೀಮಾಂಸೆಗಳಿಗೆ ತಮ್ಮ ಭಾರತೀಯ ಪ್ರಜ್ಞೆಯನ್ನು ಮಾರಿಕೊಂಡು ಏನೇನೋ ದ್ವಂದ್ವಗಳನ್ನು ಕಲ್ಪಿಸುತ್ತಾ, ಹಲವು ವಿದ್ವಾಂಸರು, ಸಂಶೋಧಕರೂ ಗೊಂದಲಕ್ಕೀಡಾಗುತ್ತಿದ್ದಾರೆ. ಭರತನ ಕಾಲ–ದೇಶ–ವ್ಯಾಪ್ತಿ–ಕೃತಿಯ ಸಂಬಂಧವಾಗಿ ಭಾರತೀಯ ಸಂಸ್ಕಾರ ದಿಂದ ತೀರಾ ಹೊರಗುಳಿದು ; ಅಲ್ಲೇ ತಮ್ಮ ತಮ್ಮ ಹಿತಾಸಕ್ತಿಯ ಚರ್ಚೆಗಳಿಗೆ ಮೇಲ್ಪಂಕ್ತಿಯ ಹಾಸಿಗೆಯನ್ನು ಹಾಸಿ ಕೊಂಡು ಭರತಮಾರ್ಗವನ್ನು ಬೀದಿಗೆ ಎಳೆದು ತಂದು ನಿಲ್ಲಿಸಿದ್ದೂ ಇದೆ. ಹೀಗಾಗಿ ಭರತನ ಬಗೆಗೆ ಬರೆಯುವು ದೆಂದರೆ ಅದು ದುಸ್ತರ, ಗೊಂದಲಗಳ ಗೂಡು, ಸವಾಲಿನ ಸರಕು ಎಂದೇ ಸಾಹಿತ್ಯ–ನೃತ್ಯಕ್ಷೇತ್ರದಲ್ಲಿ ಗಣಿತವಾಗಿದೆ.



ಹಾಗಾಗಿ ಭರತನ ಬಗ್ಗೆ ತಿಳಿಯಬೇಕೆಂದಿ ರುವ ಹಲವು ಆಸಕ್ತರಿಗೆ ಅವಕಾಶಗಳು ದೊರೆಯದೆ ; ಭರತನ ಬಗೆಗೆ ಸಾಕಷ್ಟು ಪ್ರಶ್ನೆಗಳು ಒಗಟು ಒಗಟಾಗಿಯೇ



ಉಳಿದಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ದುರ್ಲಭವೆನಿಸುವ ಭರತಮುನಿಯ ಸಂಕ್ಷಿಪ್ತ ಪರಿಚಯ–ಪ್ರತಿಭೆಗಳ ಕುರಿತಂತೆ ಕಲಾವಿದರಿಗೆ, ವಿದ್ಯಾರ್ಥಿಗಳಿಗೆ, ಅಧ್ಯಯನಾಸಕ್ತರಿಗೆ, ಸಹೃದಯ ಓದುಗರಿಗೆ ಏಕಕಾಲಕ್ಕೆ ಆಪ್ತವೆನಿಸುವ ಸಮಗ್ರ ಕೃತಿಯ ಅಗತ್ಯ ಇಂದಿಗೆ ಖಂಡಿತಾ ಇದೆ. ಅದನ್ನು ಲೇಖಿಕೆ 'ಮಹಾಮುನಿ ಭರತ' ಎಂಬ ಕೃತಿಯ ಮೂಲಕ ಸಂಕ್ಷಿಪ್ತವಾಗಿ, ಓದಲು ಅನುಕೂಲವಾಗುವಂತೆ ಸರಳ ಮಾದರಿಯಲ್ಲಿ ನೀಡಿದ್ದಾರೆ. ಹಿರಿಯ ವಿದ್ವಾಂಸ ಡಾ.ಕೆ.ಎಲ್. ಶಂಕರನಾರಾಯಣ ಜೋಯಿಸ್ ಅವರು ಭಾರತೀಯ ಗುರುಪರಂಪರೆಯ ಕುರಿತು ಬರೆದಿರುವ ಮುನ್ನುಡಿ ಇಡಿಯ ಪುಸ್ತಕಕ್ಕೆ ಶೋಭೆಯನ್ನಿತ್ತಿದೆ.

ಈ ಕೃತಿಯಲ್ಲಿ ಭರತನೆಂದರೆ ಯಾರು? ಯಾವ ಕಾಲದವನು? ಎಲ್ಲಿ ಬಾಳಿ ಬದುಕಿದವನು? ಅವನನ್ನು ಅರಿಯುವ ಬಗೆ ಹೇಗೆ? ಅವನ ಹಿಂದಿನ ಪರಂಪರೆ ಹೇಗಿತ್ತು? ಸಮಕಾಲೀನರು ಯಾರು? ಅವನ ಗುರುತ್ವ, ಸಾರ್ವಕಾಲೀನ ಪ್ರಜ್ಞೆಗೆ ಇರುವ ಸಾಕ್ಷಿಗಳು ಯಾವುವು? – ಎಂಬಂತಹ ಹಲವು ಕಾಲಗಳಿಂದ ಚಾಲ್ತಿಯಲ್ಲಿರುವ ವಾದ–ವಾಗ್ವಾದದ ಚರ್ಚೆ, ನಿರ್ಣಯಗಳಿಂದ ಮೊದಲ್ಗೊಂಡು ಭರತನ ನಾಟ್ಯಶಾಸ್ತ್ರದ ಮುಖ್ಯ ಅಂಶ, ಸೂಕ್ತಿ–ಉಕ್ತಿಗಳು ಯಾವುವು? ನಾಟ್ಯಶಾಸ್ತ್ರದ ರಚನೆಯ ದಿಕ್ಕು–ದಿಶೆ–ಲಕ್ಷಗಳು ಹೇಗಿವೆ? ನಾಟ್ಯಶಾಸ್ತ್ರದ ಅಧ್ಯಾಯಸಂಕ್ಷೇಪ ಮತ್ತು ಅವುಗಳ ಮಹತ್ತ್ವ, ವ್ಯಾಖ್ಯಾನ ಪರಂಪರೆ ಸಾಗಿಬಂದ ದಾರಿ, ನಾಟ್ಯಶಾಸ್ತ್ರ ಮತ್ತು ಭರತರು ಹೇಗೆ ಪ್ರಸ್ತುತರಾಗುತ್ತಾರೆ? ಆಧುನಿಕ ಕಾಲದಲ್ಲಿ ನಾಟ್ಯಶಾಸ್ತ್ರದ ಸಂಪಾದನೆ ಹೇಗೆ–ಯಾರಿಂದ ನಡೆಯಿತು? ನಾಟ್ಯಶಾಸ್ತ್ರದ ಆವೃತ್ತಿಗಳ ನೆಲೆ ಹೇಗಿದೆ? ಇಂದಿನ ನಾಟ್ಯಪದ್ಧತಿಗೂ ಭರತನ ನಾಟ್ಯಶಾಸ್ತ್ರಕ್ಕೂ ಇರುವ ಸಂಬಂಧ, ವ್ಯತ್ಯಾಸ–ಹೋಲಿಕೆಗಳು ಯಾವುವು? ಭರತಮತಕ್ಕೆ ಅನ್ವಯಿಸಿದರೆ ಇಂದಿನ ಸಾಂಸ್ಕೃತಿಕ ಪರಂಪರೆ ಹೇಗಿದೆ? ಭರತಮಾರ್ಗದಿಂದ ಕಲಿಯಬೇಕಾದದ್ದು– ಅನುಸರಿಸಬೇಕಾದದ್ದು ಏನು? ಭರತನ ಹಾದಿಯಲ್ಲಿ ಇತ್ತೀಚೆಗಿನ ದಶಕಗಳಲ್ಲಿ ಜರುಗಿದ ಉತ್ತಮ ಸಂಶೋಧನೆಗಳು ಯಾವುವು? ಅವುಗಳ ವೈಶಿಷ್ಟ್ಯತೆ ಏನು? ಭರತನ ಬಗೆಗೆ ಇರುವ ಸಂದೇಹ–ಆರೋಪಗಳು ಯಾವುವು? ವಿದ್ವಾಂಸರ ಅಭಿಪ್ರಾಯವೇನು?... ಹೀಗೆ ಭೂತ–ವರ್ತಮಾನ–ಭವಿಷ್ಯತ್ತಿನ ಸಮಗ್ರ ನೆಲೆಯಲ್ಲಿ ಈಗಾಗಲೇ ಕಾಡುತ್ತಿರುವ ಹತ್ತು ಹಲವು ಪ್ರಶ್ನೆಗಳಿಗೆ ಅಧ್ಯಯನ ನಡೆಸಿ ಉತ್ತರಗಳನ್ನು ಶೋಧಮಾರ್ಗದಲ್ಲಿ ಸಮರ್ಪಕವಾಗಿ ಕಂಡುಕೊಂಡು ಯುಕ್ತಮಾರ್ಗದಲ್ಲಿ ಪ್ರತಿಪಾದಿಸಲಾಗಿದೆ.

ಜೊತೆಗೆ ಅಧ್ಯಯನವೊಂದನ್ನು ತೀರಾ ಶುಷ್ಕವಾಗಿ ಬರೆಯುವ ಗೋಜಿಗೆ ಹೋಗದೆ; ಯಾವುದೇ ಓದುಗರಿಗೆ ಸರಳವಾಗಿ, ಸಂಕ್ಷಿಪ್ತವಾಗಿ ಓದಿಸಿಕೊಂಡು ಹೋಗುವಂತೆ ಮಾಡುವಲ್ಲಿ ಲೇಖಿಕಿ ಯಶಸ್ವಿಯಾಗಿದ್ದಾರೆ. ಉತ್ತಮಕೃತಿಗೆ ಇರಬೇಕಾದ ಎಲ್ಲ ಸಲಕ್ಷಣಗಳೂ ಇದಕ್ಕಿವೆ ಎಂಬುದು ಗಮನಾರ್ಹ ಅಂಶ. ಈ ನೆಲೆಯಲ್ಲಿ ಭರತನಂತಹ ಅಸಾಮಾನ್ಯ ವ್ಯಕ್ತಿ ಮತ್ತು ನಾಟ್ಯಶಾಸ್ತ್ರದಂತಹ ಬೃಹತ್ ವಿಶ್ವಕೋಶವನ್ನು ಏಕಕಾಲಕ್ಕೆ ಸಮಗ್ರವಾಗಿ, ಅಂಗೈಯಗಲಕ್ಕೆ ತಕ್ಕಂತೆ ನೀಡಿದ ಲೇಖಿಕೆ ಮತ್ತು ಪ್ರಕಾಶನ ಅಭಿನಂದನಾರ್ಹರು. ಪುಸ್ತಕಗಳಿಗೆ ಶ್ರೀ ಭಾರತೀ ಪ್ರಕಾಶನದ ಅನೂರಾಧಾ ಪಾರ್ವತೀ ಬೆಂಗಳೂರು (ಮೊಬೈಲ್: 9880455776) ಇವರನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ; www.noopurabhramari.com ; http://hareraama.in

## ನಿಮ್ಮ ಬರಹ ನಮ್ಮ ಓದು...

ಏಳನೇ ವಾರ್ಷಿಕ ಸಂಭ್ರಮದ ಪ್ರತೀಕವಾಗಿ ವಿನ್ಯಾಸಗೊಂಡ 8ನೇ ಸಂಪುಟದ 2ನೇ ಸಂಚಿಕೆಯು ಹೊಸತಾಗಿ ಮೂಡಿಬಂದಿದೆ. ಇಂಗ್ಲೀಷಿನ ಅಂಕಣಗಳಿದ್ದರೂ ಕನ್ನಡ ಭಾಷೆಗೆ ಯಾವುದೇ ಲೋಪವಾಗದಂತೆ ತೃಪ್ತಿಕರವಾಗಿ ವಿಷಯುಗಳು ಅಡಕಗೊಂಡಿದೆ. ನೃತ್ಯಸಂಶೋಧನ ಸಮ್ಮೇಳನದ ಸಮಸ್ತ ಭಾಗಿಗಳಾದ ವಿದ್ವತ್ ಮುತ್ಸದ್ದಿಗಳ ಅಭಿಪ್ರಾಯ ಅನಿಸಿಕೆಗಳು ಚಿಂತನ ಮಂಥನಕ್ಕೆ ಅಡಿಗಲ್ಲಿಟ್ಟಂತೆ ಅನಿಸಿತು.

ನುಡಿನಮನವಾಗಿ ಮೂಡಿಬಂದ ನುಡಿಬೆಡಗಿನ ನಿಕಷವನ್ನಿತ್ತ 'ಚೆನ್ನ'–ಮೌನದಲ್ಲಿ ಲೀನ ಎಂದೆಂಬ ಮೇಲ್ಬರಹದಲ್ಲಿ ಸಚಿತ್ರವಾಗಿ ನಿರೂಪಿಸಲ್ಪಟ್ಟ ಯಕ್ಷಗಾನದ ಹಿರಿಯ ಧೀಮಂತ ಕಲಾವಿದ ಸಿದ್ಧಕಟ್ಟೆ ಚೆನ್ನಪ್ಪ ಶೆಟ್ಟರ ಬಗೆಗಿನ ಬರೆಹ ಓದಿ ಕಣ್ಣಾಲಿಗಳು ತೇವಗೊಂಡವು.

ಅದರಂತೆ ಸಂಪುಟ 8ರ ಒಂದನೇ ಸಂಚಿಕೆ ಎಂದಿನಂತೆ ವಂದನಾ ಸ್ವೀಕಾರ ಪಡೆದುಕೊಳ್ಳುವಲ್ಲಿ ತಡವರಿಸಲಿಲ್ಲ. ಮಂಜೀರದಲ್ಲಿ ನೃತ್ಯಪರಂಪರೆಯ ಪೋಷಕತ್ತ್ವದ ವಿಚಾರ, ರಾಜಾಶ್ರಯ ಹಾಗೂ ದೇವಾಲಯಗಳ ಸಂಬಂಧದ ಕುರಿತಾಗಿ ಸಾಕಷ್ಟು ಅನ್ನಿಸದಿದ್ದರೂ ಬೇಕಷ್ಟು ವಿವರಣೆ ನೀಡಿ ಇನ್ನಷ್ಟೂ ಇದ್ದರೆ ಚೆನ್ನಾಗಿತ್ತು ಅನ್ನುವಂತೆ ಮಾಡಿದ್ದಾರೆ. ಕೊಡಗಿನ ಬೆಡಗಿಯಾಗಿ 8ನೇವರ್ಷದಲ್ಲಿ ಮುನ್ನಡೆಯುತ್ತಿರುವ ನೂಪುರ ಭ್ರಮರಿ ಎಂಬ ಕಿಶೋರಿಯ ಹಿರಿಮೆ ನಾಡಿನಾದ್ಯಂತ ಮುನ್ನಡೆಯುತ್ತಿರಲಿ.

**– ಕೀರಿಕ್ಕಾಡು ವನಮಾಲಾ ಕೇಶವ ಭಟ್ಟ, 'ಬನಾರಿ'ಯಕ್ಷಗಾನ ಸಂಘ, ಕಾಸರಗೋಡು.**

## ಹಸ್ತ ಮಯೂರಿ

**(ಸಂಪಾದಕಿ ಮನೋರಮಾ ಬಿ.ಎನ್ ಅವರ ಹಸ್ತಮುದ್ರೆಗಳ ಕುರಿತ ಸಂಶೋಧನ ಗ್ರಂಥ 'ಮುದ್ರಾರ್ಣವ'ದಿಂದಾಯ್ದ ಸರಣಿ ಅಧ್ಯಯನಲೇಖನ)**



**ಲಕ್ಷಣ:** ಚಕ್ರ ಹಸ್ತದ ಹೆಬ್ಬೆರಳು ಮತ್ತು ಕಿರುಬೆರಳನ್ನು ಬಿಟ್ಟು ಉಳಿದ ಬೆರಳುಗಳನ್ನು ಮಡಿಸಿದರೆ ಕೂರ್ಮ ಹಸ್ತ. ಅಂದರೆ ಅಂಗೈಯನ್ನು ಪರಸ್ಪರ ಲಂಬವಾಗಿಯೂ ಅಡ್ಡವಾಗಿಯೂ ಸೇರಿಸಿ ಮುಚ್ಚಿ ಹೆಬ್ಬೆರಳು ಮತ್ತು ಕಿರುಬೆರಳನ್ನು ಬಿಟ್ಟು ಉಳಿದ ಬೆರಳುಗಳನ್ನು ಮಡಿಸಬೇಕು.

**ವಿನಿಯೋಗ :** ಆಮೆ, ವಿಷ್ಣುವಿನ ಕೂರ್ಮಾವತಾರ.

### ಕೂರ್ಮಹಸ್ತ

ನಂದಿಕೇಶ್ವರನ ಅಭಿನಯದರ್ಪಣದ ಪ್ರಕಾರ ಇದನ್ನು ನೃತ್ತ ಹಸ್ತ ಎಂದು ಹೆಸರಿಸಲಾಗಿದೆಯಾದರೂ ಯಾವ ರೀತಿಯಲ್ಲಿ ಇದನ್ನು ನೃತ್ತಾದಿ ಸಂದರ್ಭಗಳಲ್ಲಿ ಬಳಸುವ ಹಸ್ತವಾಗಿಸಬಹುದು ಎಂಬುದಕ್ಕೆ ಪೂರಕವಾದ ಮಾಹಿತಿಗಳು ಲಭ್ಯವಿಲ್ಲ. ದಶಾವತಾರ ಹಸ್ತಗಳಲ್ಲಿ ಒಂದಾದ ಕೂರ್ಮಾವತಾರ ಹಸ್ತಕ್ಕೆ ಇದೇ ಲಕ್ಷಣವನ್ನು ಹೇಳಲಾಗಿದ್ದು; ಕೂರ್ಮಹಸ್ತವನ್ನು ಮುಖದ ಮುಂದೆ ಹಿಡಿದು, ಅನಂತರ ಭುಜದ ಬಳಿ ತ್ರಿಪತಾಕ ಹಸ್ತಗಳನ್ನು ಹಿಡಿಯಬೇಕೆನ್ನುತ್ತದೆ ಅಭಿನಯದರ್ಪಣ.

ಇನ್ನು ಗಾಯತ್ರಿ ನ್ಯಾಸ ಮುದ್ರೆಗಳ ಪೈಕಿ ಕೂರ್ಮ ಮುದ್ರೆ ಮತ್ತು ಪೂಜಾ ಮುದ್ರೆಗಳಲ್ಲಿ ಕೂರ್ಮಕಾಲಾಗ್ನಿ ಮುದ್ರೆಯೆಂಬ ಪ್ರಕಾರಗಳಿದ್ದರೂ ಅದಕ್ಕೂ ಈ ಹಸ್ತಕ್ಕೂ ಹೆಸರಿನ ಸಾಮ್ಯತೆಯನ್ನುಳಿದು ಬೇರಾವ ಸಂಬಂಧವೂ ಕಂಡುಬಂದಿಲ್ಲ. ಹಸ್ತ ಮುಕ್ತಾವಳಿಯಂತಹ ಗ್ರಂಥಗಳಲ್ಲಿ ಅಂಜಲಿಹಸ್ತವನ್ನು ಅಳ್ಳಕ ಮಾಡಿ ಹಿಡಿಯುವಂತಹ ಕಪೋತಹಸ್ತವನ್ನು ಕೂರ್ಮಹಸ್ತವೆಂದೂ ಕರೆಯಲಾಗಿದೆ. ಈ ಹಸ್ತವನ್ನು ಸಂಗೀತ ರತ್ನಾಕರದಲ್ಲಿ ಹಸ್ತಕೂರ್ಮಕವೆಂಬ ಹೆಸರಿನಿಂದ ಕರೆಯಲಾಗಿದೆ.

## ಲಲಿತ ಲಹರಿ

# ನಾಟ್ಯಶಾಸ್ತ್ರ ಕಥನ ಮಾಲಿಕೆ

*– ಕಾವ್ಯ/ಸಾಹಿತ್ಯ–ಸಂಯೋಜನೆ : ಮನೋರಮಾ ಬಿ.ಎನ್*

*– ಸಂಸ್ಕೃತ ಶ್ಲೋಕಗಳು : ನಾಟ್ಯಶಾಸ್ತ್ರ (ಭರತಮುನಿ)*

**ಭರತಮುನಿ– ಸಮಗ್ರವಿಶ್ವಕಾವ್ಯಮೀಮಾಂಸೆಗೆ ಚೂಡಾಮಣಿಯಂತಿರುವ ನಾಟ್ಯಶಾಸ್ತ್ರದ ರಚನಕಾರ. ಅಲಂಕಾರಶಾಸ್ತ್ರದ ಐತಿಹಾಸಿಕ ವಿಕಾಸಕ್ಕೆ ತಾಯಿಬೇರಾದ ಪುಣ್ಯಪುರುಷ. ಸೌಂದರ್ಯಮೀಮಾಂಸೆಗಳಿಗೆ ಆರ್ಷಮೂಲದ ಜೀವಸ್ರೋತಸ್ಸು. ಭಾರತೀಯ ಸೌಂದರ್ಯಶಾಸ್ತ್ರಸೌಧದ ಸ್ವರ್ಣಶಿಖರದಂತಿರುವ ರಸತತ್ತ್ವವನ್ನು ಧಾರೆಯೆರೆದ ಕಾರಣಪುರುಷ. ನಾಟ್ಯಮಂಡಪದ ಆದ್ಯ ಪ್ರವರ್ತಕ. ಭಾರತದೇಶವಷ್ಟೇ ಅಲ್ಲ, ಅಖಂಡ ಭೂಮಂಡಲದ ಸಾಂಸ್ಕೃತಿಕ, ಸಾಹಿತ್ಯಜೀವಿಗಳ ಪಿತಾಮಹ. ಬೇರೆ ಬೇರೆ ಕಾಲ, ದೇಶಕ್ಕೆ ತಕ್ಕಂತೆ ಸಾರ್ವಕಾಲಿಕವಾಗಿ ಕಲೆಯ ವಿಶಿಷ್ಟ ಮಾದರಿಗಳನ್ನು, ಸಾಧ್ಯತೆಗಳನ್ನು ಕಟ್ಟಿಕೊಟ್ಟ ಭರತರ್ಷಿ ಯತಾರ್ಥದಲ್ಲಿಯೂ ಕಲಾಸರಸ್ವತಿಯ ರಾಯಭಾರಿ. ಆತನ ವ್ಯಕ್ತಿತ್ವ, ಸೂತ್ರ, ಕರ್ತೃತ್ವ ಎಲ್ಲವೂ ಬಗೆದದ್ದು ತಾರೆ ಉಳಿದದ್ದು ಆಕಾಶ ಎಂಬ ಮಾತಿಗೆ ಅನ್ವರ್ಥ.**



**ಆದ್ದರಿಂದಲೇ ಭರತಮುನಿಯಿಂದ ಬರೆಯಲ್ಪಟ್ಟ ನಾಟ್ಯಶಾಸ್ತ್ರ ಭರತಸೂತ್ರವೆಂಬುದಾಗಿಯೂ ಪ್ರಚಲಿತ. ಕಲಾವಿಶ್ವಕೋಶ, ಸಂಸ್ಕೃತಿಸರ್ವಸ್ವಸಂಗ್ರಹವಾಗಿ, ಎಲ್ಲ ಕಾಲಕ್ಕೂ ಸಲ್ಲುವ ತತ್ವ–ಪ್ರಯೋಗನಿಧಿಯಾಗಿ, ಸಮಗ್ರ ದರ್ಶನಸಿದ್ಧಾಂತದ ಪ್ರತಿರೂಪವಾಗಿ ನಾಟ್ಯಶಾಸ್ತ್ರವು ಸರ್ವಕಾಲಕ್ಕೂ ಆದರಣೀಯ. ಭಾರತೀಯ ಸಂಸ್ಕೃತಿಯ ಸಮಗ್ರತೆಗೆ ಸಂಬಂಧಿಸಿದಂತೆ ನಾಟ್ಯಶಾಸ್ತ್ರದ ಮೌಲ್ಯ ಮಹೋನ್ನತವಾದದ್ದು. ನಾಟ್ಯದ ಉತ್ಪತ್ತಿ, ಪ್ರಯೋಗ, ಅಂಗಗಳು ಮೊದಲಾದವನ್ನು ಕುರಿತು ಹೇಳದೇ ಉಳಿದ ವಿಷಯವೆಂಬುದು ಯಾವುದೂ ಅದರಲ್ಲಿಲ್ಲ. ನಾಟ್ಯಪ್ರಪಂಚವಷ್ಟೇ ಅಲ್ಲ, ಕಾವ್ಯಮೀಮಾಂಸೆ, ಅಲಂಕಾರಶಾಸ್ತ್ರದ ಪ್ರಥಮ ಕುಸುಮಗಳು ಕುಡಿಯೊಡೆದದ್ದು ಭರತನ ಬೊಗಸೆಯಲ್ಲಿ. ಹಾಗಾಗಿ ಕಾವ್ಯಲಕ್ಷಣಕಾರರಿಗೆಲ್ಲಾ ಭರತನೇ ಪ್ರಥಮಗುರುವಾಗಿ ವಂದ್ಯನಾಗಿದ್ದಾನೆ.**

**ಪ್ರಸ್ತುತ ಈ ನಾಟ್ಯಶಾಸ್ತ್ರಕಥನಮಾಲಿಕೆಯು 36 ಅಧ್ಯಾಯದ ಪರ್ಯಂತ ಹಬ್ಬಿರುವ ನಾಟ್ಯಶಾಸ್ತ್ರದೊಳಗೆ ಬರುವಂತಹ ಭಾರತೀಯ ಸಂಸ್ಕೃತಿಯ, ನಾಟ್ಯಕಲೆಯ ಕುರಿತಾದ ಆಕರ್ಷಕ ಕಥೆಗಳನ್ನು ಪ್ರತೀ ಸಂಚಿಕೆಗೆ ನಿಮ್ಮ ಮುಂದೆ ಅನಾವರಣಗೊಳಿಸುತ್ತಾ ಸಾಗಲಿದೆ. ಅದಕ್ಕೆ ಪೂರಕವಾಗಿ ಪುತ್ತೂರಿನಲ್ಲಿ ನಡೆದ 'ನಾಟ್ಯಚಿಂತನ' ಕಾರ್ಯಾಗಾರದ ಸಮಯದಲ್ಲಿ ಬರೆಯಲಾದ ನಾಟ್ಯಶಾಸ್ತ್ರಕಥೆಗಳ ಕಾವ್ಯಮಾಲಿಕೆ ಮತ್ತು ಕಥೆಯ ಅಧ್ಯಾಯದ ಸಂಕ್ಷಿಪ್ತ ವಿವರವನ್ನು 'ಮಹಾಮುನಿ ಭರತ' ಎಂಬ ಕೃತಿಯಿಂದ ಆಯ್ದು ಪ್ರಕಟಿಸಲಾಗುತ್ತದೆ. ಇದು ಆಸಕ್ತ ಕಲಾವಿದರಿಗೆ, ನೃತ್ಯಸಂಯೋಜನೆಯ ಪ್ರತಿಭೆಯನ್ನಿಟ್ಟುಕೊಂಡು ಸಾಹಿತ್ಯಕ್ಕಾಗಿ ಅರಸುತ್ತಿರುವ ಗುರು–ಶಿಕ್ಷಕರಿಗೆ, ವಿದ್ಯಾರ್ಥಿಮಿತ್ರರಿಗೆ, ಚಿಣ್ಣರ ಕುತೂಹಲದ ಕಥಾಪ್ರಪಂಚಕ್ಕೆ, ಕಲಾಪ್ರೇಮಿಗಳಾದ ಸಹೃದಯ ಓದುಗರಿಗೆ ಒಳ್ಳೆಯ ರಸಾಹಾರವನ್ನು ಕೊಡಲಿದೆ ಎಂಬುದು ನಮ್ಮ ಅಭೀಪ್ಸೆ. ನಮ್ಮ ಆಶಯಕ್ಕೆ ತಾವೂ ಇಂಬುಕೊಡುತ್ತೀರಲ್ವಾ? –ಸಂ.**

## ಪ್ರಥಮ ಅಧ್ಯಾಯ– ನಾಟ್ಯಶಾಸ್ತ್ರೋತ್ಪತ್ತಿ

ನಾಟ್ಯಕ್ಕೇ ಪಿತಾಮಹನಾದ ಮಹೇಶ್ವರರಿಗೆ ವಂದಿಸುತ್ತಾ ಬ್ರಹ್ಮಕೃತವಾದ/ ಬ್ರಹ್ಮನಿಂದ ಕೊಡಲ್ಪಟ್ಟ ನಾಟ್ಯಶಾಸ್ತ್ರವನ್ನು ಹೇಳತೊಡಗುತ್ತೇನೆ – ಎಂಬಲ್ಲಿಗೆ ಮೊದಲ ಪುಟ ತೆರೆಯುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ನಾಟ್ಯಶಾಸ್ತ್ರವನ್ನು ಪ್ರಥಮತಃ ಬರೆದವನು ಸದಾಶಿವನೆಂದೂ, ಆನಂತರ ಬ್ರಹ್ಮನೆಂದೂ, ಆ ಬಳಿಕ ಭರತನೆಂದೂ ನಾಟ್ಯಶಾಸ್ತ್ರಕ್ಕೆ ವ್ಯಾಖ್ಯಾನ ಬರೆದ ಅಭಿನವಗುಪ್ತಪಾದಾಚಾರ್ಯ ಹೇಳಿದ್ದಾನೆ. ಆದ್ದರಿಂದ ನಾಂದಿಶ್ಲೋಕದಲ್ಲಿ ಭರತನೇ ಅಭಿವಂದಿಸಿ ಸ್ಮರಿಸಿಕೊಂಡಿರುವ ಮಹೇಶ್ವರ, ಬ್ರಹ್ಮರು ನಾಟ್ಯಕ್ಕೆ ಕಾರಣಪುರುಷರು ಎಂಬುದನ್ನು ಮುಖ್ಯವಾಗಿ ಕಂಡುಕೊಳ್ಳಬಹುದು.

ನಾಂದಿಶ್ಲೋಕದ ಬಳಿಕ, ಆತ್ರೇಯ ಮೊದಲಾದ ಋಷಿಗಳು ಭರತನಲ್ಲಿಗೆ ಬಂದು ಜಿಜ್ಞಾಸಾರ್ಥವಾಗಿ ನಾಟ್ಯವೇದದ ಉತ್ಪತ್ತಿ, ಅಂಗ, ಪ್ರಯೋಗ, ಲಕ್ಷಣದ ಕುರಿತಾಗಿ ಪ್ರಶ್ನೆ ಕೇಳುವುದರಿಂದ ನಾಟ್ಯಸಾಸ್ತ್ರದ ಮೊದಲನೇ ಅಧ್ಯಾಯ– 'ನಾಟ್ಯಶಾಸ್ತ್ರೋತ್ಪತ್ತಿ' ಆರಂಭವಾಗುತ್ತದೆ.

***ಪೂರ್ವಂ ಕೃತಯುಗೇ ವಿಪ್ರಾಃ ವೃತ್ತೇ ಸ್ವಾಯಂಭುವೇಂತರೇ***
***ತ್ರೇತಾಯುಗೇಥ ಸಂಪ್ರಾಪ್ತೇ ಮನೋರ್ವೈವಸ್ವತಸ್ಯ ಚ...***

ಪೂರ್ವದಲ್ಲಿ ಸ್ವಾಯಂಭುವ ಮನ್ವಂತರದಲ್ಲಿ ಕೃತಯುಗ ಮುಗಿದು ವೈವಸ್ವತ ಮನ್ವಂತರದ ತ್ರೇತಾಯುಗ ಪ್ರಾರಂಭವಾಗುವ ಮಧ್ಯಂತರದಲ್ಲಿ... ಲೋಕದಲ್ಲಿ ಗ್ರಾಮ್ಯದಾರುಣರೀತಿಗಳು (ಕೆಟ್ಟಪ್ರವೃತ್ತಿಗಳು) ತಲೆದೋರಿ, ವೇದಾದಿಗಳನ್ನೂ ಅಧ್ಯಯನ ಮಾಡುವ ಅನುಕೂಲ ಎಲ್ಲರಿಗೂ ದೊರಕದೆಹೋದಾಗ ಇಂದ್ರನನ್ನು ಮುಂದಿರಿಸಿ ಲೋಕದ ಸಮಸ್ತರೂ ಬ್ರಹ್ಮನಲ್ಲಿ ಹೋಗಿ ಐದನೇಯ ವೇದ ನಿರ್ಮಾಣಕ್ಕೆ ನಿವೇದನೆಯನ್ನು ಇಡುತ್ತಾರೆ. ಎಲ್ಲ ವರ್ಗದವರಿಗೂ ತಲುಪುವಂತೆ ***ಕ್ರೀಡನೀಯಕಮಿಚ್ಛಾಮೋ ದೃಶ್ಯಂ ಶ್ರವ್ಯಂ ಚ ಯದ್ಭವೇತ್–*** ಕ್ರೀಡೆಯಂದದಿ ಶ್ರವ್ಯ,ದೃಶ್ಯಗಳಿಂದೊಡಗೂಡಿ ವಿನೋದ/ರಂಜನೆಯನ್ನು ಕೊಡುವ ಐದನೇಯ ವೇದ ರಚಿಸಬೇಕು ಎಂಬುದು  ಇಂದ್ರಾದಿ ದೇವ, ದಾನವ, ಋಷಿಜನರ ಪ್ರಾರ್ಥನೆ.

ಅದಕ್ಕೆ ಬ್ರಹ್ಮನು ಯೋಗಸ್ಥನಾಗಿ ನಾಲ್ಕುವೇದಗಳನ್ನು ನೆನೆದು ಋಗ್ವೇದದಿಂದ ಪಠ್ಯವನ್ನೂ, ಯಜುರ್ವೇದದಿಂದ ಅಭಿನಯವನ್ನೂ, ಸಾಮವೇದದಿಂದ ಗೀತವನ್ನೂ, ಅಥರ್ವವೇದದಿಂದ ರಸವನ್ನೂ ಆರಿಸಿ, ಉಪವೇದಗಳ ಸಹಿತ ನಾಟ್ಯವೇದದ ಉತ್ಪತ್ತಿಯನ್ನು ಮಾಡುತ್ತಾನೆ. ಈ ಸಂದರ್ಭದಲ್ಲಿ ಬ್ರಹ್ಮನ ಮಾತುಗಳು ಗಮನಾರ್ಹವಾಗಿವೆ.

***ಧರ್ಮ್ಯಮರ್ತ್ಯ ಯಶಸ್ಯಂಚ ಸೋಪದೇಶಂ ಸಸಂಗ್ರಹಮ್***
***ಭವಿಷ್ಯತಶ್ಚ ಲೋಕಸ್ಯ ಸರ್ವಕರ್ಮಾನುದರ್ಶಕಮ್***
***ಸರ್ವಶಾಸ್ತ್ರಾರ್ಥಸಂಪನ್ನಂ ಸರ್ವಶಿಲ್ಪಪ್ರದರ್ಶಕಮ್***
***ನಾಟ್ಯಾಖ್ಯಂ ಪಂಚಮಂ ವೇದಂ ಸೇತಿಹಾಸಂ ಕರೋಮ್ಯಹಮ್***

ಧರ್ಮ–ಅರ್ಥ–ಯಶಸ್ಸುಗಳಿಗೆ ಸಹಾಯಕವಾಗಲ್ಲ, ಉಪದೇಶವನ್ನು ಒಳಗೊಂಡ, ಭವಿಷ್ಯದ ಆಗುಹೋಗುಗಳನ್ನು ಲೋಕಕ್ಕೆ ಸೂಚಿಸಬಲ್ಲ, ಸರ್ವಕರ್ಮಗಳನ್ನು ಪ್ರತಿನಿಧಿಸುವ, ಎಲ್ಲ ಶಾಸ್ತ್ರಾರ್ಥಗಳನ್ನು ಒಳಗೊಂಡ, ಎಲ್ಲ ಶಿಲ್ಪಗಳಿಂದಲೂ ಪೋಷಿತವಾಗುವಂತಹ ನಾಟ್ಯವೆಂಬ ಐದನೇಯ ವೇದವನ್ನು ಇತಿಹಾಸ(ವಿವರ)ಸಹಿತವಾಗಿ ರಚಿಸುವೆ.

ಹೀಗೆ ಕ್ರೀಡನೀಯಕವಾಗಿ ಮನೋವಿನೋದ ಸಾಧನವೇ ನಾಟ್ಯ. ಇದು ದೃಶ್ಯವೇ ಆಗಿರಲಿ, ಶ್ರವ್ಯವೇ ಆಗಿರಲಿ, ಕಾವ್ಯ, ನಾಟಕ, ನೃತ್ಯ, ಗೀತಗಳಷ್ಟೇ ಅಲ್ಲದೆ ಇಂದಿನ ಕಾಲದ ಚಲನಚಿತ್ರ ಮುಂತಾದ ಲಲಿತಕಲೆಗಳೇ ಆಗಿರಲಿ; ಒಟ್ಟಿನಲ್ಲಿ ನಾಟ್ಯವೆಂಬ ಸಮಗ್ರ ಅರ್ಥದ ನೆಲೆಯ ರಂಗಭೂಮಿಯು ಮಾನವನ

ನಡೆನುಡಿಗಳನ್ನು ತನ್ನ ಕಾಂತಾಸಮ್ಮಿತ ವಿಧಾನದಿಂದ ತಿದ್ದಿ ತೀಡಿ ಅರಿಷಡ್ವರ್ಗಗಳಿಗೆ ಸಾಂತ್ವನ ಹೇಳಿ, ಭವಿಷ್ಯದ ಆಗುಹೋಗುಗಳನ್ನು ಲೋಕಕ್ಕೆ ಸೂಚಿಸಿ, ಪುರುಷಾರ್ಥದಾಯಕವಾಗಿ ಮಾನವನ ಜೀವನವನ್ನು ಆನಂದ–ದರ್ಶನದ ಕಡೆಗೆ ಒಯ್ದು ಸತ್ತ್ವಶಾಲಿಯಾಗಿಸುವ ನಿಟ್ಟಿನಲ್ಲಿ ಉದ್ಯುಕ್ತವಾಗಿದೆ. ಎಲ್ಲ ಶಾಸ್ತ್ರಾರ್ಥಗಳನ್ನೂ ಒಳಗೊಂಡು ಎಲ್ಲ ಶಿಲ್ಪಗಳಿಂದಲೂ ಪೋಷಿತವಾಗುವಂತಹ ನಾಟ್ಯವೇದವು ಮಾನವಜೀವನದ ಸರ್ವಾಂಗೀಣ ಅಭಿವೃದ್ಧಿಯ ಕಲ್ಪನೆಯನ್ನು ಸಾಕಾರಗೊಳಿಸಿದೆ.

ಭರತನು ಹೇಳಿದ ನಾಟ್ಯವೇದದ ಹುಟ್ಟಿನ ಕತೆಯ ಕಾಲಮಾನವು ಇಂದಿನ ಶತಮಾನಗಳ ಇತಿಹಾಸತಜ್ಞರು ಕೊಡುವ ಆಧುನಿಕ ಕ್ಯಾಲೆಂಡರ್‌ನ ಸಮಯಕ್ಕೆ ತಾಳೆಯಾಗುವುದಿಲ್ಲ. ಇಲ್ಲಿಯೇ ಇಂದಿನ ನಾಟ್ಯಶಾಸ್ತ್ರದ ಸ್ವರೂಪವೂ ಅಂದಿನ ನಾಟ್ಯವೇದವೂ ಒಂದೆಯೇ ಎಂಬ ಜಿಜ್ಞಾಸೆ ಆರಂಭಗೊಂಡು ಭರತಯಾರು, ಎಲ್ಲಿಯವನು, ಯಾವ ಕಾಲದವನು ಎಂಬಿತ್ಯಾದಿ ಸರಣಿ ಪ್ರಶ್ನೆಗಳನ್ನು ಆಹ್ವಾನಿಸುತ್ತಾ ಸಾಕಷ್ಟು ವರುಷಗಳಿಂದ ತರ್ಕ, ವಾದಗಳನ್ನು ಬೆಳೆಸುತ್ತಲೇ ಇದೆ.

ಬ್ರಹ್ಮನು ನಾಟ್ಯವೇದವನ್ನು ಸೃಷ್ಟಿಸಿದ ತರುವಾಯ ಅದನ್ನು ಕುಶಲರಾದ, ಜಾಣರಾದ, ಚಾಣಾಕ್ಷರೂ, ಪರಿಶ್ರಮ ವಹಿಸಬಲ್ಲ ದೇವತೆಗಳನ್ನು ಆರಿಸಿ ಅವರಿಂದ ನಾಟ್ಯಪ್ರಯೋಗಿಸಬೇಕು ಎಂದು ಆಜ್ಞೆ ಮಾಡಿದ ಹಂತದಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಯಾವುದೇ ಜ್ಞಾನರಾಶಿಯಾದರೂ ಅದರೊಳಗಿನ ವಿಷಯ–ವಿಚಾರ–ಪ್ರಮೇಯಗಳು ಪ್ರಯೋಗಿಸಲ್ಪಟ್ಟಾಗಲೇ ಅದಕ್ಕೆ ಸೂಕ್ತ ಸ್ಥಾನಮಾನ. ಅದರಲ್ಲೂ ನಾಟ್ಯವು ಮೂಲತಃ ಪ್ರಯೋಗಶೀಲವಾಗಿರುವುದರಿಂದ ಯಾವುದೇ ಶೋಧನೆ, ಅಧ್ಯಯನಗಳು ಪ್ರಯೋಗಕ್ಕೆ ನೇರವಾಗಿ ಅಥವಾ ಆಂಶಿಕವಾಗಿ ಸಂಬಂಧಪಡದ ಹೊರತು ಅಂತಹ ವಿಚಾರಗಳು ಅಲ್ಪಾಯುಷಿಗಳಾಗಿ ಜಡತ್ತ್ವವನ್ನು ಪಡೆಯುತ್ತವೆ.

ಬ್ರಹ್ಮನ ಆಜ್ಞೆಗೆ ಇಂದ್ರನಾಡುವ ಮಾತು ಕೂಡಾ ಬಹಳ ಅರ್ಥಪೂರ್ಣವಾಗಿದೆ– 'ಈ ವೇದವನ್ನು ಓದಿ ಅರಗಿಸಿಕೊಳ್ಳಲು, ಅರಿತುಕೊಂಡು ಪ್ರಯೋಗಿಸಲು, ಒಟ್ಟಾರೆ ನಾಟ್ಯವನ್ನು ನಡೆಸಲು ದೇವತೆಗಳು ಅಸಮರ್ಥರಾಗಿದ್ದಾರೆ. ಆದುದರಿಂದ ವೇದಗಳ ರಹಸ್ಯವನ್ನು ಅರಿತ, ತೀಕ್ಷ್ಣ ವ್ರತ ನಿಯಮಗಳಲ್ಲಿ ನಿರತರಾದ ಮುನಿಗಳಿಗೆ ಹೇಳಬೇಕು. ಅವರು ಇದನ್ನು ಅರಿತುಕೊಂಡು ಪ್ರಯೋಗಿಸಲು ಸಮರ್ಥರು'. ಅಂದರೆ ಮುನಿಗಳು ಸಂಸಾರಿಗಳಾಗಿರಲಿ, ಸನ್ಯಾಸಿಗಳಾಗಿರಲಿ ವಿದ್ಯೆಯನ್ನು ಲೋಕೋಪಕಾರಕ್ಕಾಗಿ ಬಳಸುವ ಶ್ರಮ, ಶಕ್ತಿಯುಳ್ಳವರು. ದೀಕ್ಷಾಬದ್ಧರಾಗಿ ಸರ್ವಲೋಕಹಿತ, ಸರ್ವಜನಸುಖದ ಧ್ಯೇಯದೃಷ್ಟಿಯಲ್ಲಿ ನಡೆಯುಳ್ಳವರು. ಅವರಿಂದ ದತ್ತವಾಗುವ ಉಪಕ್ರಮ, ವ್ಯವಸ್ಥೆಗೆ ಹೆಚ್ಚು ಬೆಲೆ, ಪಾವಿತ್ರ್ಯವಿದ್ದು ಪಾಲಿಸ ಲಾಗುತ್ತದೆ. ಭಾರತೀಯರ ಜನನ–ಮರಣಗಳ ಪರಿಕ್ರಮ–ಪರಂಪರೆಗಳುದ್ದಕ್ಕೂ ಇರುವ ಗೋತ್ರ ಪರಂಪರೆ ಮುನಿಮಹೋತ್ತಮರದ್ದೇ ಆಗಿದೆ ಎಂಬಲ್ಲಿಗೆ ನಮ್ಮ ಪ್ರಾಚೀನರು ಯಾರು ಎಂಬುದೂ ವೇದ್ಯ. ಜೀವನದ ಎಲ್ಲ ಅನುಭವ, ಅನುಭಾವಗಳನ್ನು ಅರಿತು, ಅನುಭವಿಸಿ ಸಂಯಮಿಗಳಾಗಿ ವಿದ್ಯೆ ಅಥವಾ ವ್ಯವಸ್ಥೆಗೆ ಸ್ಪಷ್ಟಶಿಸ್ತಿನ ರೂಪನ್ನು ಕೊಟ್ಟು ಮುನ್ನಡೆಸಲು ಬೇಕಾದ ಎಲ್ಲ ಅರ್ಹತೆಗಳೂ ಅವರಲ್ಲಿದ್ದವು ಎಂಬುದಕ್ಕೆ ಭಾರತೀಯ ಸನಾತನ ಪರಂಪರೆಯಲ್ಲಿ ಆಗಿಹೋದ ಮುನಿಮಹೋತ್ತಮರ ಜೀವನಗಾಥೆಗಳೇ ನಿದರ್ಶನ.

ಅಷ್ಟಕ್ಕೂ ಮುನಿಗಳೆಂದ ಮಾತ್ರಕ್ಕೆ ಸರ್ವಸಂಗಪರಿತ್ಯಾಗಿಗಳಂತೆಯೋ, ಬೈರಾಗಿಗಳಂತೆಯೋ ಬದುಕಬೇಕೆಂದೇನೂ ಇಲ್ಲ. ಇಂದಿನಕಾಲಕ್ಕೆ ರೂಢಿಗತವಾದ ಹಿಮಾಲಯವಾಸಿಗಳು, ಸಮಾಜ ನಿಸ್ಸಂಗತ್ತ್ವರು, ಜಟಾಧರಿಗಳಾಗಿ ಗಡ್ಡ ಬಿಟ್ಟು ಮೂಗು ಮುಚ್ಚಿ ಕುಳಿತುಕೊಳ್ಳುವವರು ಎಂಬ ಪರಿಕಲ್ಪನೆಯಲ್ಲೇ ಅವರನ್ನು ಕಾಣಬೇಕಾದ ಅಗತ್ಯವೇನೂ ಇಲ್ಲ. ಲೋಕದೊಳಗಿದ್ದೂ ಲೋಕದ ಜಡತೆಯಿಂದ ಹೊರಗುಳಿದು ಲೋಕದ ಆಗುಹೋಗುಗಳ ಬಗ್ಗೆ ಸದಾ ಕ್ರಿಯಾಶೀಲರಾಗಿ ಅರಿತು ಬೆರೆತು, ಸ್ಪಂದಿಸುತ್ತಾ, ಲೋಕೋಪಕಾರಕ್ಕೆ ಕಠಿಣ ವ್ರತನಿಯಮಗಳಲ್ಲಿ ತೇಯ್ದುಕೊಂಡು ತನಗಾಗಿ

ಎಂಬಂತೆ ಬಗೆಯದೆ ಚಿರಂತನ ವೇದಾಂತದೆಡೆಗೆ ಉನ್ಮುಖರಾಗಿ ನಡೆಯುವವರು ಋಷಿಗಳು, ಋಷಿಸ್ವರೂಪರು. ಅವರ ತ್ಯಾಗ, ಶಿಸ್ತು, ನಿಸ್ವಾರ್ಥ ಭಾವ ಬದುಕಿನ ಪ್ರತಿಫಲವೇ ನಮ್ಮ ಇಂದಿನ ಹಸನು ಬದುಕು. ಈ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಭರತನೆಂಬ ನಾಟ್ಯಶಾಸ್ತ್ರದ ಪ್ರವರ್ತಕ ಋಷಿಯಾಗಿದ್ದನು ಎಂಬುದರಲ್ಲಿ ಒಂದಿನಿತೂ ಅತಿಶಯವಿಲ್ಲ, ಮೂಲೆಗೊತ್ತಬೇಕಾದ ಮಡಿವಂತಿಕೆಯೂ ಇಲ್ಲ.

ವೇದ ಎಂದರೆ ಜ್ಞಾನ. ಶಾಸ್ತ್ರವೆಂದರೆ ಆ ಜ್ಞಾನವನ್ನು ಒಂದು ಆವರಣಕ್ಕೊಪ್ಪಿಸುವ ವ್ಯವಸ್ಥೆ ಅಥವಾ ಕ್ರಮ. ವೇದ ಸಮಗ್ರವಾಙ್ಮಯವಾದರೆ, ಶಾಸ್ತ್ರವೆನ್ನುವುದು ನಿಯಮ ನೇಮಗಳನ್ನು ಶಿಷ್ಟವಾಗಿ ಹೇಳುವ ಅದರ ವಿಶೇಷ ಶಾಖೆ. ಶಾಸ್ತ್ರವಿರುವುದೇ ನಿಯಮಬದ್ಧವಾದ ವ್ಯವಸ್ಥೆಯನ್ನು ಹೊಂದುವ ಪೂರ್ವಪಾಠವಾಗಿ. ಈ ಹಿನ್ನೆಲೆಯಲ್ಲಿ ನಾಟ್ಯವೇದದಂತಹ ಶ್ರುತಿಸಂಹಿತೆಯನ್ನು ಬ್ರಹ್ಮನಿಂದ ಪಡೆದು ಸ್ಮೃತಿಪೂರ್ವಕ ಲಕ್ಷಣೀಕರಿಸಿದವನು ಋಷಿ/ಮುನಿಯಾಗಿರುವುದರಲ್ಲಿ ಯಾವುದೇ ಸಂಶಯವಿಲ್ಲ. ಆದ್ದರಿಂದಲೇ ನಂತರದಲ್ಲಿ ಕಂಡುಬರುವ ಹಲವು ಲಾಕ್ಷಣಿಕರಿಗೆ, ಅಲಂಕಾರಿಕರಿಗೆ ಭರತನೇ ನಾಟ್ಯಶಾಸ್ತ್ರಾಚಾರ್ಯರೂಪದಿಂದ ಸ್ತುತನಾಗಿದ್ದಾನೆ. **('ಮಹಾಮುನಿ ಭರತ' ಕೃತಿಯ ಆಯ್ದಭಾಗಗಳು)**

• • • • • • • • • • • • • •

**ಪ್ರಸ್ತುತ ಕಾವ್ಯಭಾಗದಲ್ಲಿ ಮುನಿಗಳ ಪ್ರಶ್ನೆ, ಶುಚಿರ್ಭೂತರಾಗಿ ಬಂದ ಋಷಿಗಳಿಗೆ ಭರತ ಕತೆ ಹೇಳಲು ಆರಂಭಿಸುವುದು, ಆ ಪೈಕಿ ಇಂದ್ರಾದಿಗಳ ಬಿನ್ನಹ, ನಾಟ್ಯವೇದದ ಸೃಷ್ಟಿ ಮತ್ತು ಭರತನಿಗೆ ನಾಟ್ಯವೇದವನ್ನಿತ್ತು ಪ್ರಯೋಗದ ಜವಾಬ್ದಾರಿಯನ್ನು ಹೊರಿಸಿದ ತರುವಾಯ, ಭರತನು ತನ್ನ ನೂರುಮಂದಿ ಮಕ್ಕಳಿಗೆ ನಾಟ್ಯವೇದವನ್ನು ಕಲಿಸುತ್ತಾನೆ– ಎಂಬಲ್ಲಿಗೆ ಪ್ರಥಮ ಅಧ್ಯಾಯದ ಮೊದಲ ಕಥಾಭಾಗವು 'ನಾಟ್ಯೋತ್ಪತ್ತಿ' ಎಂಬ ಹೆಸರಿನಲ್ಲಿ ಸಶೇಷವಾಗಿದೆ.**

**** ಆವರಣಚಿಹ್ನೆಯೊಳಗೆ ( ) ಬರೆಯಲಾದ ಸಂಗತಿಗಳು ಗತಿ, ತಾಳ, ಪಾಟಾಕ್ಷರ/ಸ್ವರ–ಶಬ್ದಕಲ್ಪನೆ/ಆಲಾಪನೆ/ವಾದ್ಯಸಾಂಗತ್ಯದ ನಿರ್ದೇಶನಕ್ಕೆ ಇರುವ ಸ್ಥಾನ, ಪಾತ್ರೌಚಿತ್ಯ, ನಿರೂಪಣಾ ನೆಲೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವ ಸಲುವಾಗಿ ಹೇಳಲಾಗಿದೆ. ಇದು ಕಲಾವಿದರಿಗೆ ನೃತ್ಯರೂಪಕದ ಸಂಯೋಜನೆಗೆ ಅಳವಡಿಸಿಕೊಳ್ಳುವುದಾದರೆ ಅನುಕೂಲವಾಗಲಿದೆ. ಇನ್ನು ಭಾವಾಭಿವ್ಯಕ್ತಿಗೆ ಹೊಂದುವ ರಾಗದ ಆಯ್ಕೆ, ಕಲಾವಿದರ ಸಂಖ್ಯೆ ಮತ್ತು ಆಂಗಿಕಾದಿ ಅಭಿನಯಗಳಲ್ಲಿ ಸ್ವಾತಂತ್ರ್ಯವನ್ನು ಕಲಾವಿದರಿಗೇ ಬಿಟ್ಟುಕೊಟ್ಟಿದೆ.**

## ನಾಟ್ಯೋತ್ಪತ್ತಿ

**(ನಾಂದಿಶ್ಲೋಕ)** ಪ್ರಣಮ್ಯ ಶಿರಸಾದೇವೌ ಪಿತಾಮಹಮಹೇಶ್ವರೌ
ನಾಟ್ಯಶಾಸ್ತ್ರಂ ಪ್ರವಕ್ಷ್ಯಾಮಿ ಬ್ರಹ್ಮಣಾ ಯದುದಾಹೃತಂ

**(ನಾಟ್ಯದ ಮಹತ್ತ್ವ ಹೇಳುವುದಕ್ಕಾಗಿ ಸ್ವರಕಲ್ಪನೆ ಬಳಸುವುದು)**

**(ಖಂಡಛಾಪು)** ನಾಟ್ಯವಿದು ಪಂಚಮವೇದವಿದು ಯಜ್ಞವಿದು ನಯನಾಭಿರಮ್ಯವಿದು
ನಟನಾತ್ಮಕೋಶವಿದು ನಟನದ್ವಿವೇಕವಿದು ಪುರುಷಾರ್ಥದಾಯಕವು ಆನಂದದಲೆಯು

**(ಸೂತ್ರಧಾರ ನಿರೂಪಣೆಯಲ್ಲಿ)** ಒಂದು ಅನಧ್ಯಾಯದ ದಿನವು...ಆತ್ರೇಯಾದಿ ಮುನಿಪರಿವಾರವು...
ಭರತನ ಬಳಿಗೆ.. ನಾಟ್ಯದ ಕಡೆಗೆ... ಬಂದರೋ.. ಬಂದರು...


**(ಸಾಕಿ/ಖಂಡಗತಿ) (ಮುನಿಗಳು ಭರತನಲ್ಲಿ ಪ್ರಾರ್ಥಿಸುತ್ತಾ)**

ಪೇಳಲ್ಕೆ ಆಚಾರ್ಯ ವೇದ ರಚಿಸಿದ ಮರ್ಮ
ಅಂಗಪ್ರಮಾಣ ಪ್ರಯೋಗಕಿಹ ಧರ್ಮ
ಕೃಪೆಯ ಮಾಡ್ಕೆ ಭರತ, ಭಾಷ್ಯ ಬೆಳೆಸಿದ ಕರ್ಮ
ಈ ಸನಾತನಸಂಹಿತೆಯು ತಳೆದ ನರ್ಮ

**(ಚತುರಶ್ರ) (ಭರತನ ಮಾತು)**
ಶುಚಿರ್ಭೂತರಾಗಿ ಬನ್ನಿ ನಾಟ್ಯಕಥನಕೆ
ಹ್ಲಾದಮೋದ ಬೋಧದ ನಡೆ ಮೋಕ್ಷದ ಪಥಕೆ

**(ಸ್ವರಕಲ್ಪನೆ)**
**(ಸೂತ್ರಧಾರ ನಿರೂಪಣೆಯಲ್ಲಿ)**
ಸಹೃದಯರೆ...ನಾಟ್ಯವಿಸ್ಮಯದ ಹುಟ್ಟಿನ ಕಥೆಯ... ಆಲಿಸುವಿರಾ..?
ಒಂದಾನೊಂದು ಕಾಲದಲ್ಲಿ..ಜಂಬೂದ್ವೀಪದಲ್ಲಿ...

**(ಖಂಡ)** ಸ್ವಾಯಂಭವದು ಕಳೆದು ವೈವಸ್ವತವು ಬರಲು
ಗ್ರಾಮ್ಯದಾರುಣರೀತಿ ಕ್ರೋಧ ಕಾಮದ ಭೀತಿ **(ಸ್ವರಕಲ್ಪನೆ)**



**(ಬ್ರಹ್ಮನಲ್ಲಿ ಇಂದ್ರಾದಿಗಳೆಲ್ಲರ ಪ್ರಾರ್ಥನೆ)**
ಪಾಹಿಮಾಂ...ಪಾಹಿಮಾಂ... ಪಾಹಿಮಾಂ...ಪಾಹಿ...
ಕ್ರೀಡನೀಯಕ ವೇದವನು ನೀಡು ನಾಲ್ಮೊಗನೆ
ಸುರನರೋರಗ ಯಕ್ಷ ಮನುಜಾದಿಗಳಿಗೆ

**(ಚತುರಶ್ರ) (ಬ್ರಹ್ಮನ ನುಡಿ)**
ಸಂಕಲ್ಪದ ಫಲ ಭವಿತವ್ಯದ ನೆಲ
ಶಾಸ್ತ್ರಾದಿಯ ಬಲ ನಾಟ್ಯದ ಒಲವು
ಶಿಲ್ಪರಸಾಯನ ಅಭಿನಯ ಜೀವನ
ಪಠ್ಯ-ಗೀತ-ರಸ ಅರಿತರೆ ಜಸವು

**(ನಾಟ್ಯವೇದಸೃಷ್ಟಿ)**
ನಾಟ್ಯದ ಪಾಠ್ಯಕೆ ಋಗ್ವೇದದ ಬಲ... **(ಪಾಟಾಕ್ಷರ ಕಲ್ಪನೆ ಬಳಸಬಹುದು)**
ಅಭಿನಯಕಂತೆ ಯಜುರ್ವೇದ **(ಆಲಾಪನೆ)**
ಸಾಮವೇದ ಸಂಗೀತಕೆ ಬೆಂಬಲ **(ಸ್ವರಕಲ್ಪನೆ)**
ರಸನಿಧಿ ಆಥರ್ವಣವೇದ **(ವಾದ್ಯದಲ್ಲಿ ಗತಿವಿನ್ಯಾಸ)**

**(ಇಂದ್ರಸಹಿತ ಎಲ್ಲರೂ ಕೂಡಿಕೊಂಡು)**
ವೇದಹೃದಯ ಕಂಡರಿಸಿದ ಋಷಿಗಳೆ
ಯೋಗ್ಯರು ನಾಟ್ಯಪ್ರಯೋಗಕ್ಕೆ
ನಾಟ್ಯಯೋಗದ ನಿತ್ಯನೇಮಕೆ
ಭಾವಯಾನವು ಬೇಕು ಕಾಯಕೆ
**(ಸ್ವರಕಲ್ಪನೆ ಅಥವಾ ಆಲಾಪನೆ)**

**(ಖಂಡ) (ಬ್ರಹ್ಮ ಭರತನಿಗೆ ಹೇಳುವುದು)**
ಹೇ.. ಭರತ ಪಡೆ ನಾಟ್ಯಯಜ್ಞದೀಕ್ಷೆಯನು
ಸುಪ್ರಯೋಗದಿ ಶಾಸ್ತ್ರಗಂಧ ಕಾಣಿಪುದು
ನೂರುಮಕ್ಕಳ ತಂದೆ ವ್ರತನೇಮದಿಂ ಮುಂದೆ
ಕಲಿತು ಕಲಿಸುತ ಕಲೆಯ ನೆಲೆಯ ಬೆಳೆಸುವುದು

**(ಭರತನು ಮಕ್ಕಳಿಗೆ ನಾಟ್ಯ ಕಲಿಸುವುದನ್ನು ಪ್ರದರ್ಶಿಸುವುದಿದ್ದಲ್ಲಿ ಸ್ವರಕಲ್ಪನೆ, ಆಲಾಪನೆ ಅಥವಾ ಪಾಟಾಕ್ಷರ ಸಮೂಹಗಳನ್ನು ರಚಿಸಿ ಈ ಕಾವ್ಯಮಾಲೆಯನ್ನು ಪ್ರಯೋಗಕ್ಕಾಗಿ ಬೆಳೆಸಬಹುದು)**

***(ಮುಂದಿನ ಮಾಲಿಕೆಯಲ್ಲಿ ಅಪ್ಸರಸೃಷ್ಟಿ...ನಿರೀಕ್ಷಿಸಿ)***

# ಶ್ರೀರಾಮಾಯಣ ಮಹಾಭಾರತದಲ್ಲಿ ಪಿತಾಪುತ್ರ ಸಂಬಂಧ

*– ಕೀರ್ತಿಶೇಷ ಕೊರ್ಗಿ ವೇಂಕಟೇಶ್ವರ ಉಪಾಧ್ಯಾಯ*



**ಯಕ್ಷಗಾನ ಅರ್ಥಧಾರಿ, ಕಲಾವಿದ, ಪ್ರಸಂಗಕರ್ತ, ಸಾಹಿತಿ, ವಿಮರ್ಶಕ, ಶಿಕ್ಷಕ, ವೇದ ವ್ಯಾಖ್ಯಾನಕಾರ, ದ್ವಿವೇದಿ, ವಿದ್ವಾಂಸ, ಗುರು...ಹೀಗೆ ನಾಮವಿಶೇಷಣಗಳಿಗೆ ಅನ್ವರ್ಥ ಅಭಿದಾನಪ್ರಾಯರಾದ ಕೊರ್ಗಿ ವೇಂಕಟೇಶ್ವರ ಉಪಾಧ್ಯಾಯರ ಭೌತಿಕ ದೇಹ ಮರೆಯಾದರೂ ಅವರ ಬರೆವಣಿಗೆಗಳು, ಅರ್ಥವೈಭವಗಳು ಸದಾ ಮನದಂಗಣದ ನಂದಾದೀಪ. ಇವರ ಒಂದೊಂದು ಲೇಖನಗಳ ಮೌಲ್ಯವೂ ಅವನ್ನು ಹಿಡಿದಿಟ್ಟ ಪದವೈದುಷ್ಯ–ವಾಕ್ಯ ವ್ಯುತ್ಪತ್ತಿ– ಅರ್ಥಗಾಂಭೀರ್ಯಗಳಿಂದ ಬೆಳಗುತ್ತವೆ. ಅವರ ನೆನಪಿಗೆ ಅವರಿಂದಲೇ ಲಿಖಿಸಲ್ಪಟ್ಟ 'ಶ್ರೀರಾಮಾಯಣ ಮಹಾಭಾರತದಲ್ಲಿ ಪಿತಾಪುತ್ರ ಸಂಬಂಧ' ಎಂಬ ವಿಸ್ತಾರವಾದ ಅಧ್ಯಯನಪೂರ್ಣ ಲೇಖನವನ್ನು ಕಂತುಗಳಾಗಿ ಪ್ರಕಟಿಸುತ್ತಿದ್ದೇವೆ. ಕಲಾವಿದರಿಗೆ ಅಂತಃಸ್ಫುರಣೆಯಾಗಬಲ್ಲ ಸನಾತನ ಮೌಲ್ಯ ಪರಂಪರೆಯ ಕಥೆ–ವಾಚಿಕ–ಅರ್ಥವ್ಯುತ್ಪತ್ತಿ–ಅಭಿನಯಾಂಶಗಳ ಗರಿಷ್ಠ ಸಾಧ್ಯತೆಯನ್ನೀಯುವ ಈ ಲೇಖನದ ಪ್ರಯೋಜನವನ್ನು ತಾವು ಪಡೆದುಕೊಳ್ಳುತ್ತೀರೆಂಬ ನಂಬುಗೆ ನಮ್ಮದು. –ಸಂ.**

**ಲೋಕಭ್ರಮರಿ**

ವಿಶ್ವಾಮಿತ್ರರು ರಾಮಲಕ್ಷ್ಮಣರನ್ನು ಅಯೋಧ್ಯೆಯಿಂದ ಸಿದ್ಧಾಶ್ರಮಕ್ಕೆ ಕರೆದುಕೊಂಡು ಹೋಗುವಾಗ ದಾರಿಗಡ್ಡ ಬಂದ ತಾಟಕೆಯನ್ನು ಹೆಣ್ಣೆಂದು ಗಣಿಸಿದೇ ವಧಿಸಬೇಕೆಂದು ರಾಮನಲ್ಲಿ ಹೇಳಿದಾಗ ರಾಮನ ಮಾತು – **ಪಿತುರ್ವಚನನಿರ್ದೇಶಾತ್ ಪಿತುರ್ವಚನ ಗೌರವಾತ್**

**ವಚನಂ ಕೌಶಿಕಸ್ಯೇತಿ ಕರ್ತವ್ಯಮವಿಶಂಕಯಾ**
**ಅನುಶಿಷ್ಯೇಸ್ಮ್ಯಯೋಧ್ಯಾಯಾಂ ಗುರುಮಧ್ಯೇಮಹಾತ್ಮನಾ**
**ಪಿತ್ರಾದಶರಥೇನಾಹಂ ನಾವಜ್ಞೇಯಂಚ ತದ್ವಚಃ**
**ಸೋಹಂ ಪಿತುರ್ವಚಃ ಶ್ರುತ್ವಾ ಶಾಸನಾದ್ಬ್ರಹ್ಮವಾದಿನಃ**
**ಕರಿಷಮಿನ ಸಂದೇಹಃ ತಾಟಕಾವಧಮುತ್ತಮವತ್ (ರಾಮಾಯಾಣ ಬಾಲಕಾಂಡ 26–2, 3, 4)**

ಭಗವನ್ ನನ್ನ ತಂದೆ ವಸಿಷ್ಠ ವಾಮದೇವಾದಿಗಳ ಸಮಕ್ಷ ನನಗೆ ಆಜ್ಞೆ ಮಾಡಿದ್ದಾರೆ 'ವಿಶ್ವಾಮಿತ್ರನು ಹೇಳಿದಂತೆ ಕೇಳು' ಎಂದು. ಅವರ ಮಾತಿನ ಮೇಲಿನ ಗೌರವದಿಂದ ಹಾಗೂ ಅವರ ಆದೇಶದಿಂದಾಗಿ ನಾನು ತಮ್ಮ ಮಾತನ್ನು ನೆರವೇರಿಸಲೇಬೇಕು. ತಮ್ಮ ಮಾತು ನನ್ನ ಪಾಲಿಗೆ ಪಿತ್ರಾದೇಶ ಹೀಗೆಂದು ಹೇಳಿ ರಾಮ ತಾಟಕೆಯ ಭುಜಗಳನ್ನು ಕತ್ತರಿಸಿದ ಲಕ್ಷ್ಮಣ ಕಿವಿಮೂಗುಗಳನ್ನು ಕತ್ತರಿಸಿ ಕೊನೆಗೆ ರಾಮ ತಾಟಕೆಯನ್ನು ಕೊಂದುಹಾಕಿದ. ಇಲ್ಲಿ ಪುತ್ರನ ಪಿತೃನಿಷ್ಠೆ, ಗೌರವಭಕಿಗಳು ಸುವ್ಯಕ್ತವಾಗುತಿವೆ. ವಿಶ್ವಾಮಿತ್ರರು ರಾಮನನ್ನು ಕಳುಹಿಸುವಂತೆ ಕೇಳಿದಾಗ ದಶರಥನ ಭಯೆ ಕಳವಳಗಳೂ ಪಿತೃ ವಾತ್ಸಲ್ಯವನ್ನು ಸೂಚಿಸುತ್ತವೆ.

ಸುಮಂತ್ರ ಕರೆದಾಗ ರಾಮ ಕೈಕೇಯಿಯ ಅಂತಃಪುರಕ್ಕೆ ಬರುತಾನೆ. ಕೈಕೇಯಿ ವರಗಳ ವಿಷಯವನ್ನು ತಿಳುಹಿಸುತ್ತಾಳೆ.– **ಯಾವತ್ತ್ವಂ ನವನಂಯಾತಃ ಪುರಾದಸ್ಮಾದಭಿತ್ವರೇನ್**

**ಪಿತಾತವನ್ನತೇರಾಮ ಸ್ನಾಸ್ಯತೇ ಭೋಕ್ಷ್ಯತೇಪಿವಾ (ರಾಮಾಯಾಣ ಅಯೋಧ್ಯಾಕಾಂಡ 19–16)**

'ನೀನು ವನವಾಸಕ್ಕೆ ಹೋಗುವತನಕ ದೊರೆ ಸ್ನಾನ ಮಾಡುವುದಿಲ್ಲ, ಊಟ ಮಾಡುವುದಿಲ್ಲ' ಎಂದು ಹೇಳುತ್ತಾಳೆ. ಆಗ ರಾಮನು ಹೇಳುವ ಮಾತು– **ನಹ್ಯತೇ ಧರ್ಮಚರಣಂ ಕಿಂಚಿದಸ್ತಿಮಹತ್ತರಂ**

**ಯ ಪಿತರಿಶುಶ್ರೂಷಾತಸ್ಯವಾ ವಚನಕ್ರಿಯಾ (ರಾಮಾಯಾಣ ಅಯೋಧ್ಯಕಾಂಡ 19–22)**

ತಂದೆಯ ಶೂಶ್ರುಷೆ ಮಾಡುವುದು ಹಾಗೂ ತಂದೆಯ ಮಾತಿನಂತೆ ನಡೆದುಕೊಳ್ಳುವುದು ಇವೆರಡಕ್ಕಿಂತ ಮಿಗಿಲಾದ ಧರ್ಮಾಚರಣೆಯಾವುದಿದೆ? – **ಗವನಂಗಂತುಕಾಮಸ್ಯ ತ್ಯಜತಶ್ಚವಸುಂಧರಾಂ**

**ಸರ್ವಲೋಖಾತಿಗಸ್ಯೇವ ಲಕ್ಷ್ಯತೇ ಚಿತ್ತವಿಕ್ರಿಯಾಮ್(ರಾಮಾಯಾಣ ಅಯೋಧ್ಯಕಾಂಡ 19–23)**

ಸಮಸ ಸಾಮ್ರಾಜ್ಯ ತೊರೆದು ವನಾಭಿಮುಖನಾಗಲು ಸಂಕಲ್ಪಿಸಿದ ರಾಮನಿಗೆ ಪರಮ ಯೋಗಿಯಂತೆ ಒಂದಿನಿತೂ ಚಿತ್ತವಿಕಾರ ಉಂಟಾಗಲಿಲ್ಲ. ತಂದೆಯ ಮಾತನ್ನು ನೆರವೇರಿಸುವ ಸಂತೋಷವೇ ಆತನಲ್ಲಿ ತುಂಬಿಕೊಂಡಿತು. ರಾಮ ಕೌಸಲ್ಯೆಯ ಬಳಿಗೆ ಬಂದಾಗ 'ನೀನು ವನಕ್ಕೆ ಹೋದರೆ ನಾನು ಸಾಯುತ್ತೇನೆ' ಎನ್ನುತ್ತಾಳೆ. 'ನಾನೂ ನಿನ್ನೊಂದಿಗೆ ಬರುತ್ತೇನೆ' ಎಂದು ಗೋಳಾಡುತ್ತಾಳೆ.

**(37ನೇ ಪುಟಕ್ಕೆ..,)**

## ಅಂಗಳದ ಮಾತು ತಿಂಗಳ ಚರ್ಚೆ

**ಪ**ತ್ರಿಕೆಯ ಸಂ 8/2 ಚೈತ್ರವೈಶಾಖ ಸಂಚಿಕೆಯಲ್ಲಿ ಮಹತ್ತ್ವದ ಹಲವು ವಿಚಾರಗಳಿವೆ. ಈ ಕುರಿತು ಮತ್ತು ನಮ್ಮ ಮೂಲಕ ಸಂಶೋಧನ ಚರ್ಚೆಗಳಿಗಾಗಿ ಅಭಿನಂದನೆ, ಕೃತಜತೆ.

ಹಿರಿಯ ವಿದ್ವಾಂಸರಾದ ಡಾ.ಎಚ್.ಎಸ್.ಗೋಪಾಲರಾಯರು ಮತ್ತು ಶತಾವಧಾನಿ ಡಾ.ಆರ್. ಗಣೇಶರು ಮುಖ್ಯವಾದ ಕೆಲವು ವಿಚಾರಗಳನ್ನು ಮುಂದಿಟ್ಟಿದ್ದಾರೆ. ನೃತ್ಯಸಂಶೋಧನೆಯ ಅಕೆಡೆಮಿಕ್ ಮಹತ್ತ್ವ, ಏಕಾಹಾರ್ಯಪ್ರದರ್ಶನದ ಅನಿವಾರ್ಯತೆಗಳ ಕುರಿತು ಅವರ ವಿಚಾರಗಳು ಮನನೀಯ. ನೃತ್ಯನಾಟಕ (ಪಾರಂಪರಿಕ ಆಟಗಳು, ಕೂತುಕಲಾಪಗಳು)ಗಳಿಗೆ ಸ್ಥಿತ್ಯಂತರ ದುಸ್ಥಿತಿ ಬಗ್ಗೆ ಆರ್ ಗಣೇಶರು ಬರೆಯುವುದು ಸಾರಭೂತ, ಸೂತ್ರಪ್ರಾಯ. ನಮ್ಮಲ್ಲಿ ರಸಾಭಿವ್ಯಕ್ತಿ ಉದ್ದೇಶದ, ಗಂಭೀರ ಸುಧಾರಣೆ ಪ್ರಯೋಗ ಬಂದಾಗ 'ಇದು ಪರಂಪರೆ ಅಲ್ಲ' ಅನ್ನುವವರು ಪರಂಪರಾಗತರಂಗಗಳನ್ನು ಅಂಗಭಂಗ ಮಾಡುವ ಉಧ್ವಸ್ತಕ್ರಿಯೆಯ ಬಗ್ಗೆ ಮಾತಾಡುವುದಿಲ್ಲ. ಐಟಂ'ರೂಪದ ಫ್ಯಾನ್ಸಿ ತಯಾರಿ ಪ್ರಾಡಕ್ಟ್‌ಗಳ ಬಗ್ಗೆ ಹೇಳುವುದಿಲ್ಲ. 'ಎಲ್ಲರನ್ನೂ ಬಿಡಿ, ಒಳ್ಳೆ ಕೆಲಸ ಮಾಡಿದವನನ್ನು ಹೊಡಿ' ಎಂಬಂತಿದೆ.

ರಂಗಾನುಗತ ಸಂಗೀತ ಹೋಗಿ, ತೀರಾ ಕಲಾವಿದಕೇಂದ್ರಿತವಾಗುತ್ತಿದೆ. ಉದ್ದೇಶಗಳು ಅಸ್ಪಷ್ಟ. ಆರಾಧನೆ, ತೋರ್ಪಡಿಕೆ ಮುಖ್ಯವಾಗಿದೆ. ಕೌಶಲ ಇದೆ, ಪರಿಣತಿ ಇದೆಯಾ? ಎಷ್ಟು? ಗೋಪಾಲರಾಯರು, ಗಣೇಶರು ಬಂದರೂ–ನಿಶ್ಚಿತ ವಿನ್ಯಾಸ (ಫಿಕ್ಸಡ್ ಪಾರ್ಮಟ್), ಮೈಂಡ್ ಸೆಟ್, ರೆಡಿಮೇಡ್‌ಗಳಿಗೇನು ಮದ್ದು ಸಾಧ್ಯವೇ? ಯೋಚನೀಯ, ಚಿಂತನೀಯ.

ಡಾ.ಬಿ.ವಿ.ವೆಂಕಟಾಚಲ ಶಾಸ್ತ್ರಿ, ಪ್ರೊ ಪಿ.ವಿ ಕೃಷ್ಣಭಟ್ಟರು ನೀಡಿದ ಸಲಹೆ– ಐತಿಹಾಸಿಕ ದ್ರವ್ಯ, ಗಂಭೀರ ಉದ್ದೇಶದ ಕೆಲಸಗಳು ತುಂಬಾ ಚಿಂತನೀಯ. ಅಂಗೀಕಾರಾರ್ಹ. ಈ ಕುರಿತು ಎಲ್ಲರೂ ಮನನ–ಮನ ಮಾಡಲಿ.

ಕಲೆ ಸಾಹಿತ್ಯಗಳ ಬಗೆಗೆ ನಮ್ಮ ನಡುವಿನ ಓರ್ವ ಭರವಸೆಯ ವಿದ್ವಾಂಸ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯರು– ಕಲಾರಹಸ್ಯವನ್ನು ಪ್ರದರ್ಶನದ ಅಂತರಂಗವನ್ನು ಹೊಕ್ಕು ನೋಡುವ ಮರ್ಮಗ್ರಾಹಿ ಲೇಖಕ. ಅವರ ಎರಡೂ ಲೇಖನಗಳು ಚೊಕ್ಕ, ತೀಡಿದ ಬರೆಹಗಳು. ಆದರೆ ಅದೇಕೋ ಅವರ ಭಾಷೆ ತುಸು ಒಂದಷ್ಟು ಕೃತಕ ಅನ್ನಿಸಿದೆ ನನಗೆ. ಡಾ.ಆರ್.ಗಣೇಶರು ಇಂತಹ ಭಾಷೆಯಿಂದ ಬುದ್ಧಿಪೂರ್ವಕ ಹೊರಬರುವಲ್ಲಿ ಯಶಸ್ವಿಯಾಗುತ್ತಿದ್ದಾರೆ.

ಒಟ್ಟು ನಿಮ್ಮ ಸಂಘಟನೆಯ, ಪತ್ರಿಕೆಯ ಕೆಲಸ ಉತ್ತಮಮಟ್ಟದ್ದು. ಎಲ್ಲೆಲ್ಲೂ 'ಪಿಕ್ಚರ್'ಸಂಕ್ರಾಂತಿಯಲ್ಲಿ ಮರೆತ ಮಾಧ್ಯಮಗಳಲ್ಲಿ ಅದರದ್ದೇ ಆರಾಧನೆ ಆಗುತ್ತಿರುವಾಗ ನಿಮ್ಮ ಯತ್ನ ದೊಡ್ಡ ಸವಾಲು.

ಅಕೆಡೆಮಿಕ್ ಪತ್ರಿಕೆಯ ಭಾಷೆ ಇನ್ನಷ್ಟು ಸೌಮ್ಯ, ಶೈಕ್ಷಣಿಕ ಇರಲಿ ಎಂಬುದು ನನ್ನ ಅನಿಸಿಕೆ. ಪ್ರಶಸ್ತಿ ಬಗ್ಗೆ ಒಂದು ಮಾತು. ಬಿರುದು ಕೊಡುವಿಕೆ ಬೇಕೇ? ಅದು ಈ ಕಾಲಕ್ಕೊಪ್ಪುವ ಪರಿಕಲ್ಪನೆಯೇ? ಬಿರುದುಗಳಲ್ಲಿ ಭೂಷಣಗಳಾಗಿ ಹೆಸರುಗಳ ಭಾಗವಾಗಿ ರಾರಾಜಿಸುತ್ತಿರುವುದನ್ನು ನೋಡುತ್ತಿದ್ದೇವೆ. ಅದೇಕೋ ಕಸಿವಿಸಿಯಾಗುತ್ತದೆ.

**– ಡಾ. ಪ್ರಭಾಕರ ಜೋಷಿ, ಹಿರಿಯ ಯಕ್ಷಗಾನ ವಿದ್ವಾಂಸರು; ಲೇಖಕ–ಸಂಶೋಧಕರು, ಮಂಗಳೂರು.**

### ನಿಮ್ಮ ಬರಹ ನಮ್ಮ ಓದು...

ಮಾನ್ಯರೇ, ಗೆಜ್ಜೆಯ ಗಿಣಿಗಿಣಿಯನ್ನು ಯಾರಿಗೂ ಮೋಹಿಸುವಂತೆ ಮಾಡಿ ನೃತ್ಯ ಕಲಿಯದವರನ್ನೂ ಕಲಿಯುವಂತೆ ಪ್ರೋತ್ಸಾಹಿಸುವುದು, ಅವರಿಂದ ಅಪಾರ ಪ್ರೀತಿ ಸಂಪಾದಿಸುವುದು ಮಹೋನ್ನತ ಗುಣವಾಗಿದೆ. ಇದು ಊಟಕ್ಕೆ ಆಹ್ವಾನಿಸಿ ಮೃಷ್ಟಾನ್ನ ಭೋಜನವನ್ನೇ ಪ್ರಾಪ್ತಿಯಾಗಿಸುವ ಮಟ್ಟಿನ ಪುಣ್ಯದ ಕೆಲಸ. 'ಗೆಜ್ಜೆ' ಎಂಬ ಅಭಿದಾನದಲ್ಲಿ ಯಾರನ್ನೂ ನರ್ತಿಸುವಂತೆ ಮಾಡುವ ಪತ್ರಿಕೆ ನಿಮ್ಮದು.

**– ಮಾಸ್ಟರ್ ವಿಠಲ್, ಹಿರಿಯ ನೃತ್ಯಗುರು, ಮಂಗಳೂರು**

# Guidelines for submitting the Dance Research Articles

Noopura Bhramari (R.), Karnataka - one of the premier institutions of research and publication in India, proposes to address a long felt, un-spelt academic need. This is devoted exclusively to the promotion of publication, advanced research and scholarship on Dance and allied arts as well as to developing requisite resources in Art for research in all the areas of human endeavor including the sciences.

The long felt lacuna in the dance research arena has been about its holistic integrated approach in encompassing all its allied forms (beyond the performing arts as well) including literature, music, theatre, sculpture, painting, art history etc. This missing link is hoped and strived to be re-established through Noopura Bhramari. Thus organisation is planned to publish research articles, reflecting on in depth studies, methodological research, openings and opportunities in the field of dance and its traditions. For that purpose Noopura Bhramari magazine got a new face as a Journal with prestigious ISSN publication no. which is compulsory need for any research paper publication.

Herewith we are happy and honored to announce and welcome the Qualitative Research articles on any theme of Dance and allied art forms which contributes to the field. It is a call for those desirous research scholars/ students (Ph.D., M.Phil., MA) Gurus/artistes/authors/students/professionals who wish to publish their research articles on new ideas/initiatives/findings. It is a small contribution to the needy research community towards developing a fertile field for the future as well.

**Rules and regulations**

1. Specialization in subject is needed through thorough research. All articles are subject to review by the designated referees. If the research paper is presented/ published in any other ways, such papers will be withheld from publishing.

2. Article should include title, author's affiliation (incase of co-researchers involved), objectives of research of chosen subject, methodology adopted, sources etc., exhaustively along with a bio-data attached giving details of background of the research work done , contact address, e-mail id, phone no etc, of the applicant.

3. Each article to be appended with detailed notes, typed in double space, or 1.5 space; numbered serially and should not exceed 10,000 words (strictly). Article should not carry un-wanted paragraphs which is not related to research topic done by the candidate. The review article should not exceed 4,000 words. Article should specify its research objectives/goals and used methodology either separately or beginning of the Article. Primary and secondary source to be mentioned.

4. References should be typed at the end of article; Citations should appear alphabetically. Multiple citations for the same author are distinguished.

5. Style of reference to be in specific style like APA style, MLA style etc; depending upon the area of research. Figures and tables to be on separate sheets of paper and numbered.Article should use the langauge either Kannada or English.

6. Copyright Permission for charts, pictures and photographs from other published works to be mentioned. Photos and charts ( if sending through mail) should be in

proper high resolution. Photos to be sent by Author of Article. No substitute.

7. Credits/acknowledgements to be given properly. No repetition in the subject is encouraged. If such cases are seen, immediately the paper will be withheld.

8. Personal meddling with the selection process is totally discouraged. However, those desirous of availing guidance can contact the editorial committee. The articles on new ideas which contributes for the tradition and performance of dance also welcome. But it should fulfill the need of the concepts/topic.

9. Decision of the Selection committee will be final. The sub-standard papers will be rejected.

10. Donation are accepted at utmost gratitude and acknowledged in journal on their sponsorship category.Account Number details : Federal bank Ltd, Puttur. Noopura Bhramari- 18940100002234 ;IFSC code : FDRL0001894. All correspondence, enquiry is addressed to the Noopura Bhramari (R.)

**E-mail : editor@noopurabhramari.com ; www.noopurabhramari.com**

**Mobile No : Editor- 9964140927**

**(34ನೇ ಪುಟದಿಂದ..,)**

ಲಕ್ಷ್ಮಣನು ‘ದಶರಥನನ್ನೇ ನಿಗ್ರಹಿಸಿ ನಿನ್ನನ್ನು ಸಿಂಹಾಸನದಲ್ಲಿ ಕೂರಿಸುತ್ತೇನೆ’ ಎನ್ನುತ್ತಾನೆ. ಆಗ ರಾಮ ಹೇಳುವ ಮಾತು–

**ನಾಸ್ತಿಶಕ್ತಿಃ ಪಿತುರ್ವಾಕ್ಯಂ ಸಮತಿಕ್ರಮಿತುಂ ಮಮ**
**ಪ್ರಸಾದಯೇ ತ್ವಾಂಗಿರಸಾಗಂತುಮಿಚ್ಛಾಮ್ಯಹಂ ವನವತ್ (ರಾಮಾಯಾಣ ಅಯೋಧ್ಯಕಾಂಡ 21–30)**

‘ಅಪ್ಪನ ಮಾತನ್ನು ಮೀರುವ ಶಕ್ತಿ ನನಗಿಲ್ಲ. ತಲೆಬಾಗಿ ಬೇಡುತ್ತೇನೆ ಅಪ್ಪಣೆ ಕೊಡು.’

**ಋಷೀಣಚ ಪಿತುರ್ವಾಕ್ಯಂ ಕುರ್ವತಾವ್ರತಚಾರಿಣಾ**
**ಗೌರ್ಹತಾ ಜಾನತಾಧರ್ಮಂ ಕಂಡುನಾಪಿ ವಿಪಶ್ಚಿತಾ ॥ ರಾಮಾಯಾಣ ಅಯೋಧ್ಯಕಾಂಡ 31)**
**ಅಸ್ಮಾಕಂಚ ಕುಲೇಪೂರ್ವಾಂ ಸಗರಸ್ಯಾಜ್ಞಯಾಪಿತುಃ ।**
**ಖನದ್ಭಿಃ ಸಾಗರೈಃ ಭೂಮಿಮಾವಾಪ್ತಃ ಸುಮಹಾನ್ವಧಃ ॥ ರಾಮಾಯಾಣ ಅಯೋಧ್ಯಕಾಂಡ 32)**
**ಜಾಮದಶ್ಯೇನರಾಮೇಣ ರೇಣುಕಾ ಜನನೀಸ್ವಯಂ**
**ಕೃತ್ತಾ ಪರಶುನಾರಣ್ಯೇ ಪಿತುರ್ವಚನಕಾರಿಣೌ ॥ ರಾಮಾಯಾಣ ಅಯೋಧ್ಯಕಾಂಡ 33)**

‘ಕಂಡುಮಹರ್ಷಿಯು ಅಪ್ಪನ ಮಾತುಳಿಸಲು ಗೋಹತ್ಯೆ ಮಾಡಿದ. ನಮ್ಮ ಕುಲದ ಸಗರಪುತ್ರರು ತಂದೆಯ ಅಪ್ಪಣೆಯಂತೆ ಕುದುರೆಯನ್ನರಸುತಾ ಭೂಮಿಯನ್ನಗೆದು ಸಾಗರವನ್ನು ನಿರ್ಮಿಸಿ ಕಪಿಲನ ಕ್ರೋಧಕ್ಕೆ ತಮ್ಮ ಪ್ರಾಣವನ್ನೇ ಅರ್ಪಿಸಿದರು. ಭಾರ್ಗವರಾಮ ತಂದೆಯ ಪ್ರೀತಿಗಾಗಿ ತಾಯಿಯ ಕೊರಳನ್ನೇ ಕೊಡಲಿಯಿಂದ ಕತ್ತರಿಸಿದ– ಈ ಉದಾಹರಣೆಗಳು ಇರುತ್ತಿರಲು ನಾನು ಎಂದಿಗೂ ತಂದೆಯ ಮಾತನ್ನು ಮೀರಲಾರೆ. ನೀನು ನನ್ನೊಡನೆ ಬರಕೂಡದು. ಪಿತೃಸೇವೆಯೇ ನಿನಗೆ ಧರ್ಮ’ ಎನ್ನುತ್ತಾನೆ. ಆದರೆ ಒಂದೇ ತಂದೆಯ ಮಕ್ಕಳಾದರೂ ರಾಮನ ನೆರಳಿನಂತೆ ಲಕ್ಷ್ಮಣನಿದ್ದರೂ ಆತ ರಾಮನಿಗಿಂತ ಭಿನ್ನವಾಗಿ ಆಲೋಚಿಸುತ್ತಾನೆ. ಅದಕ್ಕೆ ಕಾರಣ ಆತನಿಗೆ ಅಣ್ಣನ ಮೇಲಿರುವ ಪ್ರೀತಿ. ಆ ಅಪಾರ ಪ್ರೀತಿಯೇ ದಶರಥನ ಬಗೆಗೆ ಕಟುವಾದ ಮಾತನ್ನು ಲಕ್ಷ್ಮಣನಿಂದ ಆಡಿಸುತ್ತದೆ. ದಶರಥನಾದರೂ ರಾಮಲಕ್ಷ್ಮಣರು ತೆರಳಿದ ಬಳಿಕ ಪುತ್ರವಿರಹ ತಾಳಲಾಗದೇ ಪ್ರಾಣವನ್ನೇ ಬಿಡುತ್ತಾನೆ.

ಇದಕ್ಕೆ ಕೊಂಚ ವ್ಯತಿರಿಕವಾಗಿ ವಿಭಾಂಡಕಮುನಿ ಸ್ತ್ರೀಯರ ಸಂಸ್ಪರ್ಶವಾಗದಂತೆ ಋಷ್ಯಶೃಂಗನನ್ನು ಬೆಳೆಸಿದನಾದರೂ ರೋಮಹರ್ಷಣ ಮಹಾರಾಜನ ಉಪಾಯದಿಂದ ಆತನ ಬಯಕೆ ವಿಫಲವಾಯ್ತು. ಋಷ್ಯಶೃಂಗ ಗೃಹಸ್ಥನಾದ.

**( ಮುಂದಿನ ಸಂಚಿಕೆಯಲ್ಲಿ ನಿರೀಕ್ಷಿಸಿ.. ಮಹಾಭಾರತದಲ್ಲಿ ಪಿತಾಪುತ್ರಸಂಬಂಧ)**

## ಚಂದಾ ವಿವರ

ನೂಪುರ ಭ್ರಮರಿ ಲಾಭಾಂಶದ ಬಗ್ಗೆ ಆಗ್ರಹವಿಲ್ಲದ ಪತ್ರಿಕೆಯಾದರೂ ಖರ್ಚು–ವೆಚ್ಚಗಳನ್ನು ಸರಿದೂಗಿಸುವುದು ಅಷ್ಟು ಸುಲಭದ ಮಾತಲ್ಲ ಎಂಬುದು ನಿಮಗೆ ತಿಳಿದೇ ಇದೆ. ಅಷ್ಟಕ್ಕೂ ಪ್ರಾರಂಭಿಕ ವರ್ಷಗಳಿಂದಲೂ ಚಂದಾ ವಿವರ ಕಡ್ಡಾಯವಾಗಿರಲಿಲ್ಲ; ಫಲವಾಗಿ ಎಷ್ಟೋ ಬಾರಿ ಸಂಚಿಕೆಗಳನ್ನು ಉಚಿತವಾಗಿಯೇ ಕಳಿಸಿಕೊಟ್ಟದ್ದಿದೆ. ಆದರೆ ಪತ್ರಿಕೆಗೆ ಅದರದ್ದೇ ಆದ ಜವಾಬ್ದಾರಿ, ಸಮಸ್ಯೆಗಳಿರುವ ಕಾರಣ ಉಚಿತವಾಗಿ ಕಳಿಸಿಕೊಡುವುದು ಅಥವಾ ಗೌರವಪ್ರತಿ ನೀಡುವುದು ಎಲ್ಲಾ ಸಂದರ್ಭದಲ್ಲಿ ಸಾಧ್ಯವಿಲ್ಲ. ಆದ್ದರಿಂದ ಕೆಳಕಂಡ ಚಂದಾವಿವರಗಳನ್ನು ಲಕ್ಷಿಸಿ 'ಸಂಪಾದಕರು, ನೂಪುರ ಭ್ರಮರಿ' ಹೆಸರಿಗೆ ಡಿ.ಡಿ/ಮನಿಯಾರ್ಡರ್/ಮನಿ ಟ್ರಾನ್ಸ್ಫರ್‌ನಲ್ಲಿ ಮೊತ್ತವನ್ನು ಕಳಿಸಬೇಕೆಂದು ಕೋರುತ್ತೇವೆ. ಚೆಕ್ ಕಳಿಸುವುದಿದ್ದಲ್ಲಿ ಬ್ಯಾಂಕ್ ಕಮಿಷನ್ ಮೊತ್ತ 40/–ರೂ ಹೆಚ್ಚಿಗೆ ಸೇರಿಸಿ ಕಳಿಸಬೇಕೆಂದು ಮನವಿ. ಪತ್ರಿಕೆ, ಪ್ರತಿಷ್ಠಾನಕ್ಕೆ ಬೇರಾವುದೇ ಆದಾಯಮೂಲಗಳಿಲ್ಲದಿರುವುದರಿಂದ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಉದಾರ ದೇಣಿಗೆಗಳನ್ನು ನೀಡಲು ಆಸಕ್ತಿಯಿರುವವರನ್ನೂ ಆದರಪೂರ್ವಕವಾಗಿ ಸ್ವಾಗತಿಸುತ್ತೇವೆ..

ನೂಪುರ ಭ್ರಮರಿಯ ಹಿಂದಿನ ಸಂಚಿಕೆಗಳಲ್ಲಿ ಕೆಲವೇ ಕೆಲವು ಲಭ್ಯವಿವೆ. ಆಸಕ್ತರು ಲಭ್ಯತೆಯನ್ನನುಸರಿಸಿ ಖರೀದಿಸಿ ಪ್ರಯೋಜನ ಪಡೆದುಕೊಳ್ಳಬಹುದು. ಹಿಂದಿನ ಸಂಚಿಕೆಗಳ ಬಿಡಿಪ್ರತಿ ಬೆಲೆ– 20ರೂ. ; ವಿಶೇಷ ಸಂಚಿಕೆ –30ರೂ. ಆಜೀವ ಸದಸ್ಯರಾದಲ್ಲಿ ಅಥವಾ ಮುದ್ರಣ ನಿಧಿಗೆ ಸಹಕರಿಸಿದವರಿಗೆ ಸದಸ್ಯತ್ವದ ದಿನಾಂಕದಿಂದ ಮೊದಲ್ಗೊಂಡು ಆಜೀವ ಪರ್ಯಂತ ಪತ್ರಿಕೆಯನ್ನು ಕಳಿಸಿಕೊಡಲಾಗುವುದು. ಆಜೀವ ಸದಸ್ಯರು/ಮಹಾಪೋಷಕರು ಪತ್ರಿಕೆಯ ಒಟ್ಟಾರೆ ಬೆಳವಣಿಗೆಯ ಹಿನ್ನೆಲೆಯಲ್ಲಿಯೂ ಕೈಜೋಡಿಸಬಹುದಾಗಿದ್ದು; ಪತ್ರಿಕೆಗೆ ಸಂಬಂಧಿಸಿದ ಕಾರ್ಯಕ್ರಮ, ನೀತಿ–ನಿಯಮ ಇತ್ಯಾದಿ ರೂಪುರೇಷೆಗೂ ಜವಾಬ್ದಾರಿಯಾಗಿರುತ್ತಾರೆ. ಅಂತೆಯೇ ಆಸಕ್ತ ಸದಸ್ಯರು ಜಿಲ್ಲಾ ಕೇಂದ್ರಗಳಲ್ಲಿ ಪತ್ರಿಕೆ ಮತ್ತು ಅದರ ಸಂಬಂಧಿತ ಅಂಗಸಂಸ್ಥೆಗಳ ಕಾರ್ಯಕ್ರಮದ ಮೇಲ್ವಿಚಾರಕರಾಗಬಹುದು.

**Bank Details : The Federal Bank Limited, Puttur**
**IFSC Code - FDRL0001894**
**Account Number : Noopura Bhramari 18940100002234;**

ವಾರ್ಷಿಕ ಚಂದಾ : 150 ರೂ/– ದಶವರ್ಷ ಸದಸ್ಯತ್ವ : 1000 ರೂ
ಮುದ್ರಣ ನಿಧಿ ಸಹಾಯ ಧನ : 3,500 (ಪೋಷಕ) ; 5,000 (ಮಹಾಪೋಷಕ)

### ಮುದ್ರಾರ್ಣವ

ಭಾರತೀಯ ನೃತ್ಯಗಳು–ವೇದ–ವಿದ್ಯೆ–ವಿಜ್ಞಾನ–ತಂತ್ರ–ಮಂತ್ರ–ಪುರಾಣ–ಯೋಗ–ವೈದ್ಯ–ಚಿಕಿತ್ಸಾ ವಿಧಾನಗಳಲ್ಲಿ ಕಂಡುಬರುವ ಹಸ್ತ –ಮುದ್ರೆಗಳ ಕುರಿತಾದ ; 1000ಕ್ಕೂ ಮಿಗಿಲು ಹಸ್ತ–ಮುದ್ರೆಗಳ ಆಳ ಅಧ್ಯಯನ, ಶ್ಲೋಕ, ಹಿನ್ನಲೆಯುಳ್ಳ, ಬಹುಮುಖೀ ಚಿಂತನೆಯ ಸಂದರ್ಶನ–ಸಮೀಕ್ಷೆ– ಪುರಾತನ ಗ್ರಂಥ ಪರಾಮರ್ಶನಗಳನ್ನೊಳಗೊಂಡ ವಿದ್ವಾಂಸರ ಮನ್ನಣೆ ಪಡೆದ ಮನೋರಮಾ ಅವರ ಸಂಶೋಧನಾ ಕೃತಿ.

ಬೆಲೆ : 250/– ರೂ. ಸಂಪರ್ಕಿಸಿ. 99641 40927

### ನೃತ್ಯ ಮಾರ್ಗ ಮುಕುರ

'ಶ್ರೀ ಸಾನ್ನಿಧ್ಯ ಪ್ರಕಾಶನ'ದಿಂದ ಅನಾವರಣಗೊಂಡ ಭರತನಾಟ್ಯದ ಮಾರ್ಗಪದ್ಧತಿಯ ಮಜಲುಗಳನ್ನು, ನೃತ್ಯಾಂಗಗಳನ್ನು ದಾಖಲಿಸುವ, ಸಮಗ್ರ ಸಂಕ್ಷಿಪ್ತ ವಿವರವನ್ನೀಯುವ 160 ಪುಟಗಳ ನೃತ್ಯ ಸಂವೇದನೆಯ ಕೃತಿ. ಲೇಖಕಿ: ಮನೋರಮಾ ಬಿ.ಎನ್. ಇದು ಆಸಕ್ತ ಸಹೃದಯರ ಪಾಲಿಗೆ ಸಾಕಲ್ಯ ದೃಷ್ಟಿಯ ಅಧ್ಯಯನಸಾಮಗ್ರಿ. ಪುಸ್ತಕದ ಬೆಲೆ: 125ರೂ.

### ನೂಪುರಾಗಮ

*ಭಾರತದ ಪ್ರಥಮ ನೃತ್ಯ ಸಂಶೋಧನ ನಿಯತಕಾಲಿಕೆ.*
ಪ್ರತಿಷ್ಠಿತ ISSN No. ನೋಂದಣಿ ಸಂಖ್ಯೆ ಪಡೆದ ವಿದ್ವಲ್ಲೋಕದ ಅಪೂರ್ವ ವ್ಯಕ್ತಿಗಳ ಲೇಖನ ಸಂಗ್ರಹದ 200 ಪುಟಗಳ ಕೃತಿ. ಬೆಲೆ : 200 ರೂ. ಕೆಲವೇ ಪ್ರತಿಗಳು ಉಳಿದಿವೆ. ಆಸಕ್ತರು ಸಂಪರ್ಕಿಸಿ.